ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ರೇಡಿಯೋ ಪಾರ್ಕ್ ಬಳ್ಳಾರಿ –583102

# ಮಂದಾರ

## ಕನ್ನಡ ವಿಷಯ ಸಂಪದೀಕರಣ ತರಬೇತಿ ಸಾಹಿತ್ಯ

ಪರಿಷ್ಕೃತ



ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು – ಕುವೆಂಪು

**ಮಾರ್ಗದರ್ಶನ**

**ಶ್ರೀಯುತ ರಾಯಪ್ಪರೆಡ್ಡಿ ಪ್ರಾಂಶುಪಾಲರು**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ**
**ರೇಡಿಯೋ ಪಾರ್ಕ್ ಬಳ್ಳಾರಿ –583102**

**ಶ್ರೀಮತಿ ಹನುಮಕ್ಕ**

**ಹಿರಿಯ ಉಪನ್ಯಾಸಕರು, ನೋಡಲ್ ಅಧಿಕಾರಿಗಳು**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ**
**ರೇಡಿಯೋ ಪಾರ್ಕ್ ಬಳ್ಳಾರಿ –583102**

**ಪರಿಷ್ಕೃತ ಸಾಹಿತ್ಯ ರಚನಾ ತಂಡ**

*******************************************************************

**ಶ್ರೀ ಡಾ. ಚಂದ್ರಮೌಳಿ. ಎಸ್**
**ಸಂಪನ್ಮೂಲ ವ್ಯಕ್ತಿಗಳು**
**ಸರ್ಕಾರಿ ಪದವಿಪೂರ್ವ ಕಾಲೇಜು (ಪ್ರೌ.ವಿ) ತೆಕ್ಕಲಕೋಟೆ**
**ಸಿರಗುಪ್ಪ ತಾ.ಬಳ್ಳಾರಿ ಜಿಲ್ಲೆ**

**ಶ್ರೀ ಬಸವರಾಜ ಟಿ.ಎಂ**
**ಸಂಪನ್ಮೂಲ ವ್ಯಕ್ತಿಗಳು**
**ಸರ್ಕಾರಿ ಪ್ರೌಢಶಾಲೆ, ರೂಪನಗುಡಿ**
**ಬಳ್ಳಾರಿ ಪೂರ್ವ ವಲಯ**

**ಶ್ರೀ ಬಸವರಾಜ್. ಸಿ**
**ಸಂಪನ್ಮೂಲ ವ್ಯಕ್ತಿಗಳು**
**ಸರ್ಕಾರಿ ಪ್ರೌಢ ಶಾಲೆ, ತಾಳೂರು**
**ಸಂಡೂರು (ತಾ) ಬಳ್ಳಾರಿ (ಜಿ)**

**ಶ್ರೀ ರವಿ ಆರ್.**
**ಸಂಪನ್ಮೂಲ ವ್ಯಕ್ತಿಗಳು**
**ಸರಕಾರಿ ಪ್ರೌಢ ಶಾಲೆ ಎಂ. ಸೂಗೂರು**
**ಸಿರುಗುಪ್ಪ (ತಾ) ಬಳ್ಳಾರಿ(ಜಿ)**

**ಶ್ರೀ ಹುಲಿಯಪ್ಪ**
**ಸಂಪನ್ಮೂಲ ವ್ಯಕ್ತಿಗಳು**
**ಸರ್ಕಾರಿ ಪ್ರೌಢಶಾಲೆ ಕೋಳೂರು**
**ಬಳ್ಳಾರಿ ಪಶ್ಚಿಮ ವಲಯ**

## ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಸೇತುಬಂಧ ಶಿಕ್ಷಣ (Bridge Course) | 4–15 |
| 2 | ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ<br>(Continuous and Comprehensive Evaluation – CCE)<br>1. ಚಟುವಟಿಕೆಗಳು<br>2. ಮೌಲ್ಯಮಾಪನ<br>3. ದಾಖಲೆ ನಿರ್ವಹಣೆ | 15–24 |
| 3 | ರಚನಾವಾದ ಮತ್ತು 5E- ತರಗತಿ ಪ್ರಕ್ರಿಯೆ | 25–31 |
| 4 | ಗದ್ಯ ಸಾಹಿತ್ಯ ಬೋಧನೆ | 32–42 |
| 5 | ಪದ್ಯ ಸಾಹಿತ್ಯ ಬೋಧನೆ | 42–46 |
| 6 | ಭಾಷಾ ಆಟಗಳು | 46–50 |
| 7 | ಕನ್ನಡ ಸಾಹಿತ್ಯದ ಸಾಹಿತಿಗಳ ಸ್ವಾರಸ್ಯ(ಔಚಿತ್ಯ)ಗಳು | 50–57 |
| 8 | ಶಿಕ್ಷಣದಲ್ಲಿ ತಂತ್ರಜ್ಞಾನ ಮತ್ತು ಆಪ್‌ಗಳ ಬಳಕೆ | 58–60 |

# 1. ಸೇತುಬಂಧ ಶಿಕ್ಷಣ (Bridge Course)

**ಹಿನ್ನೆಲೆ** :'ಬದಲಾವಣೆಯೇ ಪ್ರಗತಿಯ ಸಂಕೇತ ' ಎಂಬುದೊಂದು ಉಕ್ತಿ. ಇಂದು ಶಿಕ್ಷಣ ಕ್ಷೇತ್ರವು ನಿಂತ ನೀರಾಗಿರದೆ ಹಲವು ಅವಿಷ್ಕಾರಗಳಿಗೆ ಒಳಗಾಗಿರುವ ಕ್ಷೇತ್ರವಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಚಿಂತನೆಯನ್ನು ಹುಟ್ಟು ಹಾಕಿದವು. ಕಲಿಯುವ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಬೇಕು. ದಾಖಲಾದ ಮಕ್ಕಳು ಶಾಲೆಯಲ್ಲಿಯೇ ಉಳಿಯಬೇಕು. "ಶಾಲೆಯಲ್ಲಿ ಉಳಿದ ಮಕ್ಕಳಲ್ಲಿ ಗುಣಾತ್ಮಕ ಹಾಗೂ ಪ್ರಭುತ್ವಮಟ್ಟದ ಕಲಿಕೆಯಾಗಬೇಕು" ಎಂಬುದು ಇವುಗಳ ಗುರಿಯಾಗಿದೆ. ಈ ಗುರಿ ಸಾಧನೆಗೆ ಹಲವೆಂಟು ಪ್ರೇರಕ ಯೋಜನೆಗಳು ಜಾರಿಯಲ್ಲಿದ್ದು, ಪ್ರಗತಿದಾಯಕ ದಿಸೆಯಲ್ಲಿ ಸಾಗುತ್ತಿದೆ. ಆದರೆ ಗುಣಾತ್ಮಕ ಶಿಕ್ಷಣ ಹಾಗೂ ಪ್ರಭುತ್ವಮಟ್ಟದ ಕಲಿಕೆಯ ಗುರಿಯನ್ನು ನಿರೀಕ್ಷಿತ ಮಟ್ಟದಲ್ಲಿ ತಲುಪಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿರುವ ಕಲಿಕಾ ದೋಷಗಳು ಹಾಗೂ ಕಲಿಕಾ ಕಂದರಗಳು. ವಿದ್ಯಾರ್ಥಿಗಳು ಒಂದು ಶೈಕ್ಷಣಿಕ ಹಂತ ಮುಗಿಸಿದ ನಂತರ ಆ ಶೈಕ್ಷಣಿಕ ಹಂತದಲ್ಲಿ ಗಳಿಸಬೇಕಾಗಿರುವ ಸಾಮರ್ಥ್ಯಗಳನ್ನು ಗಳಿಸದೆ ಮುಂದಿನ ಶೈಕಣಿಕ ಹಂತಕ್ಕೆ ಬರುತ್ತಿರುವುದು. ಇದು ಕಲಿಕಾ ಪ್ರಗತಿಗೆ ತೊಡಕಾಗಿದ್ದು, ಇದನ್ನು ಪರಿಹರಿಸಲು 'ಸೇತುಬಂಧ ಶಿಕ್ಷಣ'ವನ್ನು ಜಾರಿಗೊಳಿಸಿ, ಕಡ್ಡಾಯಗೊಳಿಸಿ, ನಿರ್ದೇಶಿಸಲಾಗಿದೆ ಹಾಗೂ ಶಾಲಾ ಶೈಕ್ಷಣಿಕ ಯೋಜನೆಯಲ್ಲಿ ಇದಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. 'ಗುಣಾತ್ಮಕ ಶಿಕ್ಷಣದೆಡೆಗೆ ನಮ್ಮ ನಡಿಗೆ ' ಎಂಬ ಧ್ಯೇಯವಾಕ್ಯದೊಡನೆ ಸೇತಬಂಧ ಶಿಕ್ಷಣ ಎಂದರೇನು? ಅದು ಏಕೆ ಬೇಕು? ಅದನ್ನು ಹೇಗೆ ಕಾರ್ಯರೂಪಕ್ಕೆ ತರಲಾಗುತ್ತದೆ ಎಂಬುದನ್ನು ಅರ್ಥೈಸಿಕೊಳ್ಳುವುದರ ಮೂಲಕ ಗುರಿಸಾಧನೆಯೆಡೆಗೆ ನಮ್ಮ ನಡಿಗೆ ಸಾಗಬೇಕಾಗಿದೆ.

**'ಸೇತುಬಂಧ ಶಿಕ್ಷಣ' ಎಂದರೇನು?**

ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಚಿಕಿತ್ಸಾ ರೂಪದಲ್ಲಿ ಪುನಶ್ಚೇತನವಾಗಿ ಮಕ್ಕಳ ಕಲಿಕಾ ಮಟ್ಟವನ್ನು ಗುರುತಿಸಿ ಮುಂದಿನ ಕಲಿಕೆಗೆ ಸಿದ್ಧಗೊಳಿಸುವ ಚಟುವಟಿಕೆಯೇ 'ಸೇತುಬಂಧ ಶಿಕ್ಷಣ'. ಶಾಲೆಗೆ ಸೇರಿದ ಕೂಡಲೆ ಒಂದು ನಿಧಾನ ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿ,ಅವರಲ್ಲಿರುವ ಕಲಿಕೆಯ ಲೋಪಗಳು, ತಪ್ಪುಗಳು ಮತ್ತು ಕೊರತೆಗಳನ್ನು ಪತ್ತೆಮಾಡಿ ಯಥಾಶಕ್ತಿ ಪರಿಹರಿಸುವ ಕಾರ್ಯಕ್ರಮವಾಗಿದೆ.

**'ಸೇತುಬಂಧ ' ಪದದ ಅರ್ಥ.**

ಸೇತು ಬಂಧ ಪದವು 'ಸೇತು' ಮತ್ತು 'ಬಂಧ' ಎಂಬ ಎರಡು ಪದಗಳಿಂದ ಕೂಡಿದೆ. 'ಸೇತು' ಎಂದರೆ ಎರಡು ದಡಗಳ ನಡುವಿನ ಸಂಪರ್ಕಸಾಧನ ಎಂದು ಅರ್ಥ. 'ಬಂಧ' ಎಂದರೆ ಕೂಡಿಸುವುದು, ಸೇರಿಸುವುದು ಎಂದು ಅರ್ಥ. ಅಂದರೆ ಎರಡು ದಡಗಳ ನಡುವೆ ಸಂಪರ್ಕ ಕಲ್ಪಿಸುವ ಕೂಡಿಸುವ ಸಾಧನವೆಂದಾಗುತ್ತದೆ. ಶೈಕ್ಷಣಿಕ ಅರ್ಥದಲ್ಲಿ ಹೇಳುವುದಾದರೆ ಹಿಂದಿನ ಸಾಧನೆ ಮತ್ತು ಮುಂದಿನ ಗುರಿಗಳ ನಡುವೆ ಸಂಬಂಧ ಕಲ್ಪಿಸುವುದು. ಕಲಿತಿರುವುದರ ಹಾಗೂ ಕಲಿಯಬೇಕಾಗಿರುವುದರ ನಡುವೆ ಸಂಬಂಧ ಕಲ್ಪಿಸುವುದು ಎಂದು ಅರ್ಥೈಸಬಹುದಾಗಿದೆ. ಒಟ್ಟಿನಲ್ಲಿ ಸೇತುಬಂಧ ಶಿಕ್ಷಣವೆಂದರೆ "ಒಂದು ತರಗತಿಗೆ ಪ್ರವೇಶ ಪಡೆದ ಮಗುವು ಹಿಂದಿನ ತರಗತಿಯಲ್ಲಿ ಗಳಿಸಿದ ಸಾಮರ್ಥ್ಯ ಕಲಿಕೆಯ ಗುಣದೋಷಗಳನ್ನು ಗುರುತಿಸಿ ಮುಂದಿನ ಕಲಿಕೆಗೆ ಸಿದ್ಧಗೊಳಿಸುವ ಚಟುವಟಿಕೆ " ಆಗಿದೆ.

**ಸೇತುಬಂಧ ಶಿಕ್ಷಣದ ಉದ್ದೇಶಗಳು**

1. ಕಲಿಕಾ ಪೂರ್ವ ತರಬೇತಿ.
2. ಕಲಿತ ವಿಷಯಗಳ ಪುನರ್ಮನನ ಪ್ರಕ್ರಿಯೆ.
3. ಪೂರ್ವಜ್ಞಾನದ ಸ್ಮರಣೆಯ ಮೂಲಕ ಪ್ರಸ್ತುತ ಕಲಿಕೆಗೆ ಸಿದ್ಧಗೊಳಿಸುವುದು.
4. ಕಲಿತಿರುವ ಹಾಗೂ ಕಲಿಯ ಬೇಕಾಗಿರುವುದರ ನಡುವೆ ಸಂಬಂಧ ಕಲ್ಪನೆ.
5. ಪ್ರತಿ ವಿದ್ಯಾರ್ಥಿಯು ಪ್ರತಿ ವಿಷಯದಲ್ಲಿ ಹಿಂದಿನ ತರಗತಿಯಲ್ಲಿ ಗಳಿಸಲೇಬೇಕಾಗಿದ್ದ ಅಗತ್ಯ
6. ಸಾಮರ್ಥ್ಯಗಳನ್ನು ಪ್ರಭುತ್ವಮಟ್ಟದಲ್ಲಿ ಗಳಿಸಿದ್ದಾರೆಯೇ? ಇಲ್ಲವೇ? ಎಂಬುದರ
7. ದೃಢೀಕರಣದೊಂದಿಗೆ ಮುಂದಿನ ಕಲಿಕೆಗೆ ಸಿದ್ಧಗೊಳಿಸುವ ಚಟುವಟಿಕೆ.
8. ಹಿಂದಿನ ತರಗತಿಯಿಂದ ಉತ್ತೀರ್ಣನಾಗಿ ಬಂದ ವಿದ್ಯಾರ್ಥಿಯಲ್ಲಿ ಈಗಿನ ತರಗತಿಯ ಕಲಿಕೆಗೆ
9. ಬೇಕಾದ ಸಾಮರ್ಥ್ಯಗಳು / ಕಲಿಕಾಂಶಗಳು ಎಷ್ಟರಮಟ್ಟಿಗೆ ಇವೆ ಎಂಬುದನ್ನು
10. ದೃಢಪಡಿಸಿಕೊಂಡು ಹೊಸ ಕಲಿಕೆಗೆ ಅವನನ್ನು ಸಿದ್ಧಗೊಳಿಸುವ ಚಟುವಟಿಕೆ.

**ಸೇತುಬಂಧ ಶಿಕ್ಷಣ ಏಕೆ ಬೇಕು?**

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಸೇತುಬಂಧ ಶಿಕ್ಷಣವು ಅತ್ಯವಶ್ಯಕವಾಗಿದೆ. ಏಕೆಂದರೆ –

1. ಭಾಷಾ ಕೌಶಲಗಳು ವಿದ್ಯಾರ್ಥಿಗಳಲ್ಲಿ ಹೇಗೆ ಸಂರಚಿತವಾಗಿವೆ ಮುಂದಿನ ಹಂತದಲ್ಲಿ ಇವುಗಳನ್ನು ಕಲಿಸಲು ಯಾವ ರೀತಿ ಯೋಜನೆಗಳನ್ನು ಸಿದ್ದಪಡಿಸಿಕೊಳ್ಳಬೇಕೆಂದು ತಿಳಿಯಲು ಇದು ಸೇತುಬಂಧ ಬೇಕು.
2. ವಿದ್ಯಾರ್ಥಿಯು ಹಲವು ಕಾರಣಗಳಿಂದ ಹಿಂದಿನ ತರಗತಿಯ ಸಾಮರ್ಥ್ಯಗಳನ್ನು ಪ್ರಭುತ್ವಮಟ್ಟದಲ್ಲಿ ಗಳಿಸಿರುವುದಿಲ್ಲ. ಅವುಗಳನ್ನು ಶಿಕ್ಷಕರು ಪರೀಕ್ಷಿಸಲು ಅತಿಅವಶ್ಯವಾಗಿದೆ.
3. ವಿದ್ಯಾರ್ಥಿಗಳಲ್ಲಿ ವಿಷಯ ಜ್ಞಾನ ಮತ್ತು ಕೌಶಲಗಳ ದೃಷ್ಠಿಯಿಂದ ತುಂಬ ದೋಷ ಹಾಗೂ ಕೊರತೆಗಳು ಕಂಡುಬರುತ್ತಿವೆ. ಅವುಗಳನ್ನು ಕಂಡುಹಿಡಿಯಲು ಅವಶ್ಯವಾಗಿದೆ.
4. ಕಲಿಕಾ ಕೊರತೆ ಮತ್ತು ದೋಷಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಸೂಕ್ತ ಮಾರ್ಗದರ್ಶನ ನೀಡಿ, ಮುಂದಿನ ಕಲಿಕೆಗೆ ಸಿದ್ಧಗೊಳಿಸಲು ಇದು ಪರಿಣಾಮಕಾರಿಯಾಗಿದೆ.
5. ವಿವಿಧ ಪರಿಸರದಿಂದ ಬರುವ ಮಕ್ಕಳ ಕಲಿಕಾ ಮಟ್ಟದಲ್ಲಿ ಕಲಿಕಾ ಅಂತರಗಳಿವೆ. ಆ ಕಲಿಕಾ ಅಂತರವನ್ನು ಕಡಿಮೆ ಮಾಡಬೇಕಾಗಿದೆ.
6. ಸೇತುಬಂಧ ಶಿಕ್ಷಣವು ಕಲಿಯುವವನಿಗೆ ತನ್ನ ಮಟ್ಟವನ್ನು ತಿಳಿದು ಮುಂದಿನ ಕಲಿಕೆಗೆ ಸಿದ್ದನಾಗಲು, ಕಲಿಕಾ ಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತದೆ.
7. ಕಲಿಸುವವನಿಗೆ ತಾನು ಕಲಿಸ ಬೇಕಾಗಿರುವ ವಿದ್ಯಾರ್ಥಿಯಲ್ಲಿರುವ ಕುಂದು ಕೊರತೆಗಳನ್ನು ಮತ್ತು ಸಾಮರ್ಥ್ಯ, ಸಾಧನಾಮಟ್ಟವನ್ನು ತಿಳಿದುಕೊಂಡು ಮುಂದಿನ ಕಲಿಕೆಗೆ ಬೇಕಾಗಿರುವ ರೂಪುರೇಷೆಗಳನ್ನು ಸಿದ್ದಪಡಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತದೆ.
8. ವಿದ್ಯಾರ್ಥಿಗಳ ಗ್ರಹಿಕಾ ಸಾಮರ್ಥ್ಯ ಅರಿಯಲು ಸೇತುಬಂಧ ಬೇಕು.

ಆದುದರಿಂದ ಸೇತುಬಂಧ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕಾಗಿದೆ.

**ಸೇತುಬಂಧ ಶಿಕ್ಷಣವನ್ನು ಹೇಗೆ ಕಾರ್ಯರೂಪಕ್ಕೆ ತರಲಾಗುತ್ತದೆ?**

ಸೇತು ಬಂಧ ಶಿಕ್ಷಣವನ್ನು ಮೂರು ಹಂತಗಳಲ್ಲಿ ಕಾರ್ಯರೂಪ ತರಲಾಗುತ್ತದೆ.

| |
|---|
| **1. ಪೂರ್ವ ಪರೀಕ್ಷೆ / ನೈದಾನಿಕ ಪರೀಕ್ಷೆ (Pre Test / Diagnostic Test)** |
| **2. ಪರಿಹಾರ ಬೋಧನೆ (Remedial Teaching)** |
| **3. ಉತ್ತರ ಪರೀಕ್ಷೆ / ಸಾಫಲ್ಯ ಪರೀಕ್ಷೆ (Post Test / Achievement Test)** |

**1. ಪೂರ್ವಪರೀಕ್ಷೆ / ನೈದಾನಿಕ ಪರೀಕ್ಷೆ (Pre Test / Diagnostic Test)**

ವಿದ್ಯಾರ್ಥಿಗಳು ಈಗಾಗಲೇ ಗಳಿಸಿರುವ ಕಲಿಕಾ ಸಾಮರ್ಥ್ಯ ಮತ್ತು ಕಲಿಕೆಯ ಪ್ರಭುತ್ವಮಟ್ಟವನ್ನು ಗುರುತಿಸಿ ಸೂಕ್ತ ಪರಿಹಾರೋಪಾಯಗಳನ್ನು ಕೈಗೊಳ್ಳಲು ನಡೆಸುವ ಪರೀಕ್ಷೆಯೇ ಪೂರ್ವ ಪರೀಕ್ಷೆ ಅಥವಾ ನೈದಾನಿಕ ಪರೀಕ್ಷೆ. ರೋಗಿಗೆ ರೋಗದ ಗುಣಲಕ್ಷಣಗಳನ್ನು ಕಂಡುಹಿಡಿಯಲು ಹಲವಾರು ರೀತಿಯ ವೈದ್ಯಕೀಯ ಪರೀಕ್ಷೆಗಳನ್ನು (**Diagnostic Test**)ಮಾಡುವಂತೆ ವಿದ್ಯಾರ್ಥಿಗಳಲ್ಲಿನ ಕಲಿಕಾನ್ಯೂನ್ಯತೆಗಳನ್ನು ಕಂಡುಹಿಡಿಯಲು ನೈದಾನಿಕ ಪರೀಕ್ಷೆ ಅವಶ್ಯವಾಗಿದೆ.

**ನೈದಾನಿಕ ಪರೀಕ್ಷೆಯು ಉದ್ದೇಶಗಳು**

1. ಕಲಿಕೆಯ ಕೊರತೆಗಳನ್ನು ಗುರುತಿಸುವುದು.
2. ಕಲಿಕಾ ನ್ಯೂನ್ಯತೆಯ ಚಿಕಿತ್ಸಕ ಹಾಗೂ ಪರಿಹಾರಾತ್ಮಕ ಪರೀಕ್ಷೆಯಾಗಿದೆ.
3. ವಿದ್ಯಾರ್ಥಿಯ ಕಲಿಕೆಯ ಕೊರತೆಗಳನ್ನು / ದೋಷಗಳನ್ನು ಗುರುತಿಸುವುದಲ್ಲದೆ ಅವರ ಪ್ರತಿಭೆ ಮತ್ತು ಉನ್ನತ ಮಟ್ಟದ ಸಾಧನೆಯನ್ನು ಗುರುತಿಸುತ್ತದೆ.
4. ವಿದ್ಯಾರ್ಥಿಗಳು ಕಲಿಕಾ ಕ್ಷೇತ್ರದ ಯಾವ ಭಾಗದಲ್ಲಿ ನ್ಯೂನತೆ / ದೋಷಗಳನ್ನು ಹೊಂದಿದ್ದಾರೆ? ಅದರ ಸ್ವರೂಪವೇನು? ಎಂಬುದನ್ನು ಪತ್ತೆ ಹಚ್ಚಿ, ಕಾರಣಗಳನ್ನು ತಿಳಿದು, ಆ ಕ್ಷೇತ್ರಗಳಲ್ಲಿ ಪ್ರಭುತ್ವ ಗಳಿಸಲು ಸೂಕ್ತ ಪರಿಹಾರೋಪಾಯಗಳನ್ನು ಕೈಗೊಳ್ಳಲು ಮಾರ್ಗದರ್ಶನ ನೀಡುತ್ತದೆ.

5. ವಿದ್ಯಾರ್ಥಿಯು ಪ್ರಸಕ್ತ ಸಾಲಿನಲ್ಲಿ ಓದುತ್ತಿರುವ ತರಗತಿಯ ಕಲಿಕೆಗೆ ಅವಶ್ಯಕವಾಗಿ ಬೇಕಾದ ಸಾಮರ್ಥ್ಯಗಳು / ಕಲಿಕಾಂಶಗಳು ಆತನಲ್ಲಿ ಎಷ್ಟರ ಮಟ್ಟಿಗೆ ಇವೆ ಎಂಬುದನ್ನು ಪತ್ತೆ ಹಚ್ಚಿ ಮುಂದಿನ ಕಲಿಕೆಗೆ ಸಿದ್ಧಗೊಳಿಸಲು ಸಹಕಾರಿಯಾಗುತ್ತದೆ.
6. ವಿಕಾಸಾತ್ಮಕವಾದುದು ಹಾಗೂ ವಿಶಿಷ್ಟ ಉದ್ದೇಶವನ್ನು ಹೊಂದಿದ್ದು ವಿದ್ಯಾರ್ಥಿಗಳ ಕಡೆ ವೈಯಕ್ತಿಕವಾಗಿ ಗಮನ ಹರಿಸುವಂತೆ ಮಾಡುತ್ತದೆ.

**ನೈದಾನಿಕ ಪರೀಕ್ಷೆ ಕಾರ್ಯತಂತ್ರಗಳು**

ಯಾವುದೇ ಗುರಿಸಾಧನೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಳ್ಳಬೇಕಾಗುತ್ತದೆ. ಅದು ಯೋಜನಾಬದ್ಧವಾಗಿದ್ದಾಗ ಮಾತ್ರ ಕಾರ್ಯ ಸುಸೂತ್ರವಾಗಿ ನಡೆಯುತ್ತದೆ ಹಾಗೂ ಉತ್ತಮ ಫಲಿತಾಂಶಗಳನ್ನು ನಿರೀಕ್ಷಿಸಬಹುದಾಗಿದೆ. ನೈದಾನಿಕ ಪರೀಕ್ಷೆಯ ಕಾರ್ಯದ ಹಂತಗಳು ಈ ಕೆಳಕಂಡಂತೆ ಇವೆ.

**1. ಯೋಜನೆ ತಯಾರಿಕೆ (ಪರೀಕ್ಷೆಗೆ ಪೂರ್ವಸಿದ್ಧತೆ)**
**2. ಕಾರ್ಯದ ಅನುಷ್ಠಾನ (ಪರೀಕ್ಷೆಯನ್ನು ನಡೆಸುವುದು)**
**3. ಮೌಲ್ಯಮಾಪನ (ಉತ್ತರ ಪತ್ರಿಕೆಗಳ ಮೌಲ್ಯಮಾಪನ)**
**4. ಮೌಲ್ಯಮಾಪನ ವಿಶ್ಲೇಷಣೆ (ಉತ್ತರ ಪತ್ರಿಕೆಯಲ್ಲಿನ ಉತ್ತರಗಳ ಗುಣದೋಷಗಳ ವಿಶ್ಲೇಷಣೆ)**
**5. ಫಲಿತಾಂಶದ ನಿರ್ಧಾರ (ಸಾಧನೆಯ ಮಟ್ಟ ನಿರ್ಧಾರ)**

**ಯೋಜನೆ ತಯಾರಿಕೆ (ಪರೀಕ್ಷೆಗೆ ಪೂರ್ವಸಿದ್ಧತೆ)**

ವಿದ್ಯಾರ್ಥಿಗಳಲ್ಲಿ ಯಾವ ಯಾವ ಸಾಮರ್ಥ್ಯಗಳನ್ನು ನಿರೀಕ್ಷಿಸುವಿರಿ ಹಾಗೂ ಆ ಸಾಮರ್ಥ್ಯವನ್ನು ಅಳೆಯಲು ಕೈಗೊಳ್ಳುವ ಚಟುವಟಿಕೆಗಳನ್ನು ನಿರ್ಧರಿಸುವ ಹಂತವಿದು.

**(ಅ) ಕಲಿಕಾಂಶಗಳ / ಸಾಮರ್ಥ್ಯಗಳ ಪಟ್ಟಿ ತಯಾರಿಕೆ.**

1. ಹಿಂದಿನ ತರಗತಿಗಳಲ್ಲಿ ಗಳಿಸಿರಲೇ ಬೇಕಾದ ಹಾಗೂ ಮುಂದಿನ ತರಗತಿಗಳಲ್ಲಿ ಮುಂದುವರಿದಿರುವ ಕಲಿಕಾಂಶ / ಸಾಮರ್ಥ್ಯಗಳನ್ನು ಗುರುತಿಸುವುದು.
2. ಗುರುತಿಸಿಕೊಂಡ ಕಲಿಕಾಂಶ / ಸಾಮರ್ಥ್ಯಗಳನ್ನು ಸಮನ್ವಯಗೊಳಿಸಿಕೊಂಡು ಶ್ರೇಣೀಕೃತವಾಗಿ ಜೋಡಿಸಿ ಸಾಮರ್ಥ್ಯಗಳ ಪಟ್ಟಿ ತಯಾರಿಸುವುದು.

**ಉದಾಹರಣೆ : 9ನೆಯ ತರಗತಿ ಪ್ರಥಮ ಭಾಷೆ ಕನ್ನಡ ಸಾಮರ್ಥ್ಯಗಳು /ಕಲಿಕಾಂಶಗಳು**

(ಸಾಧನಾ ಪುಷ್ಟಿ ಸಾಹಿತ್ಯದಲ್ಲಿರುವಂತೆ)

1. ಸಂಯುಕ್ತಾಕ್ಷರಗಳು ಮತ್ತು ಪರಿಚಿತ ಪದಗಳ ಉಕ್ತಲೇಖನ ತೆಗೆದು ಕೊಳ್ಳುವುದು.
2. ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು.
3. ಪದ್ಯಗಳನ್ನು ಓದಿ ಅವುಗಳ ಸಾರಾಂಶಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು.
4. ಸರಳ ವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು.

**10ನೆಯ ತರಗತಿ ಪ್ರಥಮ ಭಾಷೆ ಕನ್ನಡ ಸಾಮರ್ಥ್ಯಗಳು/ಕಲಿಕಾಂಶಗಳು** (ಸಾಧನಾ ಪುಷ್ಟಿ ಸಾಹಿತ್ಯದಲ್ಲಿರುವಂತೆ)

1. ಸಂಯುಕ್ತಾಕ್ಷರಗಳು, ಲೇಖನ ಚಿಹ್ನೆಗಳನ್ನು ಒಳಗೊಂಡಂತೆ ಪರಿಚಿತ ಮತ್ತು ಅಪರಿಚಿತ ಪದಗಳ ಉಕ್ತಲೇಖನ ತೆಗೆದುಕೊಳ್ಳುವುದು.
2. ಕವನ, ಕಾವ್ಯ, ಲಘು ಪ್ರಬಂಧ, ಕಥೆ ಮುಂತಾದ ಸಾಹಿತ್ಯದ ಪ್ರಕಾರಗಳನ್ನು ಓದಿ,ಅರ್ಥಮಾಡಿಕೊಳ್ಳುವುದರೊಂದಿಗೆ ಅವುಗಳ ಬಗ್ಗೆ ಮೌಖಿಕವಾಗಿ ಮತ್ತು ಲಿಖಿತರೂಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸುವುದು.
3. ಹಳಗನ್ನಡ ಪದ್ಯಗಳನ್ನು ಓದಿ ಅವುಗಳ ಸಾರಾಂಶವನ್ನು ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ಸಾಮರ್ಥ್ಯ ಹೊಂದುವುದು.
4. ಸರಳ ವ್ಯಾಕರಣಾಂಶಗಳನ್ನು ಅರ್ಥಮಾಡಿಕೊಳ್ಳುವುದರೊಂದಿಗೆ ಛಂದಸ್ಸಿನ ಪರಿಚಯ ಮಾಡಿಕೊಳ್ಳುವುದು.

**ಸೂಚನೆ :** ಇಲ್ಲಿ ಕೇವಲ ನಾಲ್ಕು ಸಾಮರ್ಥ್ಯಗಳನ್ನು ಮಾತ್ರ ನೀಡಲಾಗಿದೆ. ಅವಶ್ಯವೆಂದು ಕಂಡುಬಂದಲ್ಲಿ ಹೆಚ್ಚಿನ ಸಾಮರ್ಥ್ಯಗಳನ್ನು ಹಾಕಿಕೊಳ್ಳಬಹುದು. ನಾವು ಹಾಕಿಕೊಳ್ಳುವ ಸಾಮರ್ಥ್ಯಗಳು ಹಿಂದಿನ ತರಗತಿಯಲ್ಲಿ ವಿದ್ಯಾರ್ಥಿಗಳು ಗಳಿಸಬಹುದಾಗಿದ್ದ ಸಾಮರ್ಥ್ಯ ಮತ್ತು ಮುಂದಿನ ತರಗತಿಯಲ್ಲಿ ಗಳಿಬೇಕಾದ ಸಾಮರ್ಥ್ಯಗಳನ್ನಾಧರಿಸಿರಬೇಕು.

**(ಆ) ಪ್ರಶ್ನೆಪತ್ರಿಕೆ ರಚನೆ**

ವಿದ್ಯಾರ್ಥಿಗಳನ್ನು ಪರೀಕ್ಷಿಸಲು ನಿರ್ಧರಿಸಲಾದ ಸಾಮರ್ಥ್ಯಗಳಲ್ಲಿನ ಸಾಧನೆಯನ್ನು ಅಳೆಯಲು ಕೈಗೊಳ್ಳುವ ಚಟುವಟಿಕೆಗಳನ್ನು ರೂಪಿಸುವುದೇ ಪ್ರಶ್ನೆಪತ್ರಿಕೆ ರಚನೆ.

**ಪ್ರಶ್ನೆಪತ್ರಿಕೆ ರಚನೆಯಲ್ಲಿ ಅನುಸರಿಸಬೇಕಾದ ನಿಯಮಗಳು.**

1. ಪ್ರಶ್ನೆಗಳು ನಿರ್ಧಾರಿತ ಸಾಮರ್ಥ್ಯ / ಕಲಿಕಾಂಶವನ್ನು ಒರೆ ಹಚ್ಚುವಂತಿರಬೇಕು
2. ಪ್ರತಿ ಕಲಿಕಾಂಶಕ್ಕೆ ಕನಿಷ್ಠ ಮೂರು ಪ್ರಶ್ನೆಗಳಾದರೂ ಇರಬೇಕು.
3. ಪ್ರಶ್ನೆಗಳು ಸಾಮರ್ಥ್ಯ ಪರೀಕ್ಷೆಗೆ ಅನುಗುಣವಾಗಿರಬೇಕು.
4. ಕಲಿಕಾಂಶ / ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಶ್ನೆಗಳು ಕ್ರಮಾಗತವಾಗಿರಬೇಕು.
5. ಇಂತಿಷ್ಟೇ ಪ್ರಶ್ನೆಗಳಿರಬೇಕೆಂಬ ನಿರ್ಬಂಧವಿಲ್ಲ ಆದರೂ ಇಪ್ಪತ್ತು ಪ್ರಶ್ನೆಗಳನ್ನು ಮೀರದಂತಿರಲಿ.
6. ಪ್ರಶ್ನೆಪತ್ರಿಕೆಯು ಅಂಕಗಳನ್ನು ಆಧರಿಸಿ ರಚನೆಯಾಗಿರುವುದಿಲ್ಲ.
7. ಪ್ರಶ್ನೆಗಳಿಗೆ ಸಮಯವನ್ನು ನಿಗದಿಗೊಳಿಸಬೇಕು.

**ಮಾದರಿ ಪ್ರಶ್ನೆಪತ್ರಿಕೆಗಳು**

**9ನೇ ತರಗತಿ ಸಿರಿ ಕನ್ನಡ – ನೈದಾನಿಕ ಪರೀಕ್ಷೆ–2019**

| ವಿದ್ಯಾರ್ಥಿಯ ಹೆಸರು: | ಹಾಜರಾತಿ ಸಂಖ್ಯೆ: |
|---|---|

**ಸಾಮರ್ಥ್ಯ –1**

**ಅ. ಶಿಕ್ಷಕರು ಹೇಳುವ ವಾಕ್ಯಗಳನ್ನು ಬರೆಯಿರಿ (ಉಕ್ತಲೇಖನ)**

**(ಪೂರ್ಣ ಸರಿ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉಕ್ತಲೇಖನ | ಶ್ರೇಣಿ |
|---|---|---|
| 1 | | |
| 2 | | |
| 3 | | |

**ಸಾಮರ್ಥ್ಯ –2**

**ಆ. ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ**

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ.ಶ. 500ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ' ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತ: ಕವಿ. 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ. ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ತಂದೆತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿ ಬಂದನು. ಏನು ನಂಬಿ ಬಂದ? ತಲಕಾಡಿನ ಮಣ್ಣನ್ನು! ಇಲ್ಲಿ ರಾಯನಿದ್ದಾನೆ. ಅತ್ತಿಮಬ್ಬೆ ಇದ್ದಾಳೆ. ಅಜಿತಸೇನ ಗುರುಗಳ ಶಿಷ್ಯವೃಂದವಿದೆ. ಅದು ಕಲಾಶ್ರೀ ವಿಹರಿಸುವ ನಂದನವನ.

**ಪ್ರಶ್ನೆಗಳು :**

6. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣಿಕೆ ಏನು ?

7. ಕೋಲಾರದಿಂದ ತಲಕಾಡಿಗೆ ರಾಜಧಾನಿಯನ್ನು ಬದಲಾಯಿಸಿದವರು ಯಾರು ?

8. ತಲಕಾಡಿನಲ್ಲಿ ಯಾರ ವಾಸ್ತುಶಿಲ್ಪದ ವಿವರಣೆ ಇದೆ ?

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| **6** | | |
| **7** | | |
| **8** | | |

**ಸಾಮರ್ಥ್ಯ –3**

**ಇ. ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ,
ನೀನೆ ಕಣಾ ನಮ್ಮ ಬಾಳ್ವೆ,
ನಿನ್ನ ಮರೆಯಲಮ್ಮೆವು!
ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು. ॥1॥

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮೀವ ಪುಷ್ಪಮೀವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿ ನಗರ ನಗಾಳಿಯೊ!
ಇಲ್ಲಿಲ್ಲದುದುಳಿದುದೆ?
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ?

**ಪ್ರಶ್ನೆಗಳು :**

9) ಅಕ್ಕರೆಯಿಂದ ನಮ್ಮನ್ನು ಆಳುವವರು ಯಾರು ?

10) ಎಂತಹ ದಿವಂ ಭೂಮಿಗಿಳಿದಿದೆ ?

11) ಮರಗಳು ಏನನ್ನು ನೀಡುತ್ತವೆ ?

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| **9** | | |
| **10** | | |
| **11** | | |

**ಸಾಮರ್ಥ್ಯ –4**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

12. ಕನ್ನಡ ವರ್ಣಮಾಲೆಯಲ್ಲಿನ ದೀರ್ಘ ಸ್ವರಗಳು ಯಾವುವು ಹೆಸರಿಸಿ.

13 ಮಗ್ಗದ, ನಾಡಿನಲ್ಲಿ , ಹೊನ್ನಗನಿ, ಕವಿಶ್ರೇಷ್ಠರು– ಇವುಗಳಲ್ಲಿ ವಿಜಾತಿ ಅಕ್ಷರಗಳುಳ್ಳ ಪದ:

14 ಅನ್ವರ್ಥನಾಮಪದಕ್ಕೆ ಮೂರು ಉದಾಹರಣೆ ಬರೆಯಿರಿ.

15. ಬಾನು, ಆಕಾಶ, ಭಾನು, ಗಗನ – ಇವುಗಳಲ್ಲಿ ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.

16. ದಿನವೆಲ್ಲ ಪದವನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.

17. ಷಟ್ಪದಿಯಲ್ಲಿರುವ ಪಾದಗಳ ಸಂಖ್ಯೆ ಎಷ್ಟು ?

18. ಕೆಳಗಿನ ಪದಗಳನ್ನು ಬಹುವಚನ ರೂಪಕ್ಕೆ ಬದಲಾಯಿಸಿ ಬರೆಯಿರಿ.
    ಅ) ಲೋಕ ಆ) ಬಾಲಕ ಇ) ಮಗು

19. ರಾಜ ಪದದ ತದ್ಭವ ರೂಪವೇನು ?

20. ಬಂಡಿಯಲ್ಲಿ – ಪದದಲ್ಲಿನ ವಿಭಕ್ತಿ ಹೆಸರನ್ನು ಬರೆಯಿರಿ.

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 12 | | |
| 13 | | |
| 14 | | |
| 15 | | |
| 16 | | |
| 17 | | |
| 18 | | |
| 19 | | |
| 20 | | |

**10ನೇ ತರಗತಿ ಸಿರಿ ಕನ್ನಡ – ನೈದಾನಿಕ ಪರೀಕ್ಷೆ–2019**

| ವಿದ್ಯಾರ್ಥಿ ಹೆಸರು | | ಹಾಜರಾತಿ ಸಂಖ್ಯೆ | |
|---|---|---|---|

**ಸಾಮರ್ಥ್ಯ –1**

**ಅ. ಶಿಕ್ಷಕರು ಹೇಳುವ ವಾಕ್ಯಗಳನ್ನು ಬರೆಯಿರಿ (ಉಕ್ತಲೇಖನ)**

**(ಪೂರ್ಣ ಸರಿ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉಕ್ತಲೇಖನ | ಶ್ರೇಣಿ |
|---|---|---|
| **1** | | |
| **2** | | |
| **3** | | |

**ಸಾಮರ್ಥ್ಯ –2**

**ಆ. ಕೆಳಗಿನ ಗದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ**

ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರನೃತ್ಯ. ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕದ ಜನಪದ ಕಲೆ. ಇಬ್ಬರಿಂದ ಮೂವತ್ತು ಮಂದಿ ಭಾಗವಹಿಸುತ್ತಾರೆ. ಪಂಚವಾದ್ಯಗಳಾದ ತಾಳ, ಶ್ರುತಿ, ಚಮಾಳ, ಓಲಗ, ಕರಡೆ ಬಳಕೆಯಾಗುತ್ತವೆ. ಕರಡೆಯು ಕುಣಿತದಲ್ಲಿ ಅನಿವಾರ್ಯ ವಾದ್ಯ ಎನಿಸಿದೆ. ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತವೆ. ಬೀಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ

ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ ,ಬಿಚ್ಚುಗತ್ತಿ ,ಕಾಲ್ಗೆಜ್ಜೆ ಧರಿಸುತ್ತಾರೆ.

ವೀರಭದ್ರನ ಕುಣಿತ ಒಬ್ಬ ವ್ಯಕ್ತಿಯ ಕುಣಿತ. ವೀರಗಾಸೆ ಸಾಮೂಹಿಕ ನೃತ್ಯ. ವೀರಭದ್ರ ಕುಣಿತಕ್ಕೆ ದಕ್ಷಿಣಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದು ಹೆಸರಿದೆ. ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು ಜನಪ್ರಿಯವಾಗಿದೆ. ವೀರಶೈವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ಈ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರ ವೇಷಧಾರಿ ದಕ್ಷಯಾಗ, ವೀರಭದ್ರನ ಜನನ ಮತ್ತು ವೀರಭದ್ರನ ವಿಜಯ ಮುಂತಾದ ಒಡಪುಗಳನ್ನು ಹೇಳುತ್ತಾನೆ. ಇದಕ್ಕೆ 'ಖಡ್ಗ' ಎಂದು ಕರೆಯುತ್ತಾರೆ. ಉತ್ತರಕರ್ನಾಟಕದಲ್ಲಿ 'ಒಡಪು' ಎನ್ನುವರು. ಮತ್ತೊಬ್ಬ ವ್ಯಕ್ತಿ "ಭಲರೇ ವೀರ, ಅಹಹಾ ವೀರ" ಎಂದು ಕಾಕು ಹೇಳುತ್ತ ಜಾಗಟೆ ಬಡಿಯುತ್ತ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ.

**ಪ್ರಶ್ನೆಗಳು :**

6. ವೀರಭದ್ರನ ಕುಣಿತವನ್ನು ಯಾವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿದ್ದಾರೆ ?
7. ವೀರಗಾಸೆ ಕುಣಿತದವರ ವೇಷಭೂಷಣ ಹೇಗಿರುತ್ತವೆ ?
8. ವೀರಗಾಸೆಯಲ್ಲಿ ಬಳಸುವ ಪಂಚವಾದ್ಯಗಳನ್ನು ಹೆಸರಿಸಿ ?

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 6 | | |
| 7 | | |
| 8 | | |

**ಸಾಮರ್ಥ್ಯ –3**

**ಇ. ಕೆಳಗಿನ ಪದ್ಯಭಾಗವನ್ನು ಓದಿ, ಗ್ರಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ**

ಬಿನ್ನಹ ಗುರುವೆ ಧ್ಯಾನಕೆ ಬೇಸರಾದಾಗ
ನಿನ್ನನಾದಿಯ ಮಾಡಿಕೊಂಡು
ಕನ್ನಡದೊಳಗೊಂದು ಕಥೆಯ ಪೇಳುವೆನದು
ನಿನ್ನಾಜ್ಞೆ ಕಂಡ ನನ್ನೊಡೆಯಾ

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆ ತೆಲುಗ
ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು
ಮೈಯುಬ್ಬಿ ಕೇಳಬೇಕಣ್ಣ

**ಪ್ರಶ್ನೆಗಳು**

9) ರತ್ನಾಕರ ವರ್ಣಿಯ ಕಥೆಯನ್ನು ತುಳುವರು ಹೇಗೆ ಮೈಯುಬ್ಬಿ ಕೇಳಬೇಕು ?
10) ರತ್ನಾಕರ ವರ್ಣಿ ಯಾವಾಗ ಕಥೆ ಬರೆಯುವುದಾಗಿ ಹೇಳುತ್ತಾನೆ ?
11) ರತ್ನಾಕರ ವರ್ಣಿ ಯಾರನ್ನು ಆದಿ ಮಾಡಿಕೊಂಡು ಕಥೆ ಹೇಳುತ್ತಾನೆ ?

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 9 | | |
| 10 | | |
| 11 | | |

## ಸಾಮರ್ಥ್ಯ –4

**ಈ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

12) ಕನ್ನಡ ವರ್ಣಮಾಲೆಯ ಅನುನಾಸಿಕಾಕ್ಷರಗಳನ್ನು ಬರೆಯಿರಿ

13) ಸಕಳಾಚಾರ್ಯ – ಈ ಪದವನ್ನು ಬಿಡಿಸಿ ಸಂಧಿ ಹೆಸರು ಬರೆಯಿರಿ

14) ಓದುವನು – ಈ ಪದದ ಬಹುವಚನ ರೂಪ ಬರೆಯಿರಿ

15) ಕರುಣೆ – ಪದದ ವಿರುದ್ಧಾರ್ಥಕ ಪದ ಬರೆಯಿರಿ ?

16) ಅಶ್ವತ್ಥಾಮ, ರಾಮ, ಕುರುಡ – ಇವುಗಳಲ್ಲಿ ಅನ್ವರ್ಥನಾಮ ಪದ ಬರೆಯಿರಿ.

17) ಬಾನು : ಆಕಾಶ :: ಭಾನು : ____________

18) ಷಟ್ಪದಿ ಛಂಧಸ್ಸಿನಲ್ಲಿ ಎಷ್ಟು ಸಾಲುಗಳಿರುತ್ತವೆ ?

19) **ಸಿಸಿರಮನೆ ಪಡೆದು ಪರಕೆಗೆ ವಸಂತನಲರ್ವೊದ ಮಾವಿನಡಿಮಂಚಿಕೆಯೊಳ್** – ಈ ವಾಕ್ಯಕ್ಕೆ ಪ್ರಸ್ತಾರ ಹಾಕಿರಿ

20) ಸೀತೆಯ ಮುಖ ಕಮಲದಂತೆ ಅರಳಿತು – ಇದರ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ.

**(ಪೂರ್ಣ ಸರಿ ಉತ್ತರ ಇದ್ದರೆ "ಎ" ಶ್ರೇಣಿ ನೀಡುವುದು, ಅಪೂರ್ಣವಾಗಿದ್ದಲ್ಲಿ " ಬಿ " ಶ್ರೇಣಿ ನೀಡುವುದು)**

| ಪ್ರಶ್ನೆ ಸಂಖ್ಯೆ | ಉತ್ತರಗಳು | ಶ್ರೇಣಿ |
|---|---|---|
| 12 | | |
| 13 | | |
| 14 | | |
| 15 | | |
| 16 | | |
| 17 | | |
| 18 | | |
| 19 | | |
| 20 | | |

(ಇ) **ಪ್ರಶ್ನೆಪತ್ರಿಕೆಯಲ್ಲಿರುವ ಪ್ರಶ್ನೆಗಳಿಗೆ ಮಾದರಿ ಉತ್ತರ ಪತ್ರಿಕೆಯನ್ನು ಸಿದ್ದಪಡಿಸಿಕೊಳ್ಳಬೇಕು.**

**ಕಾರ್ಯದ ಅನುಷ್ಟಾನ (ಪರೀಕ್ಷೆ ನಡೆಸುವುದು)**

ನಿಗದಿಪಡಿಸಿದ ಅವಧಿಯಲ್ಲಿ ನೈದಾನಿಕ ಪರೀಕ್ಷೆಯನ್ನು ನಡೆಸುವುದು ಪರೀಕ್ಷೆಯನ್ನು ವ್ಯವಸ್ಥಿತವಾಗಿ ಬದ್ಧತೆಯಿಂದ ನಡೆಸಬೇಕು. ವಿದ್ಯಾರ್ಥಿಯು ಯಾರಿಂದಲೂ ಯಾವುದೇ ರೀತಿಯ ಸಹಾಯ ಪಡೆಯದಂತೆ ಎಚ್ಚರಿಕೆ ವಹಿಸಬೇಕು. ಇದರಿಂದ ವಿದ್ಯಾರ್ಥಿಯ ವಸ್ತುನಿಷ್ಠ ಗುಣದೋಷವನ್ನು ಅಳೆಯಲು ಸಹಾಯವಾಗುತ್ತದೆ.

**ಮೌಲ್ಯಮಾಪನ ಹಂತ ( ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು)**

ನೈದಾನಿಕ ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು. ಮೌಲ್ಯಮಾಪನ ಮಾಡುವಾಗ ಉತ್ತರಗಳಿಗೆ ಅಂಕಗಳನ್ನು ನೀಡುವಂತಿಲ್ಲ. ಏಕೆಂದರೆ ಪ್ರಶ್ನೆಗಳಿಗೆ ಅಂಕ ನಿರ್ಧಾರವಾಗಿರುವುದಿಲ್ಲ. ಪ್ರಶ್ನೆಗಳಿಗೆ ಸರಿಯುತ್ತರವಿದ್ದರೆ **'ಎ'** ಎಂದು ಭಾಗಾಂಶ ಉತ್ತರವಿದ್ದರೆ, ತಪ್ಪು ಉತ್ತರ ಹಾಗೂ ನಿರುತ್ತರವಿದ್ದರೆ **'ಬಿ'** ಎಂದು ನೀಡಬೇಕು. ವಿದ್ಯಾರ್ಥಿಗಳು ಪರೀಕ್ಷೆಗೆ ಗೈರು ಆಗಿದ್ದಲ್ಲಿ 'ಬಿ' ಎಂದು ನಮೂದು ವಹಿಯಲ್ಲಿ ನಮೂದಿಸಬೇಕು.

**ಮೌಲ್ಯಮಾಪನ ವಿಶ್ಲೇಷಣೆ (ಉತ್ತರಗಳ ವಿಶ್ಲೇಷಣೆ)**

ಮೌಲ್ಯಮಾಪನದ ನಂತರ ವಿದ್ಯಾರ್ಥಿಗಳು ಉತ್ತರಿಸಿರುವ ಉತ್ತರಗಳ ಮೂಲಕ ಅವರ ಕಲಿಕಾ ಗುಣದೋಷಗಳನ್ನು ನಿರ್ಧರಿಸುವ ಹಂತ ಇದಾಗಿದೆ. ಈ ಕಾರ್ಯಕ್ಕಾಗಿ ಉತ್ತರ ಪತ್ರಿಕೆಗಳ ವಿಶ್ಲೇಷಣಾ ನಮೂನೆಯನ್ನು ಬಳಸಬೇಕು.

**ಉತ್ತರ ಪತ್ರಿಕೆ ವಿಶ್ಲೇಷಣಾ ನಮೂನೆ ನೈದಾನಿಕ ಪರೀಕ್ಷೆ ಮತ್ತು ಸಾಧನ ಪರೀಕ್ಷೆ**

<table>
<tr><td colspan="8">ಸರ್ಕಾರಿ ಪ್ರೌಢಶಾಲೆ ಕೋಳೂರು, ಕುರುಗೋಡು (ತಾ) ಬಳ್ಳಾರಿ (ಜಿ)</td></tr>
<tr><td colspan="8">ನೈದಾನಿಕ ಮತ್ತು ಸಾಫಲ್ಯ ಪರೀಕ್ಷಾ ವಿವರ –2019–20<br>(ನಮೂನೆ–4ಬಿ)</td></tr>
<tr><td colspan="8">ವಿಷಯ : ಪ್ರಥಮ ಭಾಷೆ ಕನ್ನಡ</td></tr>
<tr><td colspan="8">ತರಗತಿ :</td></tr>
<tr><td rowspan="2">ಕ್ರ. ಸಂ</td><td rowspan="2">ವಿದ್ಯಾರ್ಥಿ ಹೆಸರು</td><td rowspan="2">ಪರೀಕ್ಷೆ</td><td colspan="5">ಸಾಮರ್ಥ್ಯಗಳ ಶ್ರೇಣಿ</td></tr>
<tr><td>1</td><td>2</td><td>3</td><td>4</td><td>ಫಲಿತಾಂಶ</td></tr>
<tr><td rowspan="2">1</td><td rowspan="2">ಬಸವೇಶ</td><td>ನೈದಾನಿಕ</td><td>A</td><td>B</td><td>B</td><td>A</td><td>NQ</td></tr>
<tr><td>ಸಾಫಲ್ಯ</td><td></td><td></td><td></td><td></td><td></td></tr>
<tr><td rowspan="2">2</td><td rowspan="2">ಕುಸುಮ</td><td>ನೈದಾನಿಕ</td><td>A</td><td>A</td><td>A</td><td>A</td><td>QUALIFIED</td></tr>
<tr><td>ಸಾಫಲ್ಯ</td><td>–</td><td>–</td><td>–</td><td>–</td><td>–</td></tr>
</table>

1. ಉತ್ತರ ಪತ್ರಿಕೆಯಲ್ಲಿ ಪ್ರತಿಪ್ರಶ್ನೆಗೆ ವಿದ್ಯಾರ್ಥಿಯು ಗಳಿಸಿರುವ ಎ, ಬಿ ಗಳನ್ನು ಉತ್ತರಗಳ ವಿಶ್ಲೇಷಣಾ ವಹಿಯಲ್ಲಿ ಆ ವಿದ್ಯಾರ್ಥಿಯ ಹೆಸರಿನ ಮುಂದೆ ನಮೂದಿಸಬೇಕು.
2. ವಿದ್ಯಾರ್ಥಿಗಳು ಯಾವ ಕ್ಷೇತ್ರ / ಕಲಿಕಾಂಶ / ಸಾಮರ್ಥ್ಯಗಳಲ್ಲಿ ಕೊರತೆ / ದೋಷಗಳನ್ನು ಹೆಚ್ಚಾಗಿ ಹೊಂದಿದ್ದಾರೆ ಎಂಬುದನ್ನು ಗುರುತಿಸುವುದು.
3. ಕಡಿಮೆ ಸಾಧನೆ ತೋರಿದ ಸಾಮರ್ಥ್ಯಗಳನ್ನು ಗುರುತಿಸುವುದು.
4. ಹೆಚ್ಚಿನ ಕಲಿಕಾ ದೋಷಗಳನ್ನು / ಕಡಿಮೆ ಕಲಿಕಾ ಮಟ್ಟವನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸುವುದು.

ವಿಶ್ಲೇಷಣಾ ಮಾಹಿತಿಯನ್ನು ಗುಣಾತ್ಮಕ ಹಾಗೂ ಪರಿಮಾಣಾತ್ಮಕವಾಗಿ ವಿಶ್ಲೇಷಿಸುವುದು ಫಲಿತಾಂಶದ ಮಾಹಿತಿಯನ್ನು ಇಡುವುದು.

**ಫಲಿತಾಂಶದ ನಿರ್ಧಾರದ ಹಂತ**

ಉತ್ತರಗಳ ವಿಶ್ಲೇಷಣೆಯ ಆಧಾರದಿಂದ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ನಿರ್ಧರಿಸುವ ಹಂತವಿದು. ಯಾವ ವಿದ್ಯಾರ್ಥಿ ಯಾವ ಯಾವ ಸಾಮರ್ಥ್ಯಗಳನ್ನು ಗಳಿಸಿದ್ದಾನೆ/ಗಳಿಸಿಲ್ಲ. ಯಾವ ಯಾವ ಸಾಮರ್ಥ್ಯಗಳಲ್ಲಿ ಹೆಚ್ಚಿನ ಕಲಿಕಾ ಕೊರತೆ / ದೋಷಗಳನ್ನು ಹೊಂದಿದ್ದಾನೆ ಎಂಬುದನ್ನು ಗುರುತಿಸುವುದು. ಒಟ್ಟಾರೆ ಫಲಿತಾಂಶವು ಧನಾತ್ಮಕವೇ /ಋಣಾತ್ಮಕವೇ / ಸರಾಸರಿ ಮಟ್ಟದಲ್ಲಿ ಇದೆಯೇ ಎಂಬುದರ ನಿರ್ಧಾರವನ್ನು ಪ್ರಕಟಿಸಬೇಕು. ಇದು ಪರಿಹಾರ ಬೋಧನೆಗೆ ಮಾರ್ಗಸೂಚಿಯಾಗಿರಬೇಕು.

## 2. ಪರಿಹಾರ ಬೋಧನೆ (Remedial Teaching)

ನೈದಾನಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಲ್ಲಿ ಕಂಡು ಬಂದ ಕೊರತೆಗಳನ್ನು / ದೋಷಗಳನ್ನು ಪರಿಹರಿಸಲು ಕೈಗೊಳ್ಳುವ ಚಟುವಟಿಕೆಯೇ ಪರಿಹಾರ ಬೋಧನೆ.

**ಪರಿಹಾರ ಬೋಧನೆಯು –**

1. ಒಂದು ಚಿಕಿತ್ಸಾ ಬೋಧನಾ ವಿಧಾನವೇ ಹೊರತು ವಿಷಯದ ಸಂಪೂರ್ಣ ಮರುಬೋಧನೆಯಲ್ಲ.
2. ವಿದ್ಯಾರ್ಥಿಗಳಲ್ಲಿರುವ ಕಲಿಕಾ ಕೊರತೆ / ದೋಷವನ್ನು ನೀಗಿಸುವ ಮಟ್ಟಿಗೆ ಸೀಮಿತವಾಗಿರುತ್ತದೆ.
3. ವಿದ್ಯಾರ್ಥಿಗಳಲ್ಲಿರುವ ಕಲಿಕಾ ಕೊರತೆಗಳನ್ನು ಅವರಿಗೆ ಮನದಟ್ಟು ಮಾಡಿ ಆ ಕೊರತೆಯನ್ನು ಪರಿಹರಿಸಿಕೊಳ್ಳಲು ಮಾರ್ಗದರ್ಶನ ನೀಡುವ ಚಟುವಟಿಕೆಯಾಗಿದೆ.

**ಪರಿಹಾರ ಬೋಧನೆಗೆ ಸಿದ್ಧತೆ**

ನೈದಾನಿಕ ಪರೀಕ್ಷೆಯ ಫಲಿತಾಂಶವನ್ನು ಆಧರಿಸಿ ಪರಿಹಾರ ಬೋಧನಾ ಕಾರ್ಯಚಟುವಟಿಕೆ ಯನ್ನು ರೂಪಿಸಿಕೊಳ್ಳಬೇಕು. ಪರಿಹಾರ ಬೋಧನೆಗೆ ಒಂದು ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸಬೇಕು. ಯಾವ ಸಾಮರ್ಥ್ಯಗಳಲ್ಲಿ ಕಲಿಕಾ ಕೊರತೆಗಳು / ದೋಷಗಳು ಇವೆ ಅವುಗಳಿಗೆ ಕಾರಣಗಳೇನು? ಅವುಗಳನ್ನು ಪರಿಹರಿಸಬಹುದಾದ ಚಟುವಟಿಕೆಗಳು ಹಾಗೂ ಬಳಸಬಹುದಾದ ಕಲಿಕಾ ಸಾಮಗ್ರಿಗಳನ್ನು ಒಳಗೊಂಡಂತೆ ಯೋಜನೆಯನ್ನು ರೂಪಿಸಿಕೊಳ್ಳಬೇಕು ಹಾಗೂ ಪರಿಹಾರ ಬೋಧನೆಯನ್ನು ಕೈಗೊಳ್ಳಬೇಕು. ಪರಿಹಾರ ಬೋಧನೆ ಯೋಜನೆಯನ್ನು ಈ ಕೆಳಕಂಡಂತೆ ರೂಪಿಸಿ ಕೊಳ್ಳಬಹುದು.

**ಪರಿಹಾರ ಬೋಧನೆಯ ಕ್ರಿಯಾಯೋಜನೆ.**

| ಸಾಮರ್ಥ್ಯ ಸಂಖ್ಯೆ | ಸಾಮರ್ಥ್ಯ/ ಕಲಿಕಾಂಶದ ವಿವರ | ಸಾಮರ್ಥ್ಯ ಗಳಿಸದಿರಲು ಸಂಭವ ನೀಯ ಕಾರಣಗಳು | ಕ್ರಿಯಾ ಪ್ರಾಕಲ್ಪನೆ ರಚನೆ | ರೂಪಿಸಿದ ಚಟುವಟಿಕೆಗಳು | ಕಲಿಕಾ ಸಹಾಯಕಗಳು/ ಬೋಧನೋಪ ಕರಣಗಳು | ಮೌಲ್ಯ ಮಾಪನ |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |
| 4 | | | | | | |

**ಕ್ರಿಯಾಪ್ರಾಕಲ್ಪನೆ :** ಕ್ರಿಯಾಸಂಶೋಧನೆಯಲ್ಲಿ ರೂಪಿಸಲಾಗುವ ಪ್ರಾಕಲ್ಪನೆ. ಕ್ರಿಯಾಪ್ರಾಕಲ್ಪನೆಯೂ ಸಮಸ್ಯೆಗೆ ಸೂಚಿಸ ಲಾಗಿರುವ ಸಂಭಾವ್ಯ ಪರಿಹಾರಗಳು.

**ಪರಿಹಾರ ಬೋಧನೆಯ ಅನುಷ್ಠಾನ**

1. ಯೋಜಿಸಿಕೊಂಡ ಯೋಜನೆಯಂತೆ ಪರಿಹಾರ ಬೋಧನೆಯನ್ನು ಮಾಡಬೇಕು.
2. ಬೋಧನಾ ಕಾರ್ಯಕ್ಕೆ ಸಾಮರ್ಥ್ಯ ಗಳಿಸಿರುವ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಬಹುದು.
3. ಕಲಿಕಾ ಕೊರತೆ ಇಲ್ಲದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಚಟುವಟಿಕೆಗಳನ್ನು ನೀಡಿ ಕಲಿಕಾ ಮಟ್ಟಉತ್ತಮಗೊಳ್ಳುವಂತೆ ಮಾಡುವುದು ಇದರಿಂದ ತರಗತಿ ನಿರ್ವಹಣೆ ಸುಲಭವಾಗುತ್ತದೆ.
4. ನಿಗದಿತ ಸಮಯದಲ್ಲಿ ಪರಿಹಾರ ಬೋಧನೆಯನ್ನು ಪೂರ್ಣಗೊಳಿಸಬೇಕು.
5. ಪರಿಹಾರ ಬೋಧನೆಯು ಕಲಿಕಾ ದೋಷಗಳ ಪರಿಹಾರಾತ್ಮಕವಾದುದರಿಂದ ಕಾಲಮಿತಿಯನ್ನು ನಿಗದಿಪಡಿಸಿಕೊಂಡು ಬೋಧನಾ ಕಾರ್ಯ ಪೂರ್ಣಗೊಳಿಸಬೇಕು.

### 3. ಉತ್ತರ ಪರೀಕ್ಷೆ / ಸಾಫಲ್ಯ ಪರೀಕ್ಷೆ (Post Test / Achievement Test)

ವಿದ್ಯಾರ್ಥಿಗಳ ಕಲಿಕಾ ಕೊರತೆ / ದೋಷಗಳ ನಿವಾರಣೆಗೆ ಮಾಡಿದ ಪರಿಹಾರ ಬೋಧನೆಯ ಪರಿಣಾಮವನ್ನು ತಿಳಿಯಲು ನಡೆಸುವ ಪರೀಕ್ಷೆಯೇ ಸಾಫಲ್ಯ ಪರೀಕ್ಷೆ. ಸಾಫಲ್ಯ ಪರೀಕ್ಷೆಯ ಸಫಲತೆ / ವಿಫಲತೆಗಳು ಪರಿಹಾರ ಬೋಧನೆಯಲ್ಲಿ ಅಳವಡಿಸಿದ ಚಟುವಟಿಕೆಗಳು ಹಾಗೂ ಬೋಧನಾ ತಂತ್ರಗಳನ್ನು ಅವಲಂಬಿಸಿದೆ.

**ಸಾಫಲ್ಯ ಪರೀಕ್ಷೆಗೆ ಸಿದ್ಧತೆ.**

**ಪ್ರಶ್ನೆಪತ್ರಿಕೆಯ ರಚನೆ**

1. ನೈದಾನಿಕ ಪರೀಕ್ಷೆಗೆ ತಯಾರಿಸಿಕೊಂಡಿರುವ ಪ್ರಶ್ನೆಪತ್ರಿಕೆಯ ಮಾದರಿ ಮತ್ತು ಕ್ಲಿಷ್ಟತೆಯ ಮಟ್ಟದಲ್ಲಿಯೇ ಪ್ರಶ್ನೆಪತ್ರಿಕೆಯನ್ನು ರಚಿಸಿಕೊಳ್ಳಬೇಕು.
2. ಸಾಮರ್ಥ್ಯ ಹಾಗೂ ಪ್ರಶ್ನೆಗಳ ಕ್ರಮಾಂಕದಲ್ಲಿ ಯಾವುದೇ ಬದಲಾವಣೆ ಮಾಡಬಾರದು.

3. ವಿದ್ಯಾರ್ಥಿಗಳು ಗಳಿಸಿರುವ ಸಾಮರ್ಥ್ಯಗಳ / ಕಲಿಕಾಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಬಿಡಬೇಕು.
4. ಕಲಿಕಾ ಕೊರತೆಯಿರುವ ಸಾಮರ್ಥ್ಯಗಳಿಗೆ ಮಾತ್ರ ಪ್ರಶ್ನೆಗಳನ್ನು ರಚಿಸಿಕೊಳ್ಳಬೇಕು.
5. ಪೂರ್ವಪರೀಕ್ಷೆಯಲ್ಲಿ ನೀಡಿರುವ ಪ್ರಶ್ನೆಗಳನ್ನೇ ಪುನರಾವರ್ತಿಸಬಾರದು.

**ಸಾಫಲ್ಯ ಪರೀಕ್ಷೆ ನಡೆಸುವುದು.**

1. ನಿರ್ದಿಷ್ಟ ದಿನಾಂಕದಂದು ನಿರ್ದಿಷ್ಟ ಅವಧಿಯಲ್ಲಿ ಪರೀಕ್ಷೆ ನಡೆಸುವುದು.
2. ಕಲಿಕಾಕೊರತೆಯಿರದ ವಿದ್ಯಾರ್ಥಿಗಳಿಗೆ ಈ ಪರೀಕ್ಷೆ ನಡೆಸಬಾರದು.

**ಮೌಲ್ಯಮಾಪನ**

1. ಸಾಫಲ್ಯ ಪರೀಕ್ಷೆಯ ನಂತರ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕು.
2. ಮೌಲ್ಯಮಾಪನ ಕಾರ್ಯವನ್ನು ನೈದಾನಿಕ ಪರೀಕ್ಷೆ ಮಾದರಿಯಲ್ಲಿಯೇ ಮಾಡಬೇಕು.

**ಉತ್ತರ ಪತ್ರಿಕೆಗಳ ವಿಶ್ಲೇಷಣೆ**

ಮೌಲ್ಯಮಾಪನದ ನಂತರ ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮಾಡಬೇಕು. ನೈದಾನಿಕ ಪರೀಕ್ಷೆಯಲ್ಲಿ ಬಳಸಿದ ಉತ್ತರ ಪತ್ರಿಕೆಗಳ ವಿಶ್ಲೇಷಣೆಯ ನಮೂನೆಯನ್ನು ಬಳಸಬೇಕು. ನೈದಾನಿಕ ಪರೀಕ್ಷೆ ವಿಶ್ಲೇಷಣೆಯಂತೆಯೆ ಸಾಫಲ್ಯ ಪರೀಕ್ಷೆಯ ವಿಶ್ಲೇಷಣೆಯನ್ನೂ ಮಾಡಬೇಕು.

**ಉತ್ತರ ಪತ್ರಿಕೆ ವಿಶ್ಲೇಷಣಾ ನಮೂನೆ ನೈದಾನಿಕ ಪರೀಕ್ಷೆ ಮತ್ತು ಸಾಧನ ಪರೀಕ್ಷೆ**

| **ಸರ್ಕಾರಿ ಪ್ರೌಢಶಾಲೆ ಕೋಳೂರು, ಕುರುಗೋಡು (ತಾ) ಬಳ್ಳಾರಿ (ಜಿ)** | | | | | | | |
|---|---|---|---|---|---|---|---|
| **ನೈದಾನಿಕ ಮತ್ತು ಸಾಫಲ್ಯ ಪರೀಕ್ಷಾ ವಿವರ –2019–20 (ನಮೂನೆ–4ಬಿ)** | | | | | | | |
| **ವಿಷಯ : ಪ್ರಥಮ ಭಾಷೆ ಕನ್ನಡ** | | | | | | | |
| **ತರಗತಿ :** | | | | | | | |
| **ಕ್ರ. ಸಂ** | **ವಿದ್ಯಾರ್ಥಿ ಹೆಸರು** | **ಪರೀಕ್ಷೆ** | **ಸಾಮರ್ಥ್ಯಗಳ ಶ್ರೇಣಿ** | | | | |
| | | | **1** | **2** | **3** | **4** | **ಫಲಿತಾಂಶ** |
| 1 | **ನಾಗೇಶ** | **ನೈದಾನಿಕ** | A | B | B | A | NC |
| | | **ಸಾಫಲ್ಯ** | A | A | A | A | QUALIFIED |
| 2 | **ರಮ್ಯ** | **ನೈದಾನಿಕ** | A | A | A | A | QUALIFIED |
| | | **ಸಾಫಲ್ಯ** | – | – | – | – | – |

**ಫಲಿತಾಂಶದ ನಿರ್ಧಾರ**

1. ಉತ್ತರ ಪತ್ರಿಕೆ ವಿಶ್ಲೇಷಣೆಯ ಆಧಾರದಿಂದ ಸಾಫಲ್ಯ ಪರೀಕ್ಷೆಯ ಫಲಿತಾಂಶವನ್ನು ನಿರ್ಧಾರ ಮಾಡಬೇಕು.
2. ಕಲಿಕಾ ಕೊರತೆ / ದೋಷಗಳಿರುವ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳಬೇಕು.
3. ಹೆಚ್ಚು ಕಲಿಕಾ ಕೊರತೆ / ದೋಷಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗುರುತಿಸಿಕೊಳ್ಳಬೇಕು.
4. ಕಲಿಕಾ ಕೊರತೆ / ದೋಷಗಳನ್ನು ಪರಿಹಾರ ಮಾಡಲು ಪೂರಕ ಬೋಧನೆಯನ್ನು ಕೈಗೊಳ್ಳಬೇಕು.

**ಕಲಿಕಾ ಗುಂಪುಗಳ ರಚನೆ**

ಸಾಪಲ್ಯ ಪರೀಕ್ಷೆಯ ಫಲಿತಾಂಶದ ಆಧಾರದಿಂದ ವಿದ್ಯಾರ್ಥಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿಕೊಳ್ಳಬೇಕು.

1. **ಪ್ರಭುತ್ವಮಟ್ಟದ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳು.**
2. **ಸರಾಸರಿ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳು**
3. **ಸರಾಸರಿಗಿಂತ ಕಡಿಮೆ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳು**

| 1. ಪ್ರಭುತ್ವಮಟ್ಟದ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳು. | | 2. ಸರಾಸರಿ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳು | | 3. ಸರಾಸರಿಗಿಂತ ಕಡಿಮೆ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳು. | | |
|---|---|---|---|---|---|---|
| ಕ್ರ.ಸಂ | ವಿದ್ಯಾರ್ಥಿಗಳ ಹೆಸರು | ಕ್ರ. ಸಂ | ವಿದ್ಯಾರ್ಥಿಗಳ ಹೆಸರು | ಕ್ರ.ಸಂ | ವಿದ್ಯಾರ್ಥಿಗಳ ಹೆಸರು | ಕಲಿಕೆಯಲ್ಲಿ ಹಿಂದುಳಿದಿರುವ ಸಾಮರ್ಥ್ಯದ ಸಂಖ್ಯೆ |
| | | | | | | |
| | | | | | | |
| | | | | | | |

**ಪರಿಹಾರ ಬೋಧನೆಗೆ ತಂಡಗಳ ರಚನೆ :-**

ಪ್ರತಿಗುಂಪಿನಿಂದ ಕನಿಷ್ಠ ಇಬ್ಬರು ವಿದ್ಯಾರ್ಥಿಗಳಿರುವಂತೆ ಕಲಿಕಾ ಗುಂಪುಗಳನ್ನು ರಚಿಸುವುದು.
ಪ್ರಭುತ್ವ ಮಟ್ಟದ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಯನ್ನು ಗುಂಪಿನ ನಾಯಕನನ್ನಾಗಿ ಮಾಡುವುದು.

| 1. ತಂಡದ ಹೆಸರು | | | 2. ತಂಡದ ಹೆಸರು | | |
|---|---|---|---|---|---|
| ಕ್ರ.ಸಂ | ವಿದ್ಯಾರ್ಥಿಯ ಹಾಜರಿ ಸಂಖ್ಯೆ | ವಿದ್ಯಾರ್ಥಿಗಳ ಹೆಸರು | ಕ್ರ.ಸಂ | ವಿದ್ಯಾರ್ಥಿಯ ಹಾಜರಿ ಸಂಖ್ಯೆ | ವಿದ್ಯಾರ್ಥಿಗಳ ಹೆಸರು |
| 1 | | | 1 | | |
| 2 | | | 2 | | |

**ಪೂರಕ ಬೋಧನೆ**

ಸಾಫಲ್ಯ ಪರೀಕ್ಷೆಯ ನಂತರವೂ ಕಲಿಕಾ ಕೊರತೆ / ದೋಷಗಳನ್ನು ಹೊಂದಿರುವ ವಿದ್ಯಾರ್ಥಿಗಳ ಕಲಿಕಾಕೊರತೆಯನ್ನು ನೀಗಿಸಲು ಕೈಗೊಳ್ಳುವ ಬೋಧನೆಯೇ ಪೂರಕ ಬೋಧನೆ.

**ಪೂರಕ ಬೋಧನೆಗೆ ಸಿದ್ಧತೆ**

1. ಕಲಿಕಾ ಕೊರತೆ / ದೋಷಗಳನ್ನು ಹೊಂದಿರುವ ವಿದ್ಯಾರ್ಥಿಗಳ ಪಟ್ಟಿ ತಯಾರಿಸಿಕೊಳ್ಳಬೇಕು.
2. ಯಾವ ಯಾವ ಸಾಮರ್ಥ್ಯಗಳಲ್ಲಿ ಕಲಿಕಾ ದೋಷ / ಕೊರತೆಯನ್ನು ಹೊಂದಿದ್ದಾರೆ ಎಂಬುದನ್ನು ಗುರುತಿಸಿಕೊಳ್ಳಬೇಕು.
3. ಪೂರಕ ಬೋಧನೆಗೆ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಈಗಾಗಲೆ ಪರಿಹಾರ ಬೋಧನೆಗೆ ರೂಪಿಸಿಕೊಂಡ ಯೋಜನೆಯನ್ನೇ ಬಳಸಿಕೊಳ್ಳಬಹುದು ಅಗತ್ಯ ಬಿದ್ದರೆ ಹೆಚ್ಚಿನ ಚಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
4. ಅಗತ್ಯ ಸಾಮರ್ಥ್ಯ ಬೋಧನೆಗೆ ಕಾಲಮಿತಿಯನ್ನು ಹಾಕಿಕೊಳ್ಳಬೇಕು.

**ಪೂರಕ ಬೋಧನೆ ಮತ್ತು ಮೌಲ್ಯಮಾಪನ**

1. ಪೂರಕ ಬೋಧನೆ ಮತ್ತು ಮೌಲ್ಯಮಾಪನ ಕಾರ್ಯವು ಜೊತೆಜೊತೆಯಾಗಿ ನಿರಂತರವಾಗಿ ನಡೆಯುವ ಚಟುವಟಿಕೆಯಾಗಿದೆ.
2. ಪೂರಕ ಬೋಧನೆಯನ್ನು ಶಾಲಾ ಅವಧಿಯ ಮೊದಲು ಇಲ್ಲವೇ ಶಾಲಾ ಅವಧಿಯ ನಂತರ ಒಂದು ಅವಧಿಯಲ್ಲಿ ಮಾಡಬೇಕು.

3. ಕೆಲವು ಕಲಿಕಾ ದೋಷ / ಕೊರತೆಗಳ ನಿವಾರಣೆಗಾಗಿ ಪ್ರಸ್ತುತ ಕಲಿಕಾ ಪ್ರಕ್ರಿಯೆಯ ಜೊತೆ ಸಂಯೋಜಿಸಿ ಕೊಳ್ಳಬಹುದು.
4. ಪೂರಕ ಬೋಧನೆಗೆ ಪ್ರಭುತ್ವಮಟ್ಟದ ಕಲಿಕಾ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಬಹುದು.
5. ಸರಣಿ ಪರೀಕ್ಷೆಗಳನ್ನು ನಡೆಸುವುದು.
6. ದೋಷ ನಿವಾರಣೆಯ ಫಲಶ್ರುತಿಯನ್ನು ದಾಖಲಿಸುತ್ತಾ ಹೋಗಬೇಕು.
7. ಕಲಿಕಾ ದೋಷ / ಕೊರತೆಗಳು ನಿವರಣೆಯಾಗುವವರೆಗೂ ಈ ಪ್ರಕ್ರಿಯೆಯನ್ನು ಮುಂದುವರಿಸಬೇಕು.
8. ತೀವ್ರತರ ಕಲಿಕಾ ದೋಷ / ಕೊರತೆಗಳಿದ್ದರೆ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳಬೇಕು.

*****

## 2. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

**(Continuous and Comprehensive Evaluation – CCE)**

1. **ಚಟುವಟಿಕೆಗಳು**
2. **ಮೌಲ್ಯಮಾಪನ**
3. **ದಾಖಲೆ ನಿರ್ವಹಣೆ**

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಎಂದರೇನು** ?

ವಿದ್ಯಾರ್ಥಿಗಳ ಕಲಿಕಾ ಚಟುವಟಿಕೆ, ಸಹಪಠ್ಯ ಚಟುವಟಿಕೆ ಮತ್ತು ಸಹಜ ವರ್ತನೆಗಳನ್ನು ನಿರಂತರ ಹಾಗೂ ವ್ಯಾಪಕವಾಗಿ ಗಮನಿಸಿ, ನಿರ್ದಿಷ್ಟಪಡಿಸಿದ ಪಠ್ಯಕ್ಕೆ ಸೀಮಿತವಾಗದೇ ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದಾಗಿದೆ.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಯಾಕೆ ಬೇಕು** ?

1 ರಿಂದ 9 ನೇ ತರಗತಿಯವರೆಗೆ ಪಠ್ಯ ಪುಸ್ತಕಗಳು ರಚನಾವಾದ ತತ್ವದ ಮೇಲೆ ಸಂರಚಿತವಾಗಿವೆ. ಈ ಕಲಿಕಾ ತತ್ವ ಅನ್ವಯಿಸಿ ಕಲಿಸಲು ಅನುವಾಗುವಂತೆ ಮೌಲ್ಯಮಾಪನ ಪದ್ಧತಿಯೂ ಬದಲಾಗಬೇಕಿರುತ್ತದೆ. ಆ ಹಿನ್ನೆಲೆಯಲ್ಲಿ ಸಿಸಿಈ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಶಿಕ್ಷಕರ ಸ್ವ ಅವಲೋಕನದ ಮೂಲಕ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಪೋಷಿಸಲು ಸಾಧ್ಯವೆಂದು ಈಗಾಗಲೇ ವಿವಿಧ ಪ್ರಯೋಗಗಳಿಂದ ತಿಳಿದುಬಂದಿದೆ. ಬೋಧನೆ ನಿರಂತರವಾಗಿ ನಡೆದಂತೆ ಮೌಲ್ಯಮಾಪನವು ನಿರಂತರವಾಗಿ ನಡೆಯಬೇಕು. ಆದ್ದರಿಂದ ಈ ಪದ್ಧತಿ ಮಕ್ಕಳನ್ನು ವಿವಿಧ ಆಯಾಮಗಳಲ್ಲಿ ಮೌಲ್ಯಮಾಪನ ಮಾಡಲು ಉತ್ತಮವೆಂದು ಜಾರಿಗೊಳಿಸಲಾಗಿದೆ.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪದ್ಧತಿಯ ಉದ್ದೇಶಗಳು ಯಾವುವು** ?

1. ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು.
2. ಮಗುವಿನ ಸಮಗ್ರ ವ್ಯಕ್ತಿತ್ವನ್ನು ರೂಪಿಸುವುದು.
3. ಮಗುವಿನ ಕೊರತೆ ಹಾಗೂ ಸಾಧನೆಗಳನ್ನು ಗಮನಿಸಿ ಸೂಕ್ತ ಹಿಮ್ಮಾಹಿತಿಯನ್ನು ನೀಡುವುದು.
4. ಕಲಿಸುವವರು, ಕಲಿಯುವವರು ಮತ್ತು ಪೋಷಕರು ಈ ಮೌಲ್ಯಮಾಪನವನ್ನು ಸ್ವಾವಲೋಕನ ಸಾಧನವಾಗಿ ಬಳಸಿಕೊಳ್ಳುವುದು. ವಿದ್ಯಾರ್ಥಿಯ ಸಾಧನೆಯನ್ನು ಸಮಗ್ರವಾಗಿ ಅವಲೋಕನಕ್ಕೆ ಒಳಪಡಿಸುವುದು.
5. ಪ್ರತಿ ಸಾಮರ್ಥ್ಯದಲ್ಲಿಯೂ ವಿದ್ಯಾರ್ಥಿಯ ಸಾಧನೆಯನ್ನು ಗುರುತಿಸಿಕೊಳ್ಳುವುದು.
6. ಕಲಿಕಾ ಖಾತ್ರಿಗಾಗಿ ಮತ್ತು ಸಮಯ, ಸಂದರ್ಭಕ್ಕೆ ತಕ್ಕಂತೆ ಹಿಮ್ಮಾಹಿತಿ ನೀಡುವುದು.
7. ವಿದ್ಯಾರ್ಥಿಗಳ ನಿರಂತರ ಪ್ರಗತಿಯ ಬಗ್ಗೆ ತಿಳಿದುಕೊಳ್ಳಬಹುದು.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ವಿಧಗಳು ಯಾವುವು** ?

1. **ರೂಪಣಾತ್ಮಕ ಮೌಲ್ಯಮಾಪನ (Formative Assessment)**
2. **ಸಂಕಲನಾತ್ಮಕ ಮೌಲ್ಯಮಾಪನ (Summative Assessment)**

**1. ರೂಪಣಾತ್ಮಕ ಮೌಲ್ಯಮಾಪನ (Formative Assessment)**

ಮಗುವಿನ ಪಠ್ಯ, ಸಹಪಠ್ಯ ಮತ್ತು ಸಹಜ ವರ್ತನೆಗಳನ್ನು ನಿರಂತರವಾಗಿ ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು. ಮೌಖಿಕ/ಲಿಖಿತ ಕಿರುಪರೀಕ್ಷೆಗಳು, ಚಟುವಟಿಕೆಗಳು, ಹಿಮ್ಮಾಹಿತಿ, ಸ್ವ ಅವಲೋಕನ, ಚರ್ಚೆಗಳ ಮೂಲಕ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುವುದು.

**2. ಸಂಕಲನಾತ್ಮಕ ಮೌಲ್ಯಮಾಪನ (Summative Assessment)**

ಶಿಕ್ಷಕರು ಕಲಿಕೆಯನ್ನು ಅನುಕೂಲಿಸುತ್ತಾ ಒಂದು ತಾರ್ಕಿಕ ಅಂತ್ಯದಲ್ಲಿ ಕಲಿಕೆಯನ್ನು ಪರೀಕ್ಷೆ, ಚಿತ್ರ ಪ್ರದರ್ಶನ, ಚರ್ಚೆ, ಯೋಜನೆ ಇತ್ಯಾದಿ ಚಟುವಟಿಕೆಗಳ ಮೂಲಕ ಮಾಪಿಸಿ ಕಲಿಕೆಯ ಪ್ರಗತಿಯನ್ನು ದಾಖಲಿಸುವುದು.

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಮಾಡಲು ಏನು ಮಾಡಬೇಕು ?**

1. ಬೋಧನಾ ಸಂದರ್ಭದಲ್ಲಿ ವಿವಿಧ ಬೋಧನಾ ವಿಧಾನಗಳನ್ನು , ಬೋಧನೋಪಕರಣಗಳನ್ನು ಬಳಸಿ ರಚನಾತತ್ವ ಮತ್ತು 5–Eಗಳನ್ನು ಆಧರಿಸಿ ಆಕರ್ಷಕವಾಗಿ, ಚಟುವಟಿಕೆಯುಕ್ತವಾಗಿ ಬೋಧಿಸಿ.
2. ಬೋಧನೆಯ ಸಂದರ್ಭದಲ್ಲಿ ಅಥವಾ ನಂತರ ಚಟುವಟಿಕೆಗಳನ್ನು ಕೊಡಬೇಕು.
3. ಯೋಜನೆಗಳನ್ನು ನೀಡಬೇಕು.
4. ಸಾಧನಾ ಪರೀಕ್ಷೆಗಳನ್ನು ಮಾಡಬೇಕು
5. ಮಗುವಿನ ವರ್ತನೆಗಳನ್ನು ವೀಕ್ಷಿಸಬೇಕು.
6. ಚಟುವಟಿಕೆಗಳು ತರಗತಿ ನಡೆಯುವ ಸಂದರ್ಭದಲ್ಲಿ , ಕೆಲವು ತರಗತಿಯ ನಂತರ , ಕೆಲವು ತರಗತಿಯ ಪೂರ್ವದಲ್ಲಿ ನಿರಂತರವಾಗಿ ವಿವಿಧ ರೀತಿಯಲ್ಲಿ ನಡೆಯಬೇಕು.
8. ಹಾಗೇಯೇ ನೀಡುವ ಎಲ್ಲಾ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುತ್ತಾ ಹಿಮ್ಮಾಹಿತಿ ನೀಡಬೇಕು .

**ಚಟುವಟಿಕೆಗಳು ಹೇಗಿರಬೇಕು ?**

ಅ) ಭಾಷಾ ಕೌಶಲಗಳಾದ 1. ಆಲಿಸುವುದು (LISTENING) 2. ಮಾತನಾಡುವುದು (SPEAKING) 3. ಓದುವುದು (READING) 4. ಬರೆಯುವುದು (WRITING) 5. ಚಿಂತನೆ(THINKING) 6. ಅಭ್ಯಾಸ ಕೌಶಲ/ಅಧ್ಯಯನ ಶೀಲತೆ (study skill) ಹೊರಹೊಮ್ಮಿಸುವಂತಿರಬೇಕು.

ಆ) ವ್ಯಾಕರಣಾಂಶಗಳ ಸಾಮರ್ಥ್ಯಗಳನ್ನು ಪರೀಕ್ಷಿಸುವಂತಿರಬೇಕು.

ಇ) ಪಠ್ಯಪೂರಕ /ಪಠ್ಯೇತರ ವಿಷಯಗಳನ್ನು ಒಳಗೊಂಡಿರಬೇಕು.

ಈ) ಸೃಜನಶೀಲತೆಯನ್ನು ಬೆಳೆಸುವಂತಿರಬೇಕು.

ಉ) ಅನ್ವೇಷಣಾ ಮನೋಭಾವ ಮತ್ತು ಕ್ರಿಯಾಶೀಲತೆ ಯನ್ನು ಬೆಳೆಸುವಂತಿರಬೇಕು.

ಊ) ಸ್ವಯಂ ಕಲಿಕೆಗೆ ಸಹಾಯಕವಾಗುವಂತಿರಬೇಕು.

ಎ) ಜೀವನಕ್ಕೆ ಅನ್ವಯ ಮಾಡಿಕೊಳ್ಳುವಂತಿರಬೇಕು.

ಏ) ಪರೀಕ್ಷೆಗೆ ಪೂರಕವೂ ಆಗಿರಬೇಕು.

ಐ) ಮಗುವಿನ ಸಮಗ್ರ ಬೆಳವಣಿಗೆಗೆ ಪೂರಕವಾಗಿರಬೇಕು

**ಚಟುವಟಿಕೆಗಳ ವಿಧಗಳು**

1. ಮೌಖಿಕ ಚಟುವಟಿಕೆಗಳು
2. ಲಿಖಿತ ಚಟುವಟಿಕೆಗಳು
3. ಪ್ರಾಯೋಗಿಕ ಚಟುವಟಿಕೆಗಳು
4. ಸಂಶೋಧನಾ ಚಟುವಟಿಕೆಗಳು

**1. ಮೌಖಿಕ ಚಟುವಟಿಕೆಗಳು**

ಅ) ಪದ್ಯ ಗಳನ್ನು ಹಾಡಿಸುವುದು .

ಆ) ಪಾಠ/ಪದ್ಯಭಾಗಗಳನ್ನು ಓದಿಸುವುದು .

ಇ) ಗಾದೆ ಮಾತುಗಳನ್ನು ಹೇಳಿಸುವುದು.

ಈ) ಭಾಷಣ, ಸೇಮಿನಾರ್, ಆಶುಭಾಷಣ ಮಾಡಿಸುವುದು.

ಉ) ಕಥೆಗಳನ್ನು ಹೇಳಿಸುವುದು.

ಊ) ಸಾರಾಂಶಗಳನ್ನು ಓದಿಸುವುದು.

ಋ) ಕವಿ ಪರಿಚಯ ಮಾಡಿಸುವುದು.

ಎ) ಚಿತ್ರ ನೋಡಿ ವಿವರ ಹೇಳುವುದು.

ಏ) ಸಂದರ್ಶನ ಏರ್ಪಡಿಸುವುದು.

ಐ) ರಸಪ್ರಶ್ನೆ ,ಚರ್ಚೆ,ಪ್ರಬಂಧ ಮಂಡನೆ

ಒ) ಸಂಭಾಷಣೆ ಮಾಡಿಸುವುದು. ಇತ್ಯಾದಿ

**2. ಲಿಖಿತ ಚಟುವಟಿಕೆಗಳು**

ಅ) ಬರೆವಣಿಗೆಗೆ ಸಂಬಂಧಿಸಿದವುಗಳು

ಆ) ಪದ್ಯ /ಕಥೆ/ಕವನ ರಚನೆ /ಚಿತ್ರ ರಚನೆ .

ಇ) ಸಾರಾಂಶ ಬರೆಯುವುದು, ಮೌಲ್ಯಗಳನ್ನು ಬರೆಯುವುದು .

ಈ) ಕಥಾರೂಪದಲ್ಲಿ ಬರೆಸುವುದು.

ಉ) ನಾಟಕರೂಪದಲ್ಲಿ ಬರೆಸುವುದು.

ಊ) ಪತ್ರ, ಪ್ರಬಂಧ, ಗಾದೆಮಾತುಗಳ ವಿಸ್ತರಣೆ

ಋ) ಅಲಂಕಾರ,ಛಂಧಸ್ಸು ಗುರುತಿಸಿ ವಿವರ ಬರೆಯುವುದು.

ಎ) ಮಾಹಿತಿ ಸಂಗ್ರಹಿಸಿ ಬರೆಯುವುದು.

ಏ) ಕವಿಗಳ ಮಾಹಿತಿ ಬರೆಯುವುದು.

ಐ) ಕಪ್ಪು ಹಲಗೆಯ ಮೇಲೆ ವಿಷಯಗಳನ್ನು ಬರೆಸುವುದು ಇತ್ಯಾದಿ

**3. ಪ್ರಾಯೋಗಿಕ ಚಟುವಟಿಕೆಗಳು**

ಅ) ನಾಟಕಾಭಿನಯ ಮಾಡಿಸುವುದು.

ಆ) ಏಕಾಭಿನಯ ಮಾಡಿಸುವುದು.

ಇ) ಆಂಗಿಕ ಅಭಿನಯ

ಊ) ಪದ್ಯಗಳನ್ನು ರಾಗಬದ್ಧವಾಗಿ ಹಾಡಿಸುವುದು.

ಋ) ಚಿತ್ರ ಬಿಡಿಸುವುದು ಮತ್ತು ವಿವರ ಬರೆಯುವುದು.

ಉ) ತರಗತಿಯಲ್ಲಿ ಅಲಂಕಾರ, ಛಂಧಸ್ಸು ಗುರುತಿಸಿ ತೋರಿಸುವುದು.

ಎ) ಸಂದರ್ಶನ ಮಾದರಿಯ ಪ್ರಯೋಗ

ಏ) ತರಗತಿಯಲ್ಲಿ ಪದಗಳ ಅರ್ಥ ವಿಷಯಾಂಶಗಳ ಬರೆಸುವುದು,

ಐ) ಟಿಪ್ಪಣಿ ಬರೆಸುವುದು. ಪತ್ರ ಚಳುವಳಿ ಮಾಡಿಸುವುದು. ಇತ್ಯಾದಿ

**4. ಸಂಶೋಧನಾ ಚಟುವಟಿಕೆಗಳು**

ಅ) ತರಗತಿಯಲ್ಲಿ ವ್ಯಾಕರಣಾಂಶಗಳನ್ನು ಗುರುತಿಸಿ ಬರೆಯುವುದು.

( ಹೊಸಪದಗಳ ಅರ್ಥ, ತತ್ಸಮ/ತದ್ಭವ/ ಹೀಗೆ ಎಲ್ಲಾ ವ್ಯಾಕರಣಾಂಶಗಳು)

ಆ) ಪದ್ಯಗಳಲ್ಲಿನ ಮೌಲ್ಯಗಳನ್ನು ಗುರುತಿಸುವುದು.

ಇ) ಸ್ಥಳೀಯ ಸ್ಥಳಗಳ ಮಾಹಿತಿ ಸಂಗ್ರಹ, ಕಥೆ ,ಕವನ ರಚನೆ

ಈ) ಚಿತ್ರಗಳ ಸಂಗ್ರಹ ಮತ್ತು ಮಾಹಿತಿ ಕಲೆಹಾಕುವುದು. ಇತ್ಯಾದಿ

**( ಕನ್ನಡದ ಸುಮೇರು ಅಭ್ಯಾಸ ಪುಸ್ತಕವನ್ನು ಅತ್ಯುತ್ತಮವಾಗಿ ಬಳಸಬಹುದು)**

**ಚಟುವಟಿಕೆಗಳನ್ನು ಹೇಗೆ ಮೌಲ್ಯಮಾಪನ ಮಾಡಬೇಕು**

ಚಟುವಟಿಕೆ /ಯೋಜನಾ ಕಾರ್ಯಗಳ ಮುಖ್ಯ ಉದ್ದೇಶ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು. ಆದ್ದರಿಂದ ಪ್ರತಿ ಹಂತದಲ್ಲಿ ಕಲಿಕಾರ್ಥಿಗಳ ತೊಡಗಿಸಿ ಕೊಳ್ಳುವಿಕೆಯನ್ನು ಗಮನಿಸಿ, ದಾಖಲಿಸಿಕೊಂಡು ಅವುಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಬೇಕು. ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಹಂತದಲ್ಲಿ ನೀಡುವ ಪ್ರತಿ ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಬೇಕು. ಆದರೆ ಆಂತರಿಕ ಅಂಕಗಳಿಗಾಗಿ ಕೆಲವು ಚಟುವಟಿಕೆಗಳನ್ನು ಮಾನಕಗಳನ್ನು ಹಾಕಿಕೊಂಡು ದಾಖಲೀಕರಣ ಮಾಡಬೇಕು.

**ಉದಾಹರಣೆ:**

**9ನೇ ತರಗತಿ**

**ಪಾಠದ ಹೆಸರು : 1. ಕನ್ನಡ ಮೌಲ್ವಿ (ಗದ್ಯ) – ಗೊರೂರು ರಾಮಸ್ವಾಮಿ ಅಯ್ಯಾಂಗಾರ್**

**ಚಟುವಟಿಕೆ – 01 ( ಮೌಖಿಕ ಅಭಿವ್ಯಕ್ತಿ /ಓದುವ ಕೌಶಲ ) ಈ ಕೆಳಗಿನ ಗದ್ಯ ಭಾಗವನ್ನು ಓದುವುದು.**

**ನಾನು ಪ್ರಯಾಣಿಸುತ್ತಿದ್ದ ಬಸ್ಸಿಗೆ ಒಬ್ಬ ಮುಸಲ್ಮಾನ ಹತ್ತಿದ. ವಯಸ್ಸು ಸುಮಾರು 55–58 ಇರಬಹುದು. ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು. ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು. ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು. ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ವಿಶಾಲವಾದ ಹಣೆ, ಗಂಭೀರವಾದ ಮುಖ, ಮಡಿ–ಮಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ (ಕೋಟು) ಇವುಗಳಿಂದ ಆತನನ್ನು ನೋಡುವವರಿಗೆ ಇವನೊಬ್ಬ ಮರ್ಯಾದಸ್ತ ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು.**

**(ಶಿಕ್ಷಕರ ಉಪಯೋಗಕ್ಕಾಗಿ)**

| ಭಾಷಾ ಕೌಶಲ | ಮೌಲ್ಯಮಾಪನದ ಮಾನಕಗಳು (ಅಂಕಗಳು ವಿತರಣೆ : ಉತ್ತಮ–2 , ಸಾಧಾರಣ–1, ಇಲ್ಲ – 0) | | ನಿಗದಿತ ಅಂಕಗಳು | ಪಡೆದ ಅಂಕಗಳು |
|---|---|---|---|---|
| ಮೌಖಿಕ ಅಭಿವ್ಯಕ್ತಿ (ಓದುವುದು) | 1 | ಸ್ಪಷ್ಟ ಉಚ್ಚಾರಣೆಯೊಂದಿಗೆ ಧ್ವನಿಬದ್ಧವಾಗಿ ಓದುವುದು | 2 | |
| | 2 | ಲೇಖನ ಚಿಹ್ನೆಗಳನ್ನು ಉಪಯೋಗಿಸಿ ಓದುವುದು | 2 | |
| | 3 | ನಿರರ್ಗಳತೆಯಿಂದ ಸರಾಗವಾಗಿ, ವೇಗವಾಗಿ ಓದುವುದು | 2 | |
| | 4 | ಸ್ವರಭಾರಗಳೊಂದಿಗೆ ಓದುವುದು (ಹ್ರಸ್ವ,ದೀರ್ಘ,ಅಲ್ಪಪ್ರಾಣ,ಮಹಾಪ್ರಾಣ,ಸಂಯುಕ್ತಾಕ್ಷರಗಳ ಸರಿಯಾದ ಉಚ್ಚಾರಣೆ) | 2 | |
| | 5 | ಏಕಾಗ್ರತೆಯಿಂದ , ವಾಕ್ಯಬದ್ಧವಾಗಿ ಕೇಳುಗರಿಗೆ ಅರ್ಥವಾಗುವಂತೆ ಓದುವುದು | 2 | |
| | | **ಒಟ್ಟು ಅಂಕಗಳು** | **10** | |

**ಪಾಠದ ಹೆಸರು : 2.ಬೆಡಗಿನ ತಾಣ ಜಯಪುರ(ಗದ್ಯ) - ಶಿವರಾಮ ಕಾರಂತ**

**ಚಟುವಟಿಕೆ – 01**

**ಭಾರತದಲ್ಲಿರುವ ಯಾವುದಾದರೂ ಒಂದು ಪ್ರಸಿದ್ಧವಾದ ಪ್ರೇಕ್ಷಣೀಯ ಸ್ಥಳದ ಚಿತ್ರ ಸಂಗ್ರಹಿಸಿ ಅದರ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ಬರೆಯಿರಿ.(ಪ್ರತಿ ವಿದ್ಯಾರ್ಥಿ ಒಂದೊಂದು ಬೇರೆ ಬೇರೆ ಚಿತ್ರ ಸಂಗ್ರಹ)**



**ವಿವರಣೆ: ಜಯಪುರ ರಾಜಸ್ತಾನದ ಸಾಂಸ್ಕೃತಿಕ ನಗರಿ ಅಲ್ಲಿ ರಜಪೂತರ ಕಾಲದ ಕಲೆ,ವಾಸ್ತುಶಿಲ್ಪಗಳನ್ನು ನೋಡಬಹುದು. *ಜಯಪುರದಲ್ಲಿ* 'ಜಂತ್ರ ಮಂತ್ರ' ಹಳೆಯ ಕಾಲದ ಖಗೋಳವಿಜ್ಞಾನದ ಪರಿಶೀಲನಾಲಯವಿದೆ. 400–500 ವರ್ಷಗಳ ಪೂರ್ವದಲ್ಲಿ, ಖಗೋಳಶಾಸ್ತ್ರಜ್ಞರು ಗ್ರಹ, ಸೂರ್ಯ ಚಂದ್ರ, ತಾರಾಮಂಡಲಗಳನ್ನು ಅಳೆದು, ಪರಿಶೀಲಿಸಿ ನೋಡುವ ಸಲುವಾಗಿ, ಇಲ್ಲಿ ವಿಚಿತ್ರವಾದ ಸಾಧನಗಳನ್ನು ನೆಟ್ಟಿದ್ದಾರೆ. ಗಳಿಗೆ ಅಳೆಯವುದಕ್ಕೆ, ಪ್ರತಿಯೊಂದು ತಿಂಗಳಿನಲ್ಲೂ ಸೂರ್ಯ, ನಕ್ಷತ್ರಗಳ ಗತಿ ಪರಿಶೀಲಿಸುವುದಕ್ಕೆ ಏನೇನೋ ಏರ್ಪಾಟುಗಳಿವೆ. ಪ್ರತಿಯೊಂದು ಸಾಧನದ ಮೇಲೂ ಅವುಗಳ ಉಪಯೋಗ ಮತ್ತು ಕಾಲವನ್ನು ಅಳೆಯುವ ರೀತಿ ಮೊದಲಾದುವನ್ನು ನಮೂದಿಸಿದೆ. ದೂರದರ್ಶಿಯ ಸಹಾಯವಿಲ್ಲದೆ, ಬರಿಗಣ್ಣಿನಿಂದಲೇ ಖಗೋಳದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು, ಗಣಿತಕ್ಕೂ ಸೂಕ್ಷ್ಮ ಪರಿಶೀಲನೆಗೂ ಹಿರಿಯರು ಸಲ್ಲಿಸಿದ ಕಾಣಿಕೆ.**

**(ಶಿಕ್ಷಕರ ಉಪಯೋಗಕ್ಕಾಗಿ)**

| **ಭಾಷಾ ಕೌಶಲ** | **ಮೌಲ್ಯಮಾಪನದ ಮಾನಕಗಳು (ಅಂಕಗಳು ವಿತರಣೆ :ಅತ್ಯುತ್ತಮ-3 ಉತ್ತಮ-2 , ಸಾಧಾರಣ-1, ಇಲ್ಲ – 0)** | | **ನಿಗದಿತ ಅಂಕಗಳು** | **ಪಡೆದ ಅಂಕಗಳು** |
|---|---|---|---|---|
| ಬರವಣಿಗೆ | 1 | ಚಿತ್ರ ಸಂಗ್ರಹ ಮಾಡಿ ಅಂಟಿಸುವುದು | **3** | |
| | 2 | ಪ್ರೇಕ್ಷಣೀಯ ಸ್ಥಳದ ಮಾಹಿತಿ ಬರೆಯುವುದು. | **3** | |
| | 3 | ಮಾಹಿತಿ ಸೂಕ್ತವಾಗಿ , ನಿಖರವಾಗಿ ಇರುವುದು. | **3** | |
| | 4 | ಸುಂದರವಾಗಿ,ಆಕರ್ಷಣೀಯವಾಗಿ ಕಾರ್ಯ ನಿರ್ವಹಿಸಿರುವುದು | **1** | |
| | | **ಒಟ್ಟು ಅಂಕಗಳು** | **10** | |

**ಮಾನಕಗಳು :** ಮಾನ ಎಂದರೇ ಅಳತೆ. ಇಲ್ಲಿ ವಿದ್ಯಾರ್ಥಿಗಳ ನೀಡುವ ಚಟುವಟಿಕೆಗಳನ್ನು ಅಳತೆ ಮಾಡಲು/ ಮೌಲ್ಯಮಾಪನ ಮಾಡಲು ಹಾಕಿಕೊಳ್ಳುವ ಅಂಶಗಳಾಗಿವೆ. ನಾವು ಯಾವ ರೀತಿಯ ಚಟುವಟಿಕೆಗಳನ್ನು ನೀಡುತ್ತೇವೆಯೋ ಅದನ್ನು ಮೌಲ್ಯಮಾಪನ ಮಾಡಲು ಬೇಕಾದ ಸೂಕ್ತವಾದ ಮಾನಕಗಳನ್ನು ಹಾಕಿಕೊಳ್ಳಬೇಕು.

## 9ನೇ ತರಗತಿ ಚಟುವಟಿಕೆಗಳ ದಾಖಲೀಕರಣ

### ರೂಪಣಾತ್ಮಕ – 1

| ಘಟಕಗಳು | ಘಟಕ(ಗ) 1 | | ಘಟಕ(ಪ) 1 | | ಘಟಕ(ಗ) 2 | | ಘಟಕ(ಪ) 2 | | ಸಾಧನಾ ಪರೀಕ್ಷೆ 1 | ಒಟ್ಟು | ಶೇಕಡ | ಶ್ರೇಣಿ |
|---|---|---|---|---|---|---|---|---|---|---|---|---|
| ಚಟುವಟಿಕೆಗಳು | ಚ 1 | ಚ 2 | ಚ 1 | ಚ 2 | ಚ 1 | ಚ 2 | ಚ 1 | ಚ 2 | | | | |
| ವಿದ್ಯಾರ್ಥಿಹೆಸರು | 10 | 10 | 10 | 10 | 10 | 10 | 10 | 10 | 20 | 100 | 10% | – |
| ಬಸವೇಶ | 5 | 5 | 5 | 5 | 5 | 5 | 5 | 5 | 10 | 50 | 5 | ಬಿ+ |
| ರವಿ | | | | | | | | | | | | |

ಗ– ಗದ್ಯ , ಪ– ಪದ್ಯ

### ರೂಪಣಾತ್ಮಕ –2

| ಘಟಕಗಳು | ಘಟಕ(ಗ) 3 | | ಘಟಕ(ಪ) 3 | | ಘಟಕ(ಗ) 4 | | ಘಟಕ(ಪ) 4 | | ಸಾಧನಾ ಪರೀಕ್ಷೆ 2 | ಒಟ್ಟು | ಶೇಕಡ | ಶ್ರೇಣಿ |
|---|---|---|---|---|---|---|---|---|---|---|---|---|
| ಚಟುವಟಿಕೆಗಳು | ಚ 1 | ಚ 2 | ಚ 1 | ಚ 2 | ಚ 1 | ಚ 2 | ಚ 1 | ಚ 2 | | | | |
| ವಿದ್ಯಾರ್ಥಿ ಹೆಸರು | 10 | 10 | 10 | 10 | 10 | 10 | 10 | 10 | 20 | 100 | 10% | – |
| ಬಸವೇಶ | 5 | 5 | 5 | 5 | 5 | 5 | 5 | 5 | 10 | 50 | 5 | ಬಿ+ |
| ರವಿ | | | | | | | | | | | | |

### ಮೊದಲನೆಯ ಸಂಕಲನಾತ್ಮಕ ಕ್ರೋಢಿಕೃತ

| ವಿದ್ಯಾರ್ಥಿ ಹೆಸರು | ರೂ–1 10% | ರೂ–2 10% | ಲಿಖಿತ 40 | ಮೌಖಿಕ 10 | ಒಟ್ಟು 50 | ಶೇ 30% | ರೂ–1 ರೂ–2 ಸಂ–1 50 | ಶ್ರೇಣಿ |
|---|---|---|---|---|---|---|---|---|
| ಬಸವೇಶ | 5 | 5 | 20 | 5 | 25 | 15 | 25 | ಬಿ |
| ರವಿ | | | | | | | | |

**ಒಂದನೆಯ ಸಂಕಲನಾತ್ಮಕ – 10+10+30= 50 (ಪರೀಕ್ಷೆ 40+10=50 ನ್ನು 30% ಗೆ ಇಳಿಸಿಕೊಳ್ಳಿ)**
**ಎರಡನೆಯ ಸಂಕಲನಾತ್ಮಕ – 10+10+10+10+60 =100 (ಪರೀಕ್ಷೆ 90+10 = 100 ನ್ನು 60%ಗೆ ಇಳಿಸಿಕೊಳ್ಳಿ))**

**10ನೇ ತರಗತಿ ಚಟುವಟಿಕೆಗಳ ದಾಖಲೀಕರಣ**

10ನೇ ತರಗತಿಯಲ್ಲಿ ಸೂಕ್ತ ಚಟುವಟಿಕೆಗಳ ಮೂಲಕ ಬೋಧನೆ ಮಾಡಿದರು ಇಲಾಖಾ ನಿಯಮದಂತೆ ಎಂಟು ಚಟುವಟಿಕೆಗಳನ್ನು ದಾಖಲೀಕರಣ ಮಾಡಬೇಕು. ಸಿ ಸಿ ಇ ಯ ಒಂದು ಮುಖ್ಯ ಅಂಶ ಮಕ್ಕಳ ಆಂತರಿಕ ಮೌಲ್ಯ ಮಾಪನ ಅಲ್ಲದೇ ಪಠ್ಯೇತರವಾಗಿ ಮತ್ತು ಪಠ್ಯ ಪೂರಕವಾಗಿ ಮಕ್ಕಳ ಸಾಮರ್ಥ್ಯವನ್ನು ಗುರುತಿಸುವ ಅವಶ್ಯಕತೆ ಇದೆ. ಹಾಗಾಗಿ ಪ್ರಸ್ತುತ 08 ಚಟುವಟಿಕೆಗಳನ್ನು ಮಕ್ಕಳು ನಿರ್ವಹಿಸುವಂತೆ ಅವರುಗಳ ಸಾಮರ್ಥ್ಯವನ್ನು ಧನಾತ್ಮಕ ಅಂಶವನ್ನು ಗುರ್ತಿಸುವ ಕಾರ್ಯ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ಯೋಚಿಸಿದಾಗ ಈ ಚಟುವಟಿಕೆಗಳು ಆಂತರಿಕ ಅಂಕಗಳ ನೀಡುವ ಸಲುವಾಗಿ ನಿರ್ವಹಿಸುವುದರಿಂದ ಈ ಚಟುವಟಿಕೆಗಳ ದಾಖಲೀಕರಣ ಅತೀ ಮುಖ್ಯವಾಗಿದೆ. ಚಟುವಟಿಕೆಯನ್ನು ಸಿ ಸಿ ಇ ಅಡಿಯಲ್ಲಿ ಮೌಲ್ಯಮಾಪನ ಮಾಡುವಾಗ (ಅವುಗಳನ್ನು) ಚಟುವಟಿಕೆಯು ಹೊಂದಿರುವ ಮಾನಕಗಳು ಸಮಾನ ಅಂಕಗಳನ್ನು ಹೊಂದಿರಬೇಕು. ಹಾಗಾದಾಗ ಮಾತ್ರ ಎಲ್ಲಾ ವಿದ್ಯಾರ್ಥಿಗಳನ್ನು ಸಮಾನವಾಗಿ ಮೌಲ್ವೀಕರಿಸಲು ಸಾಧ್ಯ.

**ಉದಾ:–** ಹತ್ತನೇ ತರಗತಿಗೆ 15 ಅಂಕಗಳಿಗೆ ಚಟುವಟಿಕೆಯನ್ನು ನೀಡುವಾಗ 3 ಅಥವಾ 5 ಮಾನಕಗಳಿರುವಂತೆ ಕ್ರಮವಹಿಸಿ ಮಾನಕಗಳಿಗೆ ಸಮಾನ ಅಂಕಗಳನ್ನು ನಿಗದಿಪಡಿಸಿಕೊಳ್ಳಿ.

**ಉದಾಹರಣೆ** ಮಾದರಿ ಚಟುವಟಿಕೆಗಳು

| **ಚಟುವಟಿಕೆ ಸಂಖ್ಯೆ** | **ಚಟುವಟಿಕೆ ಹೆಸರು** |
|---|---|
| 1 | ಕವಿ ಪರಿಚಯದೊಂದಿಗೆ ಸಂಕಲ್ಪಗೀತೆ ಪದ್ಯವನ್ನು ರಾಗಬದ್ಧವಾಗಿ ಹಾಡುವುದು. |
| 2 | ಕವಿ ಪರಿಚಯದೊಂದಿಗೆ ಹಕ್ಕಿ ಹಾರುತಿದೆ ನೋಡಿದಿರಾ ! ಪದ್ಯವನ್ನು ರಾಗಬದ್ಧವಾಗಿ ಹಾಡುವುದು |
| 3 | ಆಶುಭಾಷಣಗಳ ವಿಷಯಗಳು<br>1) ವೂಲವರ್ಥಅಂಗಡಿ ಮತ್ತು ಪೊಯೆಟ್‌ಕಾರ್ನರ್<br>2) ಚಿಕಾಗೋ ಸರ್ವಧರ್ಮ ಸಮ್ಮೇಳನ<br>3) ಜಾತಿ ವ್ಯವಸ್ಥೆ ಮತ್ತು ಕೋಮುವಾದದ ಬಗ್ಗೆ ವಿವೇಕಾನಂದರ ಚಿಂತನೆಗಳು<br>4) ವಿ.ಕೃ. ಗೋಕಾಕರು ಗುರುತಿಸಿರುವ ಟೊಪ್ಪಿಗೆ ಮತ್ತು ಕಲ್ಲುಪಾಟಿಯ ವಿಶೇಷತೆಗಳು<br>5) ಹಲಗಲಿ ಬೇಡರದಂಗೆಗೆ ಕಾರಣಗಳು ಮತ್ತು ಪರಿಣಾಮಗಳು<br>6) ಹಲಗಲಿಗೆ ದಂಡು ಬರಲು ಕಾರಣ ಮತ್ತು ಅದು ದಾಳಿಮಾಡಿದ ಪರಿ<br>(ಸೂಚನೆ : 6ಆಶುಭಾಷಣಗಳ ವಿಷಯಗಳನ್ನು ಬರೆದುಕೊಳ್ಳುವುದು ಅಭ್ಯಾಸ ಮಾಡಿ 3 ಚೀಟಿಗಳನ್ನು ಆರಿಸಿಕೊಂಡು ಚೀಟಿಯಲ್ಲಿ ಬಂದಿರುವ ವಿಷಯಗಳ ಬಗ್ಗೆ ಮಾತನಾಡುವುದು) |
| 4 | ಈ ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ ಮತ್ತು ಮೂರು ಗಾದೆಗಳನ್ನು ಆರಿಸಿಕೊಂಡು ಮೌಖಿಕವಾಗಿ ವಿಸ್ತರಿಸಿ ಹೇಳುವುದು.<br>1) ಕೂಡಿ ಬಾಳಿದರೆ ಸ್ವರ್ಗ ಸುಖ 2) ಕೈ ಕೆಸರಾದರೆ ಬಾಯಿ ಮೊಸರು<br>3) ಮಾಡಿದ್ದುಣ್ಣೋ ಮಹಾರಾಯ 4) ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ<br>5) ಆಳಾಗ ಬಲ್ಲವನುಅರಸಾಗಬಲ್ಲ 6) ಉಪ್ಪಿಗಿಂತರುಚಿಯಿಲ್ಲ ; ತಾಯಿಗಿಂತ ಬಂಧುವಿಲ್ಲ. |
| 5 | ಈ ಕೆಳಗಿನ ಅಲಂಕಾರಗಳನ್ನು ಗುರುತಿಸಿ ಸಮನ್ವಯಗೊಳಿಸಿ ಮತ್ತು ಎರಡು ಅಲಂಕಾರಗಳನ್ನು ತರಗತಿಯಲ್ಲಿ ಪ್ರಸ್ತುತ ಪಡಿಸಿರಿ<br>1) “ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು.”<br>2) “ ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ ”<br>3) “ ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ”<br>4)“ ನೊಳವಿಂಗೆ ತಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನ ದೊಂದಳವು?” |

| | |
|---|---|
| | 5) " ಸೀತೆಯ ಮುಖ ಕಮಲದಂತೆ ಅರಳಿತು "<br>6) "ಅಳ್ಳಿರಿಯುತಿಪ್ಪ ಎಮ್ಮೊಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ"<br>7) " ಮಾರಿಗೌತಣವಾಯ್ತು ನಾಳಿನ ಭಾರತವು"<br>8) " ಸೀತೆಯ ಮುಖಕಮಲ ಅರಳಿತು." |
| 6 | ಕೊಟ್ಟಿರುವ ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆದು, ಲಕ್ಷಣ ಬರೆಯಿರಿ ಮತ್ತು ತರಗತಿಯಲ್ಲಿಯಾವುದಾದರೂಎರಡು ವಿಧದ ಛಂದಸ್ಸನ್ನು ಕಪ್ಪುಹಲಗೆ ಮೇಲೆ ಗುರುತಿಸಿ ತೋರಿಸುವುದು |
| 7 | ಕೊಟ್ಟಿರುವ ಪದ್ಯಗಳನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿಹಾಡುವುದು. |
| 8 | ಕೊಟ್ಟಿರುವ' ಕವಿಗಳ ಕಾಲ, ಸ್ಥಳ, ಕೃತಿಗಳು, ಪ್ರಶಸ್ತಿ/ಬಿರುದುಗಳನ್ನು ವಾಕ್ಯರೂಪದಲ್ಲಿ ಬರೆಯುವುದು ಮತ್ತು ತರಗತಿಯಲ್ಲಿ 4 ಜನ ಕವಿಗಳ ಪರಿಚಯವನ್ನು ಮೌಖಿಕವಾಗಿ ಪರಿಚಯಿಸುವುದು. |

**ಉದಾಹರಣೆ**

**ಚಟುವಟಿಕೆ–01**

**ಕವಿ ಪರಿಚಯದೊಂದಿಗೆ ಸಂಕಲ್ಪಗೀತೆ ಪದ್ಯವನ್ನುರಾಗಬದ್ಧವಾಗಿ ಹಾಡುವುದು.**

(ಶಿಕ್ಷಕರ ಉಪಯೋಗಕ್ಕಾಗಿ ಮಾತ್ರ)

| ಕ್ರ.ಸಂ | ಮಾನಕಗಳು<br>(ಅಂಕಗಳ ವಿತರಣೆ : ಅತ್ಯುತ್ತಮ–3, ಉತ್ತಮ–2, ಸಾಧಾರಣ–1) | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಮೌಖಿಕವಾಗಿ ಸ್ಪಷ್ಟವಾಗಿ ಕವಿಪರಿಚಯ ಮಾಡುವುದು | 3 | |
| 2 | ಕಂಠಪಾಠ ವಿಧಾನದಲ್ಲಿ ಹಾಡುವುದು | 3 | |
| 3 | ರಾಗಬದ್ಧವಾಗಿ ಹಾಡುವುದು | 3 | |
| 4 | ಧೈರ್ಯವಾಗಿ ನಿರರ್ಗಳವಾಗಿ ಹಾಡುವುದು | 3 | |
| 5 | ಸ್ಪಷ್ಟಉಚ್ಚಾರಣೆಯೊಂದಿಗೆ ಹಾಡುವುದು | 3 | |
| | ಒಟ್ಟು ಅಂಕಗಳು | 15 | |

**ಚಟುವಟಿಕೆ–03**

**ಆಶುಭಾಷಣ:**

**ಆಶುಭಾಷಣಗಳ ವಿಷಯಗಳು**

1) ವೂಲವರ್ಥಅಂಗಡಿ ಮತ್ತು ಪೊಯೆಟ್‌ಕಾರ್ನರ್

2) ಚಿಕಾಗೋ ಸರ್ವಧರ್ಮ ಸಮ್ಮೇಳನ

3) ಜಾತಿ ವ್ಯವಸ್ಥೆ ಮತ್ತುಕೋಮುವಾದದ ಬಗ್ಗೆ ವಿವೇಕಾನಂದರ ಚಿಂತನೆಗಳು

4) ವಿ.ಕೃ. ಗೋಕಾಕರು ಗುರುತಿಸಿರುವ ಟೊಪ್ಪಿಗೆ ಮತ್ತುಕಲ್ಲುಪಾಟಿಯ ವಿಶೇಷತೆಗಳು

5) ಹಲಗಲಿ ಬೇಡರದಂಗೆಗೆ ಕಾರಣಗಳು ಮತ್ತು ಪರಿಣಾಮಗಳು

6) ಹಲಗಲಿಗೆ ದಂಡು ಬರಲುಕಾರಣ ಮತ್ತುಅದು ದಾಳಿಮಾಡಿದ ಪರಿ

(**ಸೂಚನೆ** :6ಆಶುಭಾಷಣಗಳ ವಿಷಯಗಳನ್ನು ಬರೆದುಕೊಳ್ಳುವುದು ಅಭ್ಯಾಸ ಮಾಡಿ3 ಚೀಟಿಗಳನ್ನು ಆರಿಸಿಕೊಂಡು ಚೀಟಿಯಲ್ಲಿ ಬಂದಿರುವ ವಿಷಯಗಳ ಬಗ್ಗೆ ಮಾತನಾಡುವುದು)

(ಶಿಕ್ಷಕರ ಉಪಯೋಗಕ್ಕಾಗಿ)

| ಕ್ರ.ಸಂ | ಮಾನಕಗಳು<br>(ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3) | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಆಶು ಭಾಷಣಗಳ ವಿಷಯ ಸಂಗ್ರಹ (ಬರೆವಣಿಗೆ). | 5 | |
| 2 | ವಿಷಯಕ್ಕನುಗುಣವಾಗಿಮಾತನಾಡುವುದು. | 5 | |
| 3 | ಭಾಷಣ ಮಾಡುವಾಗ ಮಾತುಗಳಲ್ಲಿ ಸ್ಪಷ್ಟತೆ ಮತ್ತು ನಿರರ್ಗಳತೆ. | 5 | |
| | ಒಟ್ಟು ಅಂಕಗಳು | 15 | |

| | ಚಟುವಟಿಕೆ –1 | ಚಟುವಟಿಕೆ –2 | ಸಾಧನ ಪರೀಕ್ಷೆ | ಒಟ್ಟು |
|---|---|---|---|---|
| ರೂಪಣಾತ್ಮಕ ಮೌಲ್ಯಮಾಪನ 1 | 15 | 15 | 20 | 50 |
| ರೂಪಣಾತ್ಮಕ ಮೌಲ್ಯಮಾಪನ 2 | 15 | 15 | 20 | 50 |
| ರೂಪಣಾತ್ಮಕ ಮೌಲ್ಯಮಾಪನ 3 | 15 | 15 | 20 | 50 |
| ರೂಪಣಾತ್ಮಕ ಮೌಲ್ಯಮಾಪನ 4 | 15 | 15 | 20 | 50 |
| ಒಟ್ಟು | 60 | 60 | 80 | 200 |

**ವಿದ್ಯಾರ್ಥಿ ಪಡೆದ ಅಂಕಗಳು X 25**
**------------------ = ಆಂತರಿಕ ಮೌಲ್ಯಮಾಪನದ ಅಂಕಗಳು**
**200**

**ಉದಾಹರಣೆ**

**130 X 25**
**------------------ = 16.25 = 17**
**200**

**ವಿಶೇಷ ಸೂಚನೆ : ದಶಮಾಂಶ 1 ರಿಂದ 9 ರವರೆಗೆ ಬಂದರೂ ಮುಂದಿನ ಪೂರ್ಣಾಂಕವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಮೇಲಿನ ಉದಾಹರಣೆಯನ್ನು ಗಮನಿಸಿ)**

# 3. ರಚನಾವಾದ ಮತ್ತು 5E- ತರಗತಿ ಪ್ರಕ್ರಿಯೆ

**ರಚನಾವಾದ ಎಂದರೇನು ?**

ಪ್ರಸ್ತುತ ದಿನಗಳಲ್ಲಿ ತರಗತಿ ಪ್ರಕ್ರಿಯೆಯು ಸಾಂಪ್ರಾದಾಯಿಕ ವಿಧಾನವನ್ನು ಬಿಟ್ಟು ಹೊಸದಾರಿಯತ್ತ ಸಾಗುತ್ತಿದೆ. ಅವಶ್ಯಕವಾಗಿ ನಾವೆಲ್ಲರು ವಿದ್ಯಾರ್ಥಿಗಳ ಕಲಿಕಾ ಹಿತದೃಷ್ಟಿಯಿಂದ ಇದೇ ದಾರಿಯಲ್ಲಿ ಸಾಗಬೇಕಾಗಿದೆ. ಕಲಿಕೆಯನ್ನು ವಿದ್ಯಾರ್ಥಿ ಕೇಂದ್ರಿತವಾಗಿ ಮಾಡಿ ಅವನಲ್ಲಿ ಈಗಾಗಲೇ ಇರುವ ಪೂರ್ವ ಜ್ಞಾನದ ಆಧಾರದ ಮೇಲೆ ಅವನು ಕಲಿಕೆಯನ್ನು ಕಟ್ಟಿಕೊಳ್ಳುವಂತೆ ಮಾಡಬೇಕು. ಈ ವಿಧಾನವನ್ನು ರಚನಾವಾದ ಎಂಬುದಾಗಿ ಕರೆಯುತ್ತೇವೆ.

- ಇತ್ತೀಚಿನ 6–7 ವರ್ಷಗಳಿಂದ ಬೋಧನೆ ಅಥವಾ ತರಗತಿ ನಿರ್ವಹಣೆಯಲ್ಲಿ ಬದಲಾವಣೆಗಳನ್ನು ತಂದುಕೊಂಡಿದ್ದೇವೆ. ತರಗತಿ ಪ್ರಕ್ರಿಯೆಯ ಬದಲಾವಣೆ ಇದಾಗಿದೆ.
- ಮಗು ಪೂರ್ವಜ್ಞಾನವನ್ನು ಆಧರಿಸಿ ಹೊಸ ವಿಚಾರ ಅಥವಾ ಪರಿಕಲ್ಪನೆಗಳನ್ನು ರಚಿಸಿಕೊಳ್ಳುವ ಪ್ರಕ್ರಿಯೆಯಾಗಿದೆ.
- ವಿದ್ಯಾರ್ಥಿ ವೈಯಕ್ತಿಕ ನೆಲೆಯಲ್ಲಿ ತನ್ನ ಜ್ಞಾನವನ್ನು ಕಟ್ಟಿಕೊಳ್ಳುತ್ತಾನೆ.
- ಶಿಕ್ಷಕ ವಿದ್ಯಾರ್ಥಿಗೆ ಮಾಹಿತಿಯನ್ನು ಸುರಿಯುವುದಲ್ಲ. ಮಕ್ಕಳು ಇಂದ್ರೀಯಗಳ ಅನುಭವದ ಮೂಲಕ ಅರ್ಥವನ್ನು ಕಟ್ಟಿಕೊಳ್ಳುತ್ತಾರೆ
- ಮಾಡಿ ಕಲಿ ಎಂಬಂತೆ ಮಕ್ಕಳು ತಮ್ಮ ಸ್ವ–ಅನುಭವಗಳ ಮೂಲಕ ಕಲಿಯುವುದೇ ರಚನಾ/ರಾಚನಿಕ ವಿಧಾನವಾಗಿದೆ. –ಜಿ. ಪಿ.

20ನೆಯ ಶತಮಾನದ ಕೊನೆಯಲ್ಲಿ ಉಗಮವಾದ ಮನೋ ವೈಜ್ಞಾನಿಕ ಸಿದ್ಧಾಂತವಾಗಿದೆ. 'ರಚನಾತ್ಮಕ' ಎಂಬುದು Constructivism ಎನ್ನುವ ಇಂಗ್ಲೀಷ್ ಶಬ್ದದ ಕನ್ನಡ ಅನುವಾದ. Construct ಎಂಬ ಶಬ್ಧವು ಲ್ಯಾಟಿನ್ ಪದ Construct ದಿಂದ ಉತ್ಪತ್ತಿಯಾಗಿದೆ. ಇದರ ಅರ್ಥ ಜೋಡಿಸು ಹಂತ ಹಂತವಾಗಿ ಹೊಂದಿಸು ಎಂದಾಗುತ್ತದೆ. ಜ್ಞಾನವನ್ನು ಹಂತ ಹಂತವಾಗಿ ಅಥವಾ ಕ್ರಮವಾಗಿ ಜೋಡಿಸುವ ಪರಿಕಲ್ಪನೆಯು ರಚನಾತ್ಮಕ ಕಲಿಕಾ ವಿಧಾನದ ತಿರುಳಾಗಿದೆ. ತನಗೆ ತಿಳಿದಿರುವ ಜ್ಞಾನ ಮತ್ತು ಅನುಭವಗಳನ್ನು ಹೊಸ ಕಲಿಕೆಗೆ ಅಥವಾ ಪರಿಕಲ್ಪನೆಗೆ ಹೊಂದಿಸಿ ಅರಿಯುವ/ಕಲಿಯುವ ವಿಧಾನವೇ ರಚನಾತ್ಮಕ ಕಲಿಕಾ ವಿಧಾನವಾಗಿದೆ.

ರಷ್ಯಾ ದೇಶದ ಮನೋವಿಜ್ಞಾನಿ ಲೇವಾ ವೈಗೋಟ್ಸ್ಕಿ ಸಾಮಾಜಿಕ ರಚನಾವಾದದ ಪ್ರತಿಪಾದಕನಾಗಿದ್ದಾನೆ. ಈತನ ಪ್ರಕಾರ "ಮಕ್ಕಳು ತಮ್ಮ ಅನುಭವದ ನೆಲೆಯಲ್ಲಿ ಹೊಸ ಜ್ಞಾನವನ್ನು ಕಟ್ಟಿಕೊಳ್ಳುತ್ತಾರೆ ಹಾಗೂ ಹೊಸದನ್ನು ತಾವೇ ಅನ್ವೇಷಿಸುತ್ತಾರೆ".

ಈ ಹಿಂದೆಯೇ **ಜೀನ್ ಪಿಯಾಜೆ** ಎಂಬಾತ ರಚನಾವಾದಿ ಸಿದ್ಧಾಂತವನ್ನಾಧರಿಸಿದಂತೆ ಮಗುವಿನ ದೈಹಿಕ ಬೆಳವಣಿಗೆ ಹಾಗೂ ಭೌತಿಕ ಅಭಿವೃದ್ಧಿಗಳ ಕುರಿತಂತೆ ಸುದೀರ್ಘವಾಗಿ ತನ್ನ ಸಿದ್ಧಾಂತದಲ್ಲಿ ಚರ್ಚಿಸಿದ್ದಾನೆ ಎಂಬುದನ್ನು ನಾವಿಲ್ಲಿ ಮನಗಾಣಬೇಕು.

ವರ್ತನಾ ವಾದದ ಪ್ರತಿಪಾದಕರು **"ಜ್ಞಾನವು ಪ್ರತ್ಯೇಕವಾದ ಅಂಶವಾಗಿದ್ದು ಇದನ್ನು ಶಿಕ್ಷಕರ ಮೂಲಕವೇ ಕಲಿಕಾರ್ಥಿಗೆ ವರ್ಗಾಯಿಸಬೇಕೆಂದು"** ಹೇಳುತ್ತಾರೆ. ಆದರೆ ರಚನಾವಾದಿಗಳು ತಮ್ಮ ಸಂಶೋಧನೆಗಳ ಮೂಲಕ ಇದಕ್ಕೆ ಭಿನ್ನವಾಗಿ ಹೇಳಿಕೆಯನ್ನು ನೀಡಿದ್ದಾರೆ. ಅವರ ಪ್ರಕಾರ ಶಿಕ್ಷಕ ಕಲಿಕಾರ್ಥಿಗೆ ಅವನ ಪೂರ್ವ ಜ್ಞಾನದ ಆಧಾರದ ಮೇಲೆ ಕಲಿಕೆಯನ್ನು ಕಟ್ಟಿಕೊಳ್ಳಲು ಸಹಾಯ ಮಾಡುವ ಅನುಕೂಲಿಸುವವನಾಗಿದ್ದಾನೆ.

**ಉದಾ:** ಸಂಧಿ ಪದಗಳನ್ನು ವ್ಯಂಜನ ಮತ್ತು ಸ್ವರಗಳನ್ನು ಬಿಡಿಸುವ ಪೂರ್ವಜ್ಞಾನದಿಂದ ಸಮಾಸ ಪದಗಳನ್ನು ಬಿಡಿಸಲು ಅನುಕೂಲಿಸುವುದು.

***ಸ್ಕಿಮಾ –Skima (ಮಾನಸಿಕ ಮಾದರಿಗಳು) :–**

ಮಗು ಇಂದ್ರಿಯಗಳ ಅನುಭವಗಳ ಮೂಲಕ ಮಾನಸಿ ಮಾದರಿಗಳನ್ನು ಕಲ್ಪಿಸಿಕೊಳ್ಳುತ್ತದೆ. ಸುಗಮಕಾರ ವಿದ್ಯಾರ್ಥಿಗೆ ನೇರವಾಗಿ ವಿಷಯವನ್ನು ಸುರಿಯದೆ, ಮಾಡಿ ಕಲಿ ತತ್ವದಡಿಯಲ್ಲಿ ಅನುಕೂಲಿಸಬೇಕು. ಪೂರ್ವಜ್ಞಾನಕ್ಕೆ ಸಂಬಂಧಿಸಿದಂತೆ ಮಾದರಿಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡಬೇಕು.

**ಉದಾ:** ಸಮುದ್ರ ವನ್ನು ನೋಡದ ಮಗುವಿಗೆ ನಿಮ್ಮ ಊರಿನ ಕೆರೆ, ಕೆರೆಯ ಹತ್ತುಪಟ್ಟು,ನೂರುಪಟ್ಟು ಹೇಳಿದಾಗ ಮಾನಸಿಕ ಮಾದರಿಯನ್ನು ರಚಿಸಿಕೊಳ್ಳುತ್ತಾನೆ.

**ರಚನಾವಾದದ ಸಾಮಾನ್ಯ ಗುಣಲಕ್ಷಣಗಳು**

1. ಹೊಸ ಕಲಿಕೆಯು ಕಲಿಯುವವನ ಪೂರ್ವಜ್ಞಾನವನ್ನು ಅವಲಂಭಿಸಿರುತ್ತದೆ.
2. ಕಲಿಕೆ ಎಂಬುದು ಸುಮ್ಮನೆ ಗ್ರಹಿಸುವ ನಿರಾಸಕ್ತಿದಾಯಕ ಪ್ರಕ್ರಿಯೆಯಾಗಿರದೇ ಅದು ಆಸಕ್ತಿಯೊಂದಿಗೆ ಅರ್ಥವತ್ತಾದ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಅವಶ್ಯಕವಾದ ಅರ್ಥ ಪೂರ್ಣವಾದ ಪ್ರಕ್ರಿಯೆಯಾಗಿದೆ.
3. ಕಲಿಕೆಯು ಸಮಾಜದ ಹಾಗೂ ವಿದ್ಯಾರ್ಥಿಗಳ ನಡುವೆ ನಡೆಯುವ ಸಂವಹನ ಕಲಿಕಾ ಪ್ರಕ್ರಿಯೆಯನ್ನು ಅವಲಂಭಿಸಿದೆ.
4. ವಿದ್ಯಾರ್ಥಿಯ ಅರ್ಥ ಪೂರ್ಣ ಕಲಿಕೆಯು ಅವನ ಕಲಿಕಾ ಆಸಕ್ತಿಯ ಮೇಲೆ ಅವಲಂಭಿತವಾಗಿದೆ.
5. ವಿದ್ಯಾರ್ಥಿಯು ನೀಡುವ ವಿವರಗಳಿಗೆ ಅನುಕೂಲಿಸುವವರು ನಮ್ಯವಾಗಿ ಸ್ಪಂದಿಸುತ್ತಾ ಸರಿಯಾದ ದಿಕ್ಕಿನಲ್ಲಿ ಕಲಿಕೆಯನ್ನು ಪ್ರೇರೇಪಿಸಬೇಕು.

**ರಚನಾವಾದದ ತರಗತಿಯಲ್ಲಿ ಶಿಕ್ಷಕರು ಗಮನಿಸಬೇಕಾದ ಅಂಶಗಳು**

1) ಕಲಿಕೆಯು ವಿಶ್ವಾಸಾರ್ಹವಾದ ಹಾಗೂ ನಿಜ ಜೀವನದ **ವಾಸ್ತವಕ್ಕೆ** ಸಂಬಂಧಿಸಿದ ಪರಿಸರಕ್ಕೆ ಹೊಂದಿಕೊಂಡಿರಬೇಕು. *(ಯುದ್ಧ)*
2) ಕಲಿಕೆಯು ಸಾಮಾಜಿಕ ಹಾಗೂ **ನೈತಿಕ** ತಿಳಿವಳಿಕೆಯನ್ನು ಒಳಗೊಂಡಿರಬೇಕು. *(ಸಂಕಲ್ಪ ಗೀತೆ)*
3) ಕಲಿಕೆಯು ವಿದ್ಯಾರ್ಥಿಗಳ ಸ್ವನಿಯಂತ್ರಣ, ಸ್ವಕಲಿಕೆ, ಸ್ವಅವಲೋಕನ ಮಾಡುವುದನ್ನು ಉತ್ತೇಜಿಸಬೇಕು, ಒಟ್ಟಾರೆಯಾಗಿ **ಚಿಂತನಾಶೀಲತೆ**ಗೆ ಇಂಬು ನೀಡುವಂತಿರಬೇಕು. *(ಭಾಗ್ಯಶಿಲ್ಪಿಗಳು)*
4) ಅನುಕೂಲಿಸುವವರು ವಿದ್ಯಾರ್ಥಿಗಳ ಕಲಿಕೆಗೆ **ಸಹಾಯ** ಮಾಡಬೇಕೆ ಹೊರತು ಕಲಿಕಾಂಶವನ್ನು ನೇರವಾಗಿ ಅರ್ಥ ಹೇಳಿ ಪಾಠ ಮಾಡಬಾರದು.
5) ಅನುಕೂಲಿಸುವಾತನು ಕಲಿಕಾರ್ಥಿಗಳಿಗೆ ಅವರದೇ ಆದ ಜ್ಞಾನ ಕಟ್ಟಿಕೊಳ್ಳಲು ಸಹಾಯ ಮಾಡಬೇಕು.

**ರಚನಾವಾದದಿಂದ ವಿದ್ಯಾರ್ಥಿಗಳಿಗಾಗುವ ಲಾಭಗಳು**

- ❑ ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳು **ಚಟುವಟಿಕೆ**ಯಿಂದ ಕೂಡಿರುತ್ತಾರೆ. ಸ್ವ ಪ್ರೇರಣೆಯಿಂದ ವಿದ್ಯಾರ್ಥಿಗಳು ಕಲಿಕೆಯನ್ನು **ಆನಂದಿ**ಸಿ, ಪರಿಣಾಮಕಾರಿಯಾಗಿ ಕಲಿಯುತ್ತಾರೆ.
- ❑ **ಆಲೋಚನಾ ಶಕ್ತಿ, ಅರ್ಥೈಸಿಕೊಳ್ಳುವಿಕೆ, ವಿಮರ್ಶಾ ಮನೋಭಾವ** ಮಕ್ಕಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.
- ❑ ವಿದ್ಯಾರ್ಥಿಗಳಲ್ಲಿ **ಪ್ರಶ್ನಿಸುವ** ಚರ್ಚೆಗಳಲ್ಲಿ ಭಾಗವಹಿಸುವ ಸಾಮರ್ಥ್ಯವು ಹೆಚ್ಚು ಬೆಳೆಯುತ್ತದೆ.
- ❑ ಕಲಿಕೆಯನ್ನು **ದಿನನಿತ್ಯದ ಸನ್ನಿವೇಶ**ಗಳಿಗೆ ಸಂಬಂಧೀಕರಿಸಿ ಅಳವಡಿಸಿಕೊಳ್ಳುವ ಸಾಮರ್ಥ್ಯ ಬೆಳೆಯುತ್ತದೆ.
- ❑ ಇಲ್ಲಿ ಸಹ ವರ್ತಿ ಕಲಿಕೆ ಮತ್ತು ಪರಸ್ಪರ ಅನುಭವಗಳ ಹಂಚಿಕೆಯು ಉತ್ತಮವಾಗಿ ನಡೆಯುವುದರಿಂದ ಸಾಮಾಜಿಕ ಕೌಶಲ ಮತ್ತು **ಸಂವಹನಾ ಕೌಶಲ** ಅತ್ಯುತ್ತಮವಾಗಿ ಬೆಳೆಯುತ್ತದೆ.
- ❑ ವಿದ್ಯಾರ್ಥಿಯು ವಿವಿಧ ಆಯಾಮಗಳಲ್ಲಿ ಯೋಚಿಸಿ **ನಿರ್ಧರಿಸುವುದನ್ನು** ಕಲಿಯುತ್ತಾನೆ.
- ❑ ಕಲಿಕಾ ಪ್ರಕ್ರಿಯೆಯಲ್ಲಿ ತಾನೇ ಭಾಗವಹಿಸಿ, ಸಂಶೋಧಿಸಿ ಅಳವಡಿಸಿಕೊಳ್ಳುವುದರಿಂದ ಆಸಕ್ತಿಯು ಹೆಚ್ಚು ಕಾಲ ಉಳಿಯುತ್ತದೆ.

## 5E- ಮತ್ತು ತರಗತಿ ಪ್ರಕ್ರಿಯೆ:

ರಚನಾವಾದವನ್ನು ಅರಿತ ಮೇಲೆ ತರಗತಿ ನಿರ್ವಹಣೆಯು ಸುಗಮವಾಗಿ ಶಿಶು ಕೇಂದ್ರಿತ ಹಾಗೂ ಆಸಕ್ತಿದಾಯಕ ಚಟುವಟಿಕೆಗಳಿಂದ ಕೂಡಿರಬೇಕು ಎಂಬ ಕಾರಣಕ್ಕಾಗಿ **5ಇ ಗಳ ಮಾದರಿ**ಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರಖ್ಯಾತ ಶಿಕ್ಷಣ ಚಿಂತಕನಾದ *ಜಾನ್ ಡೂಯಿ* ವಿವರಿಸಿದ್ದ **'**ಅನುಭವ ಜನ್ಯ ಕಲಿಕೆ**'**ಹಾಗೂ *ಡೇವಿಡ್ ಕೋಲ್ಬ್* ಮಂಡಿಸಿದ್ದ **'**ಅನುಭವ ಜನ್ಯ ಕಲಿಕಾ ಚಕ್ರ**'** ಈ ಅಂಶಗಳನ್ನು ಆಧರಿಸಿ **ರೋಜರ್ ಬೈಬಿ** ಎಂಬಾತ ಪ್ರಥಮಬಾರಿಗೆ **5**ಇಗಳ ಕಲಿಕಾ ಮಾದರಿಯನ್ನು ಬಳಸಿಕೊಂಡಿದ್ದಾನೆ. ಇದು ವಿದ್ಯಾರ್ಥಿಗಳ ಸ್ವಯಂ ಕಲಿಕೆಗೆ ಹಾಗೂ ಕ್ರಿಯಾತ್ಮಕ ಜ್ಞಾನದ ನಿರ್ಮಾಣಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಲು ಅನುಕೂಲಕಾರನಿಗೆ (ಶಿಕ್ಷಕರಿಗೆ) ಸಹಾಯಕವಾಗುತ್ತದೆ.

ತರಗತಿಯಲ್ಲಿ ಕಲಿಕಾ ಪ್ರಕ್ರಿಯೆಯು ರಚನಾ ವಿಧಾನದ ನಿಯಮಗಳ ತಳಹದಿಯ ಮೇಲೆ ಸಾಗಬೇಕು. ಶಿಕ್ಷಕರು ವಿಷಯಾಂಶಗಳನ್ನು ತಾನು ಅರ್ಥ ಹೇಳುವ, ವಿವರಣೆ ನೀಡುವ ಬದಲಿಗೆ ವಿದ್ಯಾರ್ಥಿಗಳಿಂದಲೇ ಹೇಳಿಸುವ, ಚರ್ಚೆಗೆ

ಅವಕಾಶ ನೀಡಿ, ನಿರ್ಧಾರಕ್ಕೆ ಬರುವ, ಅವರ ಅಭಿಪ್ರಾಯದ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವ ರೀತಿಯಲ್ಲಿ ತರಗತಿಯನ್ನು ಸಾಗಿಸಬೇಕಾಗುತ್ತದೆ.

1. **Engage : ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು.**
2. **Explore : ಆವಿಷ್ಕರಿಸುವುದು/ಪತ್ತೆ ಹಚ್ಚುವುದು/ ಅನ್ವೇಷಣೆ /ಮಾಹಿತಿ ಸಂಗ್ರಹ**
3. **Explain /Express : ಅಭಿವ್ಯಕ್ತೀಕರಣ ಸ್ಪಷ್ಟಪಡಿಸುವುದು / ವಿವರಿಸುವುದು.**
4. **Eloborate /Expand : ವಿಸ್ತರಿಸುವುದು/ಅನ್ವಯ**
5. **Evaluation : ಮೌಲ್ಯಮಾಪನ**

## 5–E ಗಳ ಅರ್ಥವಿವರಣೆ

ವಿದ್ಯಾರ್ಥಿಗಳು ಸ್ವತಃ ಜ್ಞಾನವನ್ನು ಕಟ್ಟಿಕೊಳ್ಳಲು ಮತ್ತು ಶಿಕ್ಷಕರು ಸುಗಮ ಕ್ರಿಯಾತ್ಮಕ ತರಗತಿ ಯೋಜಿಸಲು , ರಚನಾವಾದವನ್ನು ಅಳವಡಿಸಿಕೊಳ್ಳಲು ಮಾಡಿರುವ ಪ್ರಯತ್ನವನ್ನು ಅಮೆರಿಕಾದ ಜೀವಶಾಸ್ತ್ರ ಪಠ್ಯವಸ್ತುವಿನ ಅಧ್ಯಯನ ಯೋಜನೆಯ ಪ್ರಮುಖ ಸಂಶೋಧಕರಾದ ಆಡಿರೋಜರ್ ಬೈಬಿರವರ ಮಾರ್ಗದರ್ಶನದಲ್ಲಿ ಒಂದು ಮಾದರಿ ಸಿದ್ಧಪಡಿಸಿದೆ ಇದನ್ನು "5–E " ಮಾದರಿ ಎಂದು ಕರೆಯಲಾಗಿದೆ.

ಮಕ್ಕಳ ಸಹಜ ಕಲಿಕೆ ಹಾಗೂ ಆಲೋಚನೆಗಳಿಗೆ ನೈಸರ್ಗಿಕವಾಗಿಯೇ ಹೊಂದಿರುವ ಈ 5–E ಮೂಲಾಂಶಗಳ ಅರಿವು ಪ್ರತಿಯೊಬ್ಬ ಶಿಕ್ಷಕರಿಗೂ ಅತ್ಯಗತ್ಯ.ಈ–5–E ಅಂಶಗಳು ಮಕ್ಕಳಲ್ಲಿ ಸಹಜವಾಗಿಯೇ ಆಲೋಚನಾ ಸಾಮರ್ಥ್ಯವನ್ನು ವೃದ್ಧಿಸಲು ಸಹಕಾರಿ ಯಾಗುತ್ತವೆ. ಆಲೋಚನಾ ಶಕ್ತಿಯನ್ನು ಬೆಳೆಸುವುದು ಶಿಕ್ಷಣದ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದ್ದು, ಮಗುವು ಎಲ್ಲಾ ಸನ್ನಿವೇಶಗಳಲ್ಲೂ ತನ್ನ ದೃಷ್ಟಿಕೋನದಲ್ಲಿ ಆಲೋಚಿಸಲು ಸೂಕ್ತವಾಗುವ ಅವಕಾಶ ನಿರ್ಮಾಣ ಮಾಡಿಕೊಡಬೇಕು ಎನ್ನುವುದು ಇದರ ಉದ್ದೇಶ.ಎಲ್ಲವನ್ನು ಶಿಕ್ಷಕರೇ ಹೇಳುವುದರ ಬದಲಿಗೆ ಮಕ್ಕಳೇ ಗ್ರಹಿಸಿ, ಆಲೋಚಿಸಿ, ಉತ್ತರಿಸಲು ಪೂರ್ಣಅವಕಾಶ ನೀಡಬೇಕು.
**ಉದಾಹರಣೆ** : ಅರಸ ಎಂಬ ಪದವನ್ನು ಕಲಿಸುವಾಗ ಅರಸನ ಚಿತ್ರ ತೋರಿಸಿ ಮಗುವಿಗೆ ಅಲೋಚಿಸಿ ಅಭಿಪ್ರಾಯಗಳನ್ನು ಹೇಳಲು ಅವಕಾಶ ಕೊಡಿ. ಇದರಿಂದ ಮನೋಬಿಂಬಗಳು ಮಗುವಿನ ಮೆದುಳಿನಲ್ಲಿ ರೂಪಿತವಾಗಿ ಪದ ಮತ್ತು ಅಕ್ಷರಗಳನ್ನು ಬೇಗ ಕಲಿತು ನೆನಪಿನಲ್ಲಿಟ್ಟುಕೊಳ್ಳುತ್ತದೆ.

**ಶಾಬ್ದಿಕ ಕಲಿಕೆಯಲ್ಲೂ ಚಿಂತನೆಗೆ ಪ್ರಾಶಸ್ತ್ಯವನ್ನು ನೀಡುವ ಚಟುವಟಿಕೆಗಳು ತರಗತಿ ಪ್ರಕ್ರಿಯೆಯಲ್ಲಿ ರಚನೆಯಾಗಬೇಕು**
**ಉದಾಹರಣೆ** : ಸಾಹಿತ್ಯ ಬೋಧನೆಯಲ್ಲಿ ನಾಟಕ ಸಾಹಿತ್ಯವನ್ನು ಅನುಕೂಲಿಸುವಾಗ ಪಾತ್ರಗಳನ್ನು ಹಾಗೂ ರಂಗ ಸಜ್ಜಿಕೆಯನ್ನು ಕಲ್ಪನೆಯಲ್ಲೇ ಸೃಷ್ಟಿಸಿ ಸಂಭಾಷಣೆಗಳನ್ನು ಧ್ವನಿ ಏರಿಳಿತದಲ್ಲಿ ಬೋಧಿಸಿದ್ದೇ ಆದರೆ ಮಕ್ಕಳಲ್ಲಿ ಕಲ್ಪನಾ ಶಕ್ತಿಯನ್ನು ಬೆಳಸಲು ಸಾಧ್ಯವಿದೆ. ತರಗತಿಯಲ್ಲಿ ಪ್ರತಿ ಮಗುವು ವಿಭಿನ್ನವಾಗಿದ್ದು, ವಿಭಿನ್ನ ಮಟ್ಟದ ಆಲೋಚನೆಗಳನ್ನು ಹೊಂದಿರುತ್ತಾರೆ. ಸುಗಮಕಾರ ಇವುಗಳೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ ಉತ್ತಮ ಆಲೋಚನೆಗಳು ಚಿಗುರುವಂತೆ ಮಾರ್ಗದರ್ಶನ ಮಾಡಬೇಕು.
**ಉದಾಹರಣೆ : ಸಂಧಿ ಪದ ಎನ್ನುವ ಪರಿಕಲ್ಪನೆ**

1. ಸಂಧಿಪದಗಳನ್ನು ಬಿಡಿಸಲು ತೊಡಗುವುದು – E-1
2. ಸಂಧಿಯಾಗುವಾಗ ಅಕ್ಷರಗಳು ಎಲ್ಲಿ ಕೂಡಿಕೊಂಡಿವೆ ಎಂಬುದನ್ನು ಪತ್ತೆ ಹಚ್ಚುವುದು – E-2
3. ಸಂಧಿ ಪದಗಳನ್ನು ಬಿಡಿಸಿ ಸಂಧಿ ಹೆಸರನ್ನು ತಿಳಿಸುವುದು – E-3
4. ಅದು ಹೇಗೆ ಸಂಧಿಪದವಾಯಿತು , ಸಂಧಿಯ ವಾಕ್ಯವನ್ನು ತಿಳಿಸುವುದು – E-4
5. ವಿದ್ಯಾರ್ಥಿ ತಾನು ಹೇಳಿದ ಉತ್ತರವನ್ನು ತಪ್ಪೋ /ಸರಿಯೋ ಎಂದು ಪರೀಕ್ಷಿಸಿಕೊಳ್ಳುವುದು – E-5

**1. Engage : (ತೊಡಗಿಸು) ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು.**

1. ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದನ್ನು ಅಪೇಕ್ಷಿಸುತ್ತದೆ.
2. ವಿದ್ಯಾರ್ಥಿಗಳ ಪೂರ್ವಜ್ಞಾನದ ತುಲನೆ
3. ವಿದ್ಯಾರ್ಥಿಗಳಲ್ಲಿ ಪರಿಕಲ್ಪನೆಯ ಬಗ್ಗೆ ಆಸಕ್ತಿ ಮೂಡಿಸುವುದು
4. ಸೂಕ್ತ ಚಟುವಟಿಕೆಗಳ ಮೂಲಕ ಸಮಸ್ಯಾತ್ಮಕ ಸನ್ನಿವೇಶವನ್ನು ನಿರ್ಮಿಸುವುದು

ವಿದ್ಯಾರ್ಥಿಗಳನ್ನು ಕಲಿಕೆಗೆ ಅಣಿಗೊಳಿಸುವ ಮೊದಲ ಪ್ರಕ್ರಿಯೆ ಇದಾಗಿದೆ. ಅಂದಿನ ಪಾಠವನ್ನು ಅನುಕೂಲಿಸುವ ಮುಂಚಿತವಾಗಿ ಅಥವಾ ಅನುಕೂಲಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪೂರ್ವ ಜ್ಞಾನದೊಂದಿಗೆ ತೊಡಗಿಕೊಳ್ಳುವಂತೆ ಮಾಡುವ ಹಂತವಾಗಿದೆ.

**ಉದಾ: ಶಬರಿ– ಪಾತ್ರಗಳ ಪರಿಚಯ ಹೇಳಿಸುವುದು.**

ಕಲಿಕೆಗೆ ವಿದ್ಯಾರ್ಥಿಯ ಕುತೂಹಲವನ್ನು ಹೆಚ್ಚಿಸುವ, ಗಮನವನ್ನು ಕೇಂದ್ರೀಕರಿಸುವಂತೆ ಮಾಡುವ ಕೆಲಸ ಈ ಹಂತದಲ್ಲಿ ಆಗಬೇಕು. ತಾನು ಕಲಿಯಬೇಕಾಗಿರುವ ವಿಷಯವನ್ನು ತಾನೇ ಹುಡುಕುವ, ಓದುವ, ಬರೆಯುವ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ಮಗ್ನರಾಗುವಂತೆ ಮಾಡಬೇಕು. ಈ ಹಂತದಲ್ಲಿ ವಿದ್ಯಾರ್ಥಿಗಳಿಂದ ಕಥೆಗಳು, ಹಾಡುಗಳು, ಘಟನೆಗಳನ್ನು ಹೇಳಿಸುವ ಮೂಲಕ ಅಥವಾ ಅನುಕೂಲಕಾರನು ಹೇಳುವ ಮೂಲಕ/ತಂತ್ರಜ್ಞಾನವನ್ನು ಬಳಸಿಕೊಂಡು ವಿದ್ಯಾರ್ಥಿಯನ್ನು ತೊಡಗುವಂತೆ ಮಾಡಬೇಕು. ವಿದ್ಯಾರ್ಥಿಯನ್ನು ಭೌತಿಕವಾಗಿ ಮತ್ತು ಮಾನಸಿಕವಾಗಿ ತೊಡಗಿಸುವುದು ಈ ಹಂತದ ಮುಖ್ಯ ಉದ್ದೇಶವಾಗಿದೆ. ಕೆಲವು ಸಂದರ್ಭಗಳಲ್ಲಿ ತೊಡಗಿಸುವ ಕಾರ್ಯವನ್ನು ಒಂದೆರಡು ದಿನಗಳ ಮುಂಚಿತವಾಗಿಯೇ ಮಾಡಬೇಕಾಗಬಹುದು. ನಿಗದಿತ ವಿಷಯದ ಬಗ್ಗೆ ಮಾಹಿತಿ ಸಂಗ್ರಹಣೆ, ಮಂಡನೆ, ವೀಕ್ಷಣೆ ಇತ್ಯಾದಿಗಳಿಗೆ ತೊಡಗಿಸುವ ಕ್ರಿಯೆಯು ನಡೆಯಬೇಕಾಗುತ್ತದೆ.

**ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವ ಪ್ರಕಿಯೆಗಳು**

1) ಆಲಿಸುವಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.
2) ಗಟ್ಟಿ ಓದುವಿನಲ್ಲಿ ತೊಡಗಿಸಿಕೊಳ್ಳುತ್ತಾರೆ. (ಶಿಕ್ಷಕರ ಮಾದರಿ ಓದು ಮತ್ತು ವಿದ್ಯಾರ್ಥಿಗಳ ಗಟ್ಟಿ ವಾಚನ)
3) ಮೌನ ಓದುವಿನಲ್ಲಿ ತೊಡಗಿಸಿಕೊಳ್ಳುತ್ತಾರೆ.
4) ಪದಗಳ ಅರ್ಥಗಳನ್ನು ಹುಡುವಿಕೆಯಲ್ಲಿ ಮತ್ತು ಗ್ರಹಿಸುವಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ.
5) ಉತ್ತರಗಳನ್ನು ಅಭಿವ್ಯಕ್ತಿಸುವಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. (ಲಿಖಿತ + ಮೌಖಿಕ)
6) ಪಠ್ಯದಲ್ಲಿನ ವ್ಯಾರಣಾಂಶಗಳನ್ನು ಗುರುತಿಸಲು ತೊಡಗಿಸಿಕೊಳ್ಳುತ್ತಾರೆ.
7) ಶಿಕ್ಷಕರ ಪಾಠ ಅರ್ಥೈಸುವಾಗ ಮುಖ್ಯಾಂಶಗಳನ್ನು ಬರೆದುಕೊಳ್ಳುವಲ್ಲಿ ತೊಡಗಿಸಿಕೊಳ್ಳುತ್ತಾರೆ.
8) ಚರ್ಚೆಮಾಡುವುದರಲ್ಲಿ ತೊಡಗಿಸಿಕೊಳ್ಳುತ್ತಾರೆ.
9) ವಾಕ್ಯರಚನೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಹೀಗೆ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

**ಉದಾಹರಣೆಗೆ**

**ತಲಕಾಡಿನ ವೈಭವ (ಪ್ರವಾಸ ಕಥನ)**

ಕರ್ನಾಟಕದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳನ್ನು ಪಟ್ಟಿ ಮಾಡಿರಿ
ಒಂದು ಗುಂಪಿನ ವಿದ್ಯಾರ್ಥಿಗಳು ಸ್ಥಳಗಳ ಹೆಸರನ್ನು ಹೇಳುತ್ತಾರೆ.
ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಒಂದನೇ ಗುಂಪಿನ ವಿದ್ಯಾರ್ಥಿಗಳು ಹೇಳಿದ ಸ್ಥಳದ ಹೆಸರನ್ನು ಬರೆಯುತ್ತಾರೆ.

**ಛಲಮನೆ ಮೆರೆವೆಂ**

ಹಳಗನ್ನಡದ ಕವಿಗಳನ್ನು ಹೆಸರಿಸಿ.
ವಿದ್ಯಾರ್ಥಿಗಳು ಹಳಗನ್ನಡ ಕವಿಗಳ ಹೆಸರನ್ನು ಬರೆಯುತ್ತಾರೆ.
ಕೆಲವು ಹಳಗನ್ನಡ ಕವಿಗಳ ಪರಿಚಯವಿರುವ ಚೀಟಿಗಳನ್ನು ನೀಡಿ ಓದಿಸುವುದು.
(ಅದರಲ್ಲಿ ರನ್ನ ಕವಿಯ ಪರಿಚಯದ ಚೀಟಿ ಇರುತ್ತದೆ.)

## 2.Explore : ಆವಿಷ್ಕರಿಸುವುದು/ಪತ್ತೆ ಹಚ್ಚುವುದು/ ಶೋಧಿಸು /ಅನ್ವೇಷಣೆ /ಮಾಹಿತಿ ಸಂಗ್ರಹ

ಬೋಧನಾ ಪ್ರಕ್ರಿಯೆ ಕೇವಲ ಉಪನ್ಯಾಸ ವಿಧಾನದಿಂದ ಕೂಡಿದರೆ ಮಕ್ಕಳಲ್ಲಿ ಆಲೋಚನೆಗಳ ಬೆಳವಣಿಗೆ ಸಾಧ್ಯವಿಲ್ಲ. ಆದ್ದರಿಂದ 'ಅನ್ವೇಷಣಾ' ಕಲಿಕೆಯನ್ನು ಅಳವಡಿಸಿಕೊಳ್ಳಬೇಕು. ಸಂರಚನಾವಾದದ ನಿಲುವು ಕೂಡ ಇದೇ ಆಗಿದ್ದು, ಕಲಿಕಾರ್ಥಿಯು ಹೊಸದನ್ನು ಸೃಷ್ಟಿಸುವ ಅವಕಾಶವನ್ನು ಅನುಕೂಲಕಾರ ಒದಗಿಸಿಕೊಡಬೇಕು. ಸಂರಚನಾವಾದವು ಮಕ್ಕಳು ಆಲೋಚಿಸಿ ಸ್ವಜ್ಞಾನ ಕಟ್ಟಿಕೊಳ್ಳುವಂತಹ ಸ್ವಕಲಿಕಾ ವಿಧಾನವಾಗಿದೆ. ಈ ಕಲಿಕಾ ವಿಧಾನದಿಂದ ಮಕ್ಕಳಲ್ಲಿ ಹೆಚ್ಚಿನ ಆಲೋಚನಾ ಶಕ್ತಿಯನ್ನು ಬೆಳೆಸಲು ಸಾಧ್ಯವಿದೆ. ಕಲಿಕೆಗೆ ಅಣಿಗೊಳ್ಳುವ ನಿಟ್ಟಿನಲ್ಲಿ ತೊಡಗಿರುವ ವಿದ್ಯಾರ್ಥಿಯನ್ನು ಈ ಹಂತದಲ್ಲಿ ಅನುಕೂಲಕಾರರು (ಶಿಕ್ಷಕರು) ಪಾಠಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಮಕ್ಕಳ ಮುಂದಿರಿಸಿ ಮುಕ್ತವಾಗಿ ಚರ್ಚಿಸಲು ಅವಕಾಶ ನೀಡಬೇಕು. ಪರಸ್ಪರ ಚರ್ಚಿಸುವ ಮೂಲಕ ತಮ್ಮ ಅನುಭವಗಳ ನೆಲೆಯಲ್ಲಿ ಜ್ಞಾನವನ್ನು ಸುಗಮಕಾರರು ನಿರ್ಮಿಸಬೇಕು. ಈ ಹಂತದಲ್ಲಿ ವಿದ್ಯಾರ್ಥಿಗಳು ಗೊಂದಲಗಳಿಗೆ ಒಳಗಾಗುತ್ತಾರೆ. ಆದ್ದರಿಂದ ಇಲ್ಲಿ ಚರ್ಚಿಸಿ ತೀರ್ಮಾನಕ್ಕೆ ಬರಲು ಸಹಾಯ ಮಾಡಬೇಕು.

**ಉದಾ:** ಎದೆಗೆ ಬಿದ್ದ ಅಕ್ಷರ– ಗುಡಿ ಕಟ್ಟುವ ಕಾರ್ಯ.

ವಿಶೇಷವಾಗಿ ಭಾಷಾ ವಿಷಯದಲ್ಲಿ ಆಯ್ದ ಗದ್ಯಭಾಗವನ್ನು ಶಿಕ್ಷಕರು ಓದುವುದು ಅಥವಾ ಓದಲು ಅಪೇಕ್ಷಿಸುವ ವಿದ್ಯಾರ್ಥಿಗಳಿಂದ ಓದಿಸಿ ನಂತರ ಮೌನವಾಗಿ ಓದಲು ಅವಕಾಶ ನೀಡಿ ಶಿಕ್ಷಕರು ತರಗತಿಯನ್ನು ಅವಲೋಕಿಸುವುದು. ಓದಿ ಅರ್ಥೈಸಿಕೊಳ್ಳಲು, ಗ್ರಹಿಸಲು, ನಿರ್ಧಾರಕ್ಕೆ ಬರಲು ಅನುಕೂಲಕಾರರು ಸಹಾಯ ಮಾಡಬೇಕು.

**ವಿದ್ಯಾರ್ಥಿಗಳು ಶೋಧಿಸುವ/ಅನ್ವೇಷಿಸುವ ಪ್ರಕಿಯೆಗಳು**

- ಅನ್ವೇಷಣಾ ಮನೋಭಾವ ಮಗುವಿಗೆ ಸಹಜವಾಗಿಯೇ ಇರುತ್ತವೆ.
- ಅನ್ವೇಷಣಾ ಚಟುವಟಿಕೆಗಳು ಮಕ್ಕಳಲ್ಲಿ ಪೂರ್ವಜ್ಞಾನ ಹಾಗೂ ಹೊಸ ಅನುಭವಗಳ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತವೆ.
- ಹೊಸ ವಿಷಯಗಳನ್ನು, ಕೌಶಲಗಳನ್ನು, ಅನುಭವಗಳನ್ನು ತನ್ನದಾಗಿಸಿಕೊಳ್ಳುತ್ತದೆ.
- ವಿದ್ಯಾರ್ಥಿಗಳು ನೀಡಿದ ವಿಷಯಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು.
- ವಿದ್ಯಾರ್ಥಿಗಳು ನೀಡಿದ ವಿಷಯಗಳ ಬಗ್ಗೆ ಗುಂಪಿನಲ್ಲಿ ಚರ್ಚಿಸುವುದು.
- ವಿದ್ಯಾರ್ಥಿಗಳು ನೀಡಿದ ವಿಷಯಗಳ ಬಗ್ಗೆ ವಿಚಾರವಂತರ ಅಭಿಪ್ರಾಯಗಳನ್ನು ಪಟ್ಟಿಮಾಡುವುದು.
  **ಉದಾ:** ಜನಪದ ಒಗಟುಗಳ ಸಂಗ್ರಹ
- ವಿದ್ಯಾರ್ಥಿಗಳು ನೀಡಿದ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಗುರುತಿಸುವುದು.
- ಸಮಸ್ಯೆ ನಿವಾರಣೆಗೆ ಪರಿಹಾರೋಪಾಯಗಳನ್ನು ಹುಡುಕುವುದು.
- ಕವಿಗಳ , ಪ್ರೇಕ್ಷಣೀಯ ಸ್ಥಳಗಳ ಮಾಹಿತಿ ಸಂಗ್ರಹಿಸುವುದು
- ಜನಪದ ಕಲೆಗಳ ಮಾಹಿತಿ ಸಂಗ್ರಹಿಸುವುದು
- ಹೊಸ ಪದಗಳ ಅರ್ಥ ಹುಡುಕುವುದು.
- ಹಳಗನ್ನಡ ಪದಗಳನ್ನು ಬಿಡಿಸಿ ಓದುವನ್ನು ಪತ್ತೆ ಮಾಡುತ್ತಾರೆ.
- ವಿರುದ್ಧ ,ತತ್ಸಮ –ತದ್ಭವ , ಸಮನಾರ್ಥಕ ಪದಗಳನ್ನು ಹೇಳುವುದು.
- ಸಂಧಿ, ಸಮಾಸ ಇತ್ಯಾದಿ ವ್ಯಾಕರಣಾಂಶಗಳನ್ನು ಗುರುತಿಸಿ ಬರೆಯುವುದು.
- ವಿಭಕ್ತಿ ಪ್ರತ್ಯಯ,ಛಂದಸ್ಸು,ಅಲಂಕಾರಗಳನ್ನು ಪತ್ಯೆ ಹಚ್ಚುವುದು
- ನುಡಿಗಟ್ಟು ರಚನೆ
- ಪದರಚನಾ ನಿಯಮ ಪತ್ತೆ ಮಾಡುತ್ತಾರೆ.
- ಪಾಠ , ಪದ್ಯಗಳ ಸಾರಾಂಶ , ಮೌಲ್ಯಗಳನ್ನು ಗುರುತಿಸುತ್ತಾರೆ.

**3. Explain /Express : ಅಭಿವ್ಯಕ್ತೀಕರಣ ಸ್ಪಷ್ಟಪಡಿಸುವುದು/ವಿವರಿಸುವುದು/ ಸ್ಪಷ್ಟಪಡಿಸುವುದು / ವಿವರಿಸುವುದು.**

ಶಿಕ್ಷಕರು ನೀಡುವ ವಿಷಯ ವಸ್ತು ಹಾಗೂ ಅನ್ವೇಷಿಸಿ ಪಡೆದ ಅನುಭವಗಳ ಆಧಾರದ ಮೇಲೆ ಆ ವಿಷಯ ವಸ್ತುವಿನ ವಿವರಣೆ ನೀಡುವ ಅವಕಾಶ ಮಗುವಿಗೆ ಲಭ್ಯವಾಗಬೇಕು.ವಿದ್ಯಾರ್ಥಿಗಳು ಎರಡನೇ(E–2) ಹಂತದಲ್ಲಿ ಗ್ರಹಿಸಿದ / ಕಂಡುಕೊಂಡ ಪರಿಹಾರೋಪಾಯಗಳನ್ನು ತಾನೇ ರಚಿಸಿಕೊಂಡರೂಪದಲ್ಲಿ ಅಭಿವ್ಯಕ್ತಿಗೊಳಿಸಲು ಅವಕಾಶ ಕಲ್ಪಿಸುವುದು. ಇದೇ ಸಂದರ್ಭದಲ್ಲಿ ಅನುಕೂಲಕಾರರು ಸಹ ವಿದ್ಯಾರ್ಥಿಗಳ ವಿಚಾರಗಳಿಗೆ ಪೂರಕವಾಗಿ ನಿಯಮಗಳನ್ನು, ವ್ಯಾಖ್ಯಾನಗಳನ್ನು ಹಾಗೂ ಸ್ಪಷ್ಟನೆಗಳನ್ನು ನೀಡಬೇಕು. ಮಕ್ಕಳ ತಪ್ಪು ಗ್ರಹಿಕೆಗಳನ್ನು ಸರಿಪಡಿಸಬಹುದಾಗಿದೆ. ವಿಷಯವನ್ನು ಅರ್ಥೈಸುವ ಪ್ರಯತ್ನ ಈ ಹಂತದಲ್ಲಿ ಪ್ರಧಾನವಾದುದು. ಮಕ್ಕಳಿಗೆ ಪ್ರಶ್ನೆ,ಹೋಲಿಕೆ, ಉದಾಹರಣೆ, ಪ್ರಾತ್ಯಕ್ಷಿಕೆ ಮುಂತಾದವುಗಳನ್ನು ಅನುಸರಿಸಿ ಅನುಕೂಲಿಸಬೇಕು. ಮಕ್ಕಳಿಗೆ ಮುಕ್ತ ಅವಕಾಶ ನೀಡುವ ಮೂಲಕ ಅವರಲ್ಲಿ ಅಂತರ್ಗತವಾಗಿರುವ ವಿಚಾರಗಳನ್ನು ಹೊರಗೆಳೆಯುವ ಪ್ರಯತ್ನ ಇಲ್ಲಿ ಸಾಗಬೇಕಿದೆ. ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿ ಅನ್ವೇಷಿಸಿದ ವಿದ್ಯಾರ್ಥಿಗಳು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಂತ ಇದಾಗಿದೆ. ಕಲಿಕಾರ್ಥಿಯು ತನ್ನ ಸಹಪಾಠಿಗಳೊಂದಿಗೆ ಚರ್ಚಿಸಿ, ಅಂತಿಮವಾಗಿ ಗ್ರಹಿಸಿದ, ಅಭಿಪ್ರಾಯಗಳನ್ನು ತನ್ನದೇ ಸ್ವಂತ ಪದಗಳನ್ನು ಬಳಸಿಕೊಂಡು ವಿವರಿಸುವುದಕ್ಕೆ ಮುಕ್ತ ಅವಕಾಶ ನೀಡಬೇಕು. ವಿದ್ಯಾರ್ಥಿ ವಿವರಿಸುವ ಸಂದರ್ಭದಲ್ಲಿ ಇತರ ವಿದ್ಯಾರ್ಥಿಗಳು ಗಮನವಿಟ್ಟು ಆಲಿಸಬೇಕು.

– ಹಿಂದಿನ ಹಂತದಲ್ಲಿ ವಿದ್ಯಾರ್ಥಿಗಳು ಸಂಗ್ರಹಿಸಿದ ಮಾಹಿತಿಗಳನ್ನು ಕುರಿತು ವಿವರಣೆಯನ್ನು ನೀಡಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು.
– ಗುಂಪಿನಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಕುರಿತು ವಿವರಣೆ ಪಡೆಯುವುದು.
– ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಅಭಿವ್ಯಕ್ತಪಡಿಸುವುದು.
– ವಿದ್ಯಾರ್ಥಿಗಳು ತಾವು ಸಂಗ್ರಹಿಸಿದ ಮಾಹಿತಿ, ತಿಳಿದುಕೊಂಡ ವಿಚಾರಗಳ ಬಗ್ಗೆ ತಮ್ಮದೇ ವಾಕ್ಯಗಳಲ್ಲಿ ಅಭಿವ್ಯಕ್ತಪಡಿಸುತ್ತಾರೆ.
– ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು (ಮೌಖಿಕ ಮತ್ತು ಲಿಖಿತವಾಗಿ)
– ಕತೆಗಳನ್ನು ಹೇಳುವುದು , ಸಾರಾಂಶವನ್ನು ಬರೆಯುವುದು,
– ಪದ್ಯಗಳನ್ನು ಹಾಡುವುದು, ಒಗಟುಗಳನ್ನು ಬಿಡಿಸುವುದು.
– ಭಾಷಣ , ಚರ್ಚೆ , ಅಭಿನಯ

**4. Eloborate /Expand : ವಿಸ್ತರಿಸುವುದು/ಅನ್ವಯ**

ತರಗತಿಗಳು ಅಂತರ್‌ಶಿಸ್ತೀಯ ಬೋಧನ ಕ್ರಮವಾಗಿ ಬದಲಾಗಲಿ. ಅಂದರೆ ಒಂದು ವಿಷಯವನ್ನು ಬೋಧಿಸುವಾಗ ಮತ್ತೊಂದು ವಿಷಯವನ್ನು ಕಲಿಸುವ /ಕಲಿಯುವ /ಅನ್ವಯಿಸಿಕೊಳ್ಳುಲು ಸಾಧ್ಯವಿದೆ.

**ಉದಾಹರಣೆಗೆ :** ಪದ್ಯವನ್ನು ಬೋಧಿಸುವಾಗ ಸಂಗೀತದ ವಾದ್ಯಗಳನ್ನು ಬಳಸಿದರೆ ವಿದ್ಯಾರ್ಥಿಗಳಿಗೆ ಸಂಗೀತದ ಜ್ಞಾನ ಉಂಟಾಗುತ್ತದೆ.

ನಾಟಕವನ್ನು ರೂಪದಲ್ಲಿರುವ ಪಾಠಗಳನ್ನು ಬೋಧಿಸುವಾಗ ವಿದ್ಯಾರ್ಥಿಗಳಿಗೆ ಅನುಕೂಲಿಸಿದರೆ ವಿದ್ಯಾರ್ಥಿಗಳಲ್ಲಿ ಅಭಿನಯ ಕಲೆ ಮೂಡುತ್ತದೆ. ಮಾತನಾಡುವ ಕೌಶಲ್ಯ ಬೆಳೆಯತ್ತದೆ.

(ಸಂಗೀತ ,ಅಭಿನಯ ಕಲೆಗಳು ವಿದ್ಯಾರ್ಥಿಯ ಮುಂದಿನ ಜೀವನಕ್ಕೆ ಸಹಾಯವಾಗಬಹುದು)

ವಿದ್ಯಾರ್ಥಿಗಳು ತಾವು ಅರ್ಥೈಸಿಕೊಂಡ ವಿಷಯಾಂಶಗಳನ್ನು ಹೊಸ ಹೊಸ ಸನ್ನಿವೇಶಗಳಿಗೆ ಅನ್ವಯಿಸುವುದಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಬೇಕು. ಹೊಸ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳುವುದು, ಅವರ ಕಲ್ಪನೆಗಳನ್ನು ವಿಕಾಸಗೊಳಿಸುವುದು, ಹೊಸ ರೀತಿಯ ಪ್ರಶ್ನೆಗಳನ್ನು ಕೇಳುವ ಸ್ಥಿತಿಯನ್ನು ನಿರ್ಮಿಸುವುದು ಈ ಹಂತದಲ್ಲಿ ಆಗಬೇಕು.

- **ಉದಾ:** ಎದೆಗೆ ಬಿದ್ದ ಅಕ್ಷರ–ಜಾಗತೀಕರಣ.

ಪಠ್ಯವನ್ನು ಮೀರಿದ ಚಿಂತನೆ, ಚರ್ಚೆಗಳು ಇಲ್ಲಿ ಆಗಬೇಕು. ಕಲಿಕಾರ್ಥಿಯು ತಾನು ಕಲಿತದ್ದನ್ನು ನಿಜ ಜೀವನಕ್ಕೆ ಹೇಗೆ ಅಳವಡಿಸಿಕೊಳ್ಳುತ್ತಾನೆ ಎಂಬುದು ಇಲ್ಲಿ ಪ್ರಮುಖವಾಗುತ್ತದೆ.

ಕಥೆ/ಪದ್ಯವನ್ನು ಆಲಿಸಿದ ವಿದ್ಯಾರ್ಥಿ ತನಗೆ ಹೊಳೆದ ಹೊಸ ವಿಷಯವನ್ನು ಆಧಾರವಾಗಿಟ್ಟುಕೊಂಡು ತಾನು ಕಥೆ/ಕವನ ಬರೆಯಲು ಯತ್ನಿಸಬಹುದು. ವಿದ್ಯಾರ್ಥಿ ಹೊಸದನ್ನು ಓದಲು ಬಯಸುವುದು ಸಹ ವಿಸ್ತರಣೆಯ ಒಂದು ಭಾಗವಾಗಿದೆ. **ಉದಾ:** ಬೆಡಗಿನ ತಾಣ ಜಯಪುರ– ಪ್ರವಾಸದ ಅನುಭವ

ತಾನು ಮಾಡಿದ ಚಟುವಟಿಕೆಗಳ ಆಧಾರದ ಮೇಲೆ ಪಡೆದ ಅನುಭವಗಳನ್ನು ವಿಸ್ತರಿಸಿಕೊಳ್ಳಲು ಅವಕಾಶ ನೀಡಬೇಕು. ಚರ್ಚೆ ಮತ್ತು ಹೋಲಿಕೆ ಮಾಡಲು ಅವಕಾಶ ನೀಡಿದರೆ ತಾನು ಕಲಿತದ್ದನ್ನು ಅರ್ಥೈಸಿಕೊಂಡು ಅನ್ವಯಿಸಿಕೊಳ್ಳಲು ಸಾಧ್ಯವಾಗುತ್ತದೆ.

- E-3- ಹಂತದಲ್ಲಿ ವಿದ್ಯಾರ್ಥಿಗಳು ತಾವು ರಚಿಸಿದ ಜ್ಞಾನವನ್ನು ಇನ್ನೂ ಅನೇಕ ನೂತನ ಸನ್ನಿವೇಶದಲ್ಲಿ ಅನ್ವಯಿಸಲು ಅವಕಾಶ ಕಲ್ಪಿಸಲು ಯೋಜಿಸಬೇಕು. ಇದು ಸವಾಲಾಗಿ ಪರಿಣಮಿಸುವಂತಿರಬೇಕು.
– ಗಳಿಸಿದ ಜ್ಞಾನ ದೃಢವಾಗಿ ಬೆಳೆಯುವುದು. ಪಡೆದ ಹೊಸ ಜ್ಞಾನದ ಅನ್ವಯವನ್ನು ಕಂಡುಕೊಂಡಾಗ ನೂತನ ಸಂಬಂಧಗಳ ಕಲ್ಪನೆ ಮೂಡುವುದು
– ಪಠ್ಯದಲ್ಲಿರುವ ಘಟನೆಗಳನ್ನು ,ಮೌಲ್ಯಗಳನ್ನು ತನ್ನ ಜೀವನದಲ್ಲಿ ಕಂಡ / ಅನುಭವಿಸಿದ ಘಟನೆಗಳನ್ನು ಕುರಿತು ಹೋಲಿಸಿಕೊಂಡು ವಿಸ್ತರಿಸಿ ಹೇಳುವುದು.
– ವಿದ್ಯಾರ್ಥಿಯು ತಾನು ಪಡೆದುಕೊಂಡ ಜ್ಞಾನವನ್ನು ನಿಜಜೀವನದ ಸನ್ನಿವೇಶಕ್ಕೆ ಸಮೀಕರಿಸುವುದು.


## 5.Evaluation : ಮೌಲ್ಯಮಾಪನ

ಅಂತಿಮವಾಗಿ ಮಗು ಮಾಡಿದ ಚಟುವಟಿಕೆಯ ಮೌಲ್ಯ ಹಾಗೂ ಪ್ರತಿಫಲಗಳನ್ನು ಸ್ವತಃ ನೋಡಲು ಅವಕಾಶ ಮಾಡಿಕೊಡಬೇಕು. ಇದು ಮಗುವಿನ ನಂಬಿಕೆ, ಅರ್ಥಗ್ರಹಣ ಮತ್ತು ಕೌಶಲಗಳನ್ನು ಬದಲಾವಣೆ ಮಾಡಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಮೌಲ್ಯಮಾಪನವೆಂದರೆ ಇಲ್ಲಿ ಅಂಕಗಳಿಂದ ಅಳೆಯುವ ಕ್ರಿಯೆ ಎಂದು ತಿಳಿಯಬಾರದು. ಕಲಿಕಾರ್ಥಿಯು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿರುವ ಸಂದರ್ಭಗಳಲ್ಲಿ ಆತನನ್ನು ಗಮನಿಸುವ ಕ್ರಿಯೆ ಇದಾಗಿದೆ. ಅಂದರೆ *ತೊಡಗಿಸುವ ಹಂತದಿಂದ ಆರಂಭವಾಗುವ ಇದು ವಿಸ್ತರಿಸುವ ಹಂತದಲ್ಲೂ ನಡೆಯುತ್ತದೆ.* ಈ ಹಂತಗಳಲ್ಲಿ ಮಗು ಎಷ್ಟು ಕಲಿಯಿತು ಎನ್ನುವುದಕ್ಕಿಂತ ಹೇಗೆ ಕಲಿಯಿತು ಎಂದು ನೋಡುವುದು ಮುಖ್ಯವಾಗುತ್ತದೆ. ಅಂದರೆ ಹೇಗೆ ತೊಡಗಿಸಿಕೊಂಡಿದ್ದಾನೆ, ಹೇಗೆ ಅನ್ವೇಷಿಸುತ್ತಾನೆ, ಹೇಗೆ ವಿವರಿಸುತ್ತಾನೆ ಮತ್ತು ವಿಸ್ತರಿಸುತ್ತಾನೆ ಎಂದು ಗಮನಿಸುವುದು ಮುಖ್ಯವಾಗಿದೆ. ಇಲ್ಲಿ ಅಂಕಗಳ ಮೂಲಕ ಅಳೆಯುವುದಕ್ಕಿಂತ ಮಾನಕಗಳ ಮೂಲಕ ಅಳೆಯುವುದು ಹೆಚ್ಚು ಸೂಕ್ತ.

ವಿದ್ಯಾರ್ಥಿಯ ಕಲಿಕೆಯನ್ನು ಈ ಹಿನ್ನಲೆಯಲ್ಲಿ ಯೋಚಿಸಿದಾಗ ಮೌಲ್ಯಮಾಪನವು ಕೇವಲ ಪ್ರಮಾಣಗಳಿಗೆ ಸೀಮಿತವಾಗದೆ ಗುಣಾತ್ಮಕವಾದ ಹಿಮ್ಮಾಹಿತಿ ನೀಡುವ ಪ್ರಕ್ರಿಯೆಯಾಗಬೇಕು.

– ಶಿಕ್ಷಕರು ಸ್ವಮೌಲ್ಯಮಾಪನ ಮಾಡಿಕೊಳ್ಳುವುದು.
– ಶಿಕ್ಷಕರು ವಿದ್ಯಾರ್ಥಿಯು ಪ್ರತಿ ಕಲಿಕಾ ಹಂತದಲ್ಲಿಯೂ ಹೇಗೆ ತೊಡಗಿಸಿಕೊಳ್ಳುತ್ತಾನೆ ಹಾಗೂ ಜ್ಞಾನವನ್ನು ಯಾವ ಮಟ್ಟದಲ್ಲಿ ಪಡೆದುಕೊಂಡಿದ್ದಾನೆ ಎಂಬುದನ್ನು ಗುರುತಿಸುವುದು.
– ವಿದ್ಯಾರ್ಥಿಯ ಕಲಿಕಾ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡುವುದು ಮತ್ತು ವಿದ್ಯಾರ್ಥಿಯು ಸ್ವಮೌಲ್ಯಮಾಪನ ಮಾಡಿಕೊಳ್ಳಲು ಅನುಕೂಲಿಸುವುದು.

– ವಿದ್ಯಾರ್ಥಿಗಳು ರಚಿಸಿಕೊಂಡ ಜ್ಞಾನ ಎಷ್ಟರಮಟ್ಟಿಗೆ ಪೂರ್ಣಸ್ಥಿತಿಯ ಕಡೆಗೆ ಸಾಗುತ್ತಿದೆ ಎಂಬುದರ ಪರಿಶೀಲನೆಯನ್ನು ಕೈಗೊಳ್ಳಬೇಕಾಗುತ್ತದೆ.
– ಇದಕ್ಕಾಗಿ ಮೌಲ್ಯಮಾಪನದ ವಿವಿಧ ತಂತ್ರಗಳನ್ನು ಬಳಸಬಹುದು.
– ಮೌಲ್ಯಮಾಪನ ತುಣುಕಾಗಿರದೆ ಸಮಗ್ರ ಮತ್ತು ನಿರಂತರ ವಾಗಿರಬೇಕು.




*****

## 4. ಗದ್ಯ ಸಾಹಿತ್ಯ ಬೋಧನೆ

**ಗದ್ಯ ಸಾಹಿತ್ಯ ಎಂದರೇನು ?**

- ಆಡು ಮಾತಿನ ಶಿಷ್ಟರೂಪವೇ ಗದ್ಯ
- ಪದ್ಯವಲ್ಲದ್ದು ಯಾವುದೋ ಅದು ಗದ್ಯ
- ಛಂದೋಬದ್ಧವಲ್ಲದ ವಾಕ್ಯಗಳ ಸರಣಿಯೇ ಗದ್ಯ
- ಪದ, ಪದಗುಚ್ಛ, ನುಡಿಗಟ್ಟುಗಳನ್ನು ಕರ್ತೃ ,ಕರ್ಮ,ಕ್ರಿಯೆಗಳು ನಿಯತಸ್ಥಾನದಲ್ಲಿ ಇರುವಂತೆ ವ್ಯವಸ್ಥಿತವಾಗಿ ಜೋಡಿಸಲ್ಪಟ್ಟ ವಾಕ್ಯಗಳ ಸರಣಿಯೇ ಗದ್ಯ.
- ಪದ, ವಾಕ್ಯಗಳಿಂದೊಡಗೂಡಿ ವಿಷಯ ಪ್ರತಿಪಾದಕವಾಗಿ , ತಾರ್ಕಿಕವಾದ ರೀತಿಯಲ್ಲಿ ನಿರೂಪಣೆಯಾಗಿರುವುದೇ ಗದ್ಯ.
- 'Prose' ಎಂಬ ಪದವು ಲ್ಯಾಟಿನ್ ಭಾಷೆಯ 'Prosa' ಎಂಬ ಪದದಿಂದ ಬಂದಿದೆ.ಇದರ ಅರ್ಥ 'ನೇರವಾಗಿ ಹೇಳುವುದು'.
- ಹೇಳುವ ವಿಚಾರಗಳನ್ನು ಓದುಗರಿಗೆ ನೇರವಾಗಿ ತಿಳಿಸುವುದು ಗದ್ಯದ ವಿಶೇಷ.
- ಕನ್ನಡ ಸಾಹಿತ್ಯದಲ್ಲಿ ಗದ್ಯ ಪ್ರಕಾರವು ವ್ಯಾಪಕವಾಗಿ ಮತ್ತು ವೈವಿಧ್ಯಮಯವಾಗಿ ಬೆಳೆದಿದೆ.

**ಗದ್ಯ ಸಾಹಿತ್ಯ ಸ್ವರೂಪ**

- ಮುದ್ದಣ್ಣನ ಪತ್ನಿ ಮನೋರಮೆಯು ರಾಮಾಶ್ವಮೇಧವನ್ನು ಕೇಳುವಾಗ **" ಪದ್ಯಂ ವಧ್ಯಂ ಗದ್ಯಂ ಹೃದ್ಯಂ , ಹೃದ್ಯಮಪ್ಪ ಗದ್ಯದೊಳೆ ಪೇಳ್ವು ದೆಂದು"** ತನ್ನ ಪತಿಯನ್ನು ಕೇಳಿಕೊಳ್ಳುವ ಸಂದರ್ಭವನ್ನು ಕಲ್ಪಿಸಿಕೊಂಡರೆ ಗದ್ಯದ ಮಹತ್ವ /ಅರ್ಥವಂತಿಕೆ ತಿಳಿಯುತ್ತದೆ.
- ಗದ್ಯವು ಸಾಮಾಜಿಕ ಜೀವನದಲ್ಲೂ ಜನಸಾಮಾನ್ಯರಿಗೆ ಹತ್ತಿರವಾಗಿರುವ ಸರಳ ಮತ್ತು ಉಪಯುಕ್ತ ಸಾಹಿತ್ಯವೆನಿಸಿದೆ. ಅಂದರೆ ನಾವು ದಿನನಿತ್ಯ ವ್ಯವಹಾರದಲ್ಲಿ ಬಳಸುವ ಭಾಷಾರೂಪಕ್ಕೆ ತುಂಬಾ ಹತ್ತಿರವಿದೆ.
- ಭಾಷೆಯ ಮೂಲಕ ವಿಷಯವನ್ನು ಓದಿ ಅರ್ಥ ಮಾಡಿಕೊಳ್ಳಲು ಪ್ರಾರಂಭಿಕ ಹಂತದಲ್ಲಿ ಗದ್ಯ ಸಾಹಿತ್ಯವು ಉಪಯುಕ್ತ.
- ಗದ್ಯ ಸಾಹಿತ್ಯದ ಬೋಧನೆ ಮತ್ತು ಅಧ್ಯಯನದಿಂದ ಭಾಷೆ ಮತ್ತು ವಿಷಯ ಗ್ರಹಿಕೆ ಎರಡೂ ಸಾಧ್ಯ.
- ಇತರೆ ಸಾಹಿತ್ಯ ರೂಪಗಳಿಗಿಂತ ಬಹಳ ಸುಲಭ ಗ್ರಾಹ್ಯವಾಗಿದೆ.

**ಗದ್ಯ ಸಾಹಿತ್ಯದ  ಲಕ್ಷಣಗಳು**

- ಗದ್ಯ ಸಾಹಿತ್ಯವು ಛಂದೋನಿಯಮಗಳಿಗೆ ಒಳಪಡುವುದಿಲ್ಲ.
- ಗದ್ಯ ಸಾಹಿತ್ಯವು ಶಿಷ್ಟವಾದ ಭಾಷಾ ರಚನೆ ಹಾಗೂ ತರ್ಕಬದ್ಧ ವಿಷಯದ  ನಿರೂಪಣೆಯಾಗಿದೆ.
- ಗದ್ಯ ಸಾಹಿತ್ಯವು ಅರ್ಥ ಬದ್ಧತೆ ,ತರ್ಕ ಬದ್ಧ ರಚನೆಯನ್ನು ಹೊಂದಿದ್ದು ಜ್ಞಾನ, ತಿಳುವಳಿಕೆ, ತಾರ್ಕಿಕ ವಿಷಯ ಪ್ರತಿಪಾದನೆಗೆ ಒತ್ತು ನೀಡುತ್ತದೆ.
- ಗದ್ಯವು ಗ್ರಾಮ್ಯ  ಹಾಗೂ ಗ್ರಾಂಥಿಕ ಭಾಷೆಯ ನಿಯಮಗಳನ್ನು ಒಳಗೊಂಡಿದೆ.
- ವಿಷಯ ಪ್ರಧಾನವಾಗಿದ್ದು , ಬುದ್ಧಿಗೆ ಸಂಬಂಧಿಸಿರುತ್ತದೆ.
- ಗದ್ಯದಲ್ಲಿ ಲೇಖಕರ ಆಲೋಚನೆಗಳು ವ್ಯಕ್ತವಾಗಿರುತ್ತವೆ.
- ಗದ್ಯವು ಓದಿಕೊಳ್ಳುವ ಸ್ವರೂಪದಲ್ಲಿ ರಚನೆಯಾಗಿರುತ್ತವೆ.
- ಲೋಕ ವಿಚಾರಗಳು ಗದ್ಯದಲ್ಲಿ ಇರುತ್ತವೆ.
- ಮಾಹಿತಿ ಮತ್ತು ವಿವರಗಳಿಂದ ಕೂಡಿರುತ್ತವೆ.
- ಅನುಭವ , ಅನಿಸಿಕೆ , ಅಲೋಚನೆ, ವಿಚಾರಗಳನ್ನು ಸುಲಭವಾಗಿ ಅಭಿವ್ಯಕ್ತಿಸುವ ಸಾಧನವಾಗಿದೆ.
- ಗದ್ಯ  ಸಾಹಿತ್ಯದಲ್ಲಿ ಒಂದು ವಿಷಯ , ಆಲೋಚನೆಗಳು ಇರುತ್ತವೆ.
- ಗದ್ಯ  ಸಾಹಿತ್ಯದಲ್ಲಿ ವಿಷಯ  ವ್ಯಾಪ್ತಿಯ ಚೌಕಟ್ಟು ,ವಿಷಯ ವಿವರಣೆ ,ಅರ್ಥ ಬದ್ಧ ನಿರೂಪಣೆಯ ಕ್ರಮಗಳನ್ನು ಒಳಗೊಂಡಿರುತ್ತದೆ.
- ಗದ್ಯಸಾಹಿತ್ಯದಲ್ಲಿ ಸುಲಭವಾಗಿ ಅರ್ಥವಾಗುವ ತಂತ್ರಗಳು ಇರುತ್ತವೆ.

**ಗದ್ಯ ಬೋಧನೆಯ ಉದ್ದೇಶಗಳು**

- ಭಾಷಾ ಸಾಮರ್ಥ್ಯವನ್ನು ಹೆಚ್ಚಿಸುವುದು
- ಪದ ಸಂಪತ್ತು (ಶಬ್ಧ ಬಂಡಾರ) ಬೆಳೆಸುವುದು
- ವಾಕ್ಯ ರಚನೆ ಸಾಮರ್ಥ್ಯ ಬೆಳೆಸುವುದು.
- ಅರ್ಥ ಗ್ರಹಿಕೆ ಮತ್ತು ಸ್ವತಂತ್ರ ಯೋಚನೆಯನ್ನು ಬೆಳೆಸುವುದು.
- ಮೌಖಿಕ /ಲಿಖಿತ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು.
- ಓದುಗಾರಿಕೆ ಸಾಮರ್ಥ್ಯ  ಮತ್ತು ಅಭಿರುಚಿ ಬೆಳೆಸುವುದು.
- ಸಾಹಿತ್ಯ ಅಧ್ಯಯನ ಸಾಮರ್ಥ್ಯ, ಸಾಹಿತ್ಯಾಭಿರುಚಿಯನ್ನು ಬೆಳೆಸುವುದು.
- ಸಂವಹನ ಕೌಶಲವನ್ನು ಬೆಳೆಸಬಹುದು.
- ಸೃಜನಶೀಲತೆಯನ್ನು  ಬೆಳೆಸುವುದು ಮತ್ತು ಪೋಷಿಸುವುದು.
- ಅಧ್ಯಯನ ಶೀಲತೆ ಮತ್ತು ಜ್ಞಾನಾರ್ಜನೆ ಬೆಳೆಸುವುದು.
- ವ್ಯಕ್ತಿತ್ವ ವಿಕಾಸಕ್ಕೆ ನೆರವು ನೀಡುವುದು.
- ವೈಚಾರಿಕ ಚಿಂತನೆಗಳನ್ನು ಬೆಳೆಸುವುದು.
- ಭಾಷಾ ಸಂರಚನೆಯ ಲಕ್ಷಣಗಳ ಅರಿವನ್ನು ಉಂಟುಮಾಡುವುದು.
- ಪ್ರಾದೇಶಿಕ ಭಾಷಾ ಲಕ್ಷಣವನ್ನು ಪರಿಚಯಿಸುವುದು.

**ಗದ್ಯ ಬೋಧನಾ ವಿಧಾನಗಳು**

| | |
|---|---|
| **1. ಪ್ರಶ್ನೋತ್ತರ ಪದ್ಧತಿ** | **7. ವಿವರಣಾ ಪದ್ಧತಿ** |
| **2. ನಾಟಕ ಪದ್ದತಿ** | **8. ಉಪನ್ಯಾಸ ಪದ್ಧತಿ** |
| **3. ಸಂಭಾಷಣ ವಿಧಾನ** | **9. ಸಂದರ್ಶನಾ ವಿಧಾನ** |
| **4. ಚರ್ಚಾಪದ್ಧತಿ** | **10. ಭಾಷಣ ವಿಧಾನ** |
| **5. ಕಥನ ಪದ್ಧತಿ** | **11. ಮಿಶ್ರ ಪದ್ಧತಿ.** |
| **6. ನಿರೂಪಣಾ ಪದ್ಧತಿ** | |

**ಗದ್ಯ ಸಾಹಿತ್ಯದ ಪ್ರಕಾರಗಳು**

| | |
|---|---|
| **1. ಸಣ್ಣಕತೆಗಳು** | **8. ಲಲಿತ ಪ್ರಬಂಧ** |
| **2. ಗೀತನಾಟಕ** | **9. ಆತ್ಮಕತೆ** |
| **3. ಪ್ರವಾಸ ಸಾಹಿತ್ಯ** | **10. ಪತ್ರಸಾಹಿತ್ಯ** |
| **4. ಜೀವನ ಚರಿತ್ರೆ** | **11. ವಿಮರ್ಶಾಸಾಹಿತ್ಯ** |
| **5. ಕಾದಂಬರಿ** | **12. ವರದಿ** |
| **6. ವೈಚಾರಿಕ ಲೇಖನಗಳು/ವೈಚಾರಿಕ ಸಾಹಿತ್ಯ** | **13. ದಿನಚರಿ** |
| **7. ಭಾವಗೀತೆ** | **14. ಗಾದೆಗಳು** |
| | **15. ಜನಪದ ಸಾಹಿತ್ಯ** |

**1. ಸಣ್ಣಕತೆಗಳು**

ಗದ್ಯ ಸಾಹಿತ್ಯದ ವಿವಿಧ ಪ್ರಕಾರಗಳಾದ , ಕಾದಂಬರಿ , ಜೀವನಚರಿತ್ರೆ , ಆತ್ಮಕತೆ , ಸಣ್ಣಕತೆ , ಪ್ರಬಂಧ , ನಾಟಕ , ಇತ್ಯಾದಿಗಳಲ್ಲಿ ಸಣ್ಣಕಥೆಯೂ ಕೂಡ ಒಂದು. ಹೊಸಗನ್ನಡದ ಬಹುಜನಪ್ರಿಯ ಪ್ರಕಾರಗಳಲ್ಲಿ ಒಂದಾದ ಸಣ್ಣಕಥೆ ದೇಶೀಯ ಹಾಗೂ ವಿಶ್ವ ಸಂಸ್ಕೃತಿಯ ಅಭಿವ್ಯಕ್ತಿಗೆ ಪೂರಕ ಮಾಧ್ಯಮವಾಗಿದೆ. ಒಂದು ಘಟನೆ ಅಥವಾ ವಿಷಯವನ್ನು ತೆಗೆದುಕೊಂಡು ಒಂದೇ ಒಂದು ಪಾತ್ರ ಚಿತ್ರಣದ ಮೂಲಕ ಭಾವನಾತ್ಮಕವಾಗಿ, ಸುಂದರವಾಗಿ ಚಿತ್ರಿಸುವುದು ಸಣ್ಣ ಕತೆಯಾಗಿದೆ. ಅಮೆರಿಕೆಯ ಎಡ್ಗರ್ ಆಲನ್ ಪೊ ಎಂಬಾತನಿಂದ ಸಣ್ಣಕಥೆ ಬೆಳೆದು ಬಂತು. ಸಣ್ಣಕಥೆಯ ಜನಕನಾದ ಈತ **"ಒಂದೇ ಓದಿನಲ್ಲಿ ಮುಗಿಯುವದೇ ಕಥೆ"** ಎನ್ನುತ್ತಾನೆ. ಪಾಣಿನಿ **"ಕಥೆಯೆಂಬುದು ಸತ್ಯವನ್ನೊಳಗೊಂಡ ಕಲ್ಪನಾ ಪ್ರಬಂಧ"** ಎಂದಿದ್ದಾನೆ.

'ಸಣ್ಣಕಥೆ' ಎಂಬುದು ಇಂಗ್ಲೀಷ್ ಸಾಹಿತ್ಯದ ಪ್ರೇರಣೆಯಿಂದಲೇ ಕನ್ನಡಕ್ಕೆ ಬಂತು. ಇಂಗ್ಲೀಷ್‌ನ 'Short Story' ಕನ್ನಡದಲ್ಲಿ 'ಸಣ್ಣಕಥೆ' ಎಂದು ಅನುವಾದಗೊಂಡು ಬಳಕೆಯಲ್ಲಿ ಬಂದಿದೆ. **'ಸಣ್ಣಕಥೆ' ಎಂಬುದನ್ನು ಕನ್ನಡದಲ್ಲಿ ಮೊದಲು ಬಳಸಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್**.( 'ಶ್ರೀನಿವಾಸ' ಎಂಬ ಕಾವ್ಯನಾಮ ) ಕನ್ನಡದಲ್ಲಿ ಈ ಸಾಹಿತ್ಯ ಪ್ರಕಾರವನ್ನು ಬಹು ಜನಪ್ರಿಯಗೊಳಿಸುವುದರೊಂದಿಗೆ ಶ್ರೀಮಂತಗೊಳಿಸಿದ, ಸಂಪನ್ನಗೊಳಿಸಿದ ಶ್ರೇಯಸ್ಸು ಮಾಸ್ತಿಯವರಿಗೆ ಸಲ್ಲುತ್ತದೆ. ಕನ್ನಡ ಸಣ್ಣಕಥೆಗೆ ಒಂದು ಸ್ವರೂಪವನ್ನು ತಂದುಕೊಟ್ಟು, ಅದನ್ನೊಂದು ಗಂಭೀರ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ, ಭಾಷೆಯನ್ನು ಅದಕ್ಕೆ ಹದಗೊಳಿಸಿದವರು. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ಮಾಸ್ತಿಯವರನ್ನು **'ಸಣ್ಣಕತೆಗಳ ಜನಕ'** ಎಂದು ಕರೆಯಲಾಗುತ್ತದೆ.

ಒಂದು ವಸ್ತು, ಘಟನೆಯನ್ನು ಇಟ್ಟುಕೊಂಡು ನಾಲ್ಕಾರು ಪಾತ್ರಗಳ ಮೂಲಕ ಪರಿಣಾಮಕಾರಿಯಾಗಿ ಮೂಡಿಬರುವ ಕತೆಯ ಕಲಾತ್ಮಕತೆ ತುಂಬ ಕುಸುರಿನಿಂದ ಕೂಡಿದ್ದಾಗಿರುತ್ತದೆ. ಸಣ್ಣಕತೆ ಘಟನೆ ಮತ್ತು ಪಾತ್ರ ಪ್ರಧಾನವಾದದ್ದು ಎಂದು ಹೇಳಬಹುದು. "ಕಥೆಯ ವಸ್ತು, ಅಲ್ಲಿನ ಪಾತ್ರ ರಚನೆ, ಅದರಲ್ಲಿನ ಆವರಣ ಎಲ್ಲವೂ ಒಂದೇ ಎಂದು ಗುರಿಯನ್ನು ಮುಟ್ಟುವಂತೆ ಪರಿಪೋಷಕವಾಗಿದ್ದು ಓದುಗನಲ್ಲಿ ಒಂದೇ ಒಂದು ಪರಿಣಾಮವನ್ನು ಮೂಡುವಂತಿದ್ದರೆ ಅದು ಸಣ್ಣಕತೆ ಎನಿಸಿಕೊಳ್ಳುವುದು" ಎಂಬುದು ಕೆ. ಗೋಪಾಲಕೃಷ್ಣ ಅವರ ಅಭಿಪ್ರಾಯವಾಗಿದೆ.. "ಸಣ್ಣಕಥೆಯ ಅಂತಃಶಕ್ತಿಯನ್ನು ಇಡಿಯಾದ ಹೂವಿನಲ್ಲಿ ನೋಟವಿಟ್ಟು, ಬಿಡಿಯಾದ ಎಸಳುಗಳನ್ನು ಬಿಡಿಸಿ ತೋರುವುದರಲ್ಲಿ ಅದರ ಕೌಶಲ್ಯವಿದೆ, ಘನತೆಯಿದೆ" ಎಂಬುದು ರಂ.ಶ್ರೀ. ಮುಗಳಿಯವರ ವ್ಯಾಖ್ಯಾನವಾಗಿದೆ.

"ಸಣ್ಣಕತೆ ಎಂಬುದು ಒಂದು ರಸಬಿಂಬ ಅಥವಾ ರಸದ ಗಟ್ಟಿ. ಅದರ ಗುರಿ ಸೂಜಿಯ ಮೊನೆಯಂತೆ ಚೂಪು. ಅದರ ಶೈಲಿಯ ವೇಗ ಜೂಜಿನ ಕುದುರೆಯ ನಾಗಾಲೋಟ. ಅದು ಉಪಯೋಗಿಸಿಕೊಳ್ಳುವ ಮಾತುಗಳು ಅತಿಸ್ವಲ್ಪ. ತೋರಿಸುವ ಸತ್ಯ ಅದ್ಭುತ. ಸಣ್ಣದರಲ್ಲಿ ದೊಡ್ಡದನ್ನು ಅಡಗಿಸುವ, ಸ್ವಲ್ಪದರಲ್ಲಿ ಬಹಳವನ್ನು ಹೇಳುವ ಚತುರ ಕ್ರಿಯೆ ಅದರದು. ಸಣ್ಣ ಕಥೆಯಲ್ಲಿ ಭವದ ಹಿರಿಮೆ ಇರಬೇಕು ಭಾವದ ನಿರೂಪಣೆ ಸುಂದರವಾಗಿರಬೇಕು" ಎಂದು ಕೃಷ್ಣಮೂರ್ತಿ ಪುರಾಣಿಕರು ಅಭಿಪ್ರಾಯಪಡುತ್ತಾರೆ.

"ಸಣ್ಣಕಥೆಯ ಒಂದೇ ಪಾತ್ರ, ಒಂದೇ ಘಟನೆ, ಒಂದೇ ಭಾವನೆ ಅಥವಾ ಒಂದೇ ಪ್ರಸಂಗದಿಂದ ಉದ್ಭುತವಾದ ಅನೇಕ ಭಾವನೆಗಳನ್ನು ಕುರಿತು ಹೇಳಲ್ಪಟ್ಟಿರುತ್ತದೆ" ಎಂದು ಮ್ಯಾಥ್ಯೂಸ್‌ನ ಅಭಿಪ್ರಾಯವಾಗಿದೆ.

ಚನ್ನಣ್ಣ ವಾಲೀಕಾರ ಅವರು "ಒಂದು ಘಟನೆ ಇಲ್ಲವೆ ಸನ್ನಿವೇಶದ ಸುತ್ತ ಬದುಕಿನ ವಿವರ ನೀಡುವುದು ಸಣ್ಣಕಥೆಯಾಗುವುದು" ಎಂದು ಜೀವನದ ಪ್ರತಿಬಿಂಬದ ಸ್ವರೂಪವನ್ನು ವಿಸ್ತರಿಸುವದಾಗಿದೆ ಎನ್ನುತ್ತಾರೆ.

"ಸಣ್ಣಕಥೆಯೆಂದರೆ ಶಕ್ಯವಿದ್ದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೆ ಪರಿಣಾಮಕಾರಿಯಾಗುವಂತೆ ತೀರ ಸ್ವಲ್ಪ ಪ್ರಸಂಗಗಳಿಂದ ಒಂದು ಸಂಗತಿಯನ್ನು ಹೇಳುವುದು" ಎಂಬ ಮಿರ್ಜಿ ಅಣ್ಣಾರಾಯರ ಈ ಮಾತು ಸಣ್ಣ ಕಥೆಯನ್ನು ಅಡಿಯಿಂದ ಮುಡಿಯವರೆಗೆ ಅಳತೆ ಮಾಡಿ ಹೇಳಿದಂತಿದೆ.

**ಸಣ್ಣಕತೆ ಎನಿಸಿಕೊಳ್ಳಬೇಕಾದರೆ ಈ ಕೆಳಗಿನ ಲಕ್ಷಣಗಳು ಇರಬೇಕು.**

- ಸಂಕ್ಷಿಪ್ತತೆ ಸಣ್ಣಕತೆಯ ಜೀವಾಳ.
- ವಾಸ್ತವ ಮತ್ತು ಕಲ್ಪನೆಗಳ ಸಮ್ಮಿಶ್ರ ಸ್ವಾರಸ್ಯಕರ ನಿರೂಪಣೆ.
- ಒಂದು ನಿರ್ದಿಷ್ಟ ವಸ್ತುವನ್ನು ಕುರಿತದ್ದಾಗಿರಬೇಕು.
- ಕಲಾತ್ಮಕತೆಯನ್ನು ಮೈಗೂಡಿಸಿಕೊಂಡಿರಬೇಕು.
- ಒಂದು ನಿರ್ದಿಷ್ಟ ಘಟನೆಯ ನಿರೂಪಣೆಯಾಗಿರಬೇಕು.
- ಘಟನೆಯ ಸುತ್ತಲೂ ಭಾವನೆಗಳ ಪದರು ಬಿಟ್ಟುಕೊಳ್ಳುತ್ತವೆ.
- ಪಾತ್ರಗಳು ಕಡಿಮೆಯಿರಬೇಕು.
- ಒಂದೇ ವಿಧವಾದ ತಂತ್ರ ಕಥೆಯುದ್ದಕ್ಕೂ ಸಾಗಿಬರಬೇಕು
- ಅದ್ಭುತ-ರಮ್ಯ ಅನುಭವ ನೀಡಬೇಕು.
- ಸಾಂದ್ರವೂ, ಸಂಕ್ಷಿಪ್ತವೂ, ಕ್ಷಿಪ್ರವೂ ಆದ ಸಂವಹನಶೀಲ ಬರವಣಿಗೆಯಾಗಿದೆ.
- ಪ್ರಾದೇಶಿಕ ಭಾಷೆಯನ್ನು ಒಳಗೊಂಡಿರಬೇಕು.
- ಪಾತ್ರಗಳ ಸಂಬಂಧ ನೇರವಾಗಿದ್ದರೆ ಹೆಚ್ಚು ಅರ್ಥಪೂರ್ಣ.
- ಕಥೆ ಜೀವನದ ನಿರಂತರ ಪ್ರವಾಹಕ್ಕೊಂದು ಚೌಕಟ್ಟನ್ನು ಹಾಕಿಕೊಡುತ್ತದೆ.
- ಓದುಗನನ್ನು ಗೊಂದಲದಲ್ಲಿ ಮುಳುಗಿಸುವಂತಿರಬಾರದು.
- ಕಥೆಯ ಅಂತ್ಯದವರೆಗೂ ಓದುಗನಲ್ಲಿ ಕುತೂಹಲ ಕೆರಳಿಸುವಂತಿರಬೇಕು.

ಹಾಗೆ ನೋಡಿದರೆ ಪ್ರತಿಯೊಂದು ಕಥೆಯಲ್ಲೂ ಈ ಎಲ್ಲಾ ಲಕ್ಷಣಗಳು ಇರಬೇಕೆಂಬ ನಿಯಮವೇನೂ ಇಲ್ಲ. ಬರಹಗಾರನ ದೃಷ್ಟಿಕೋಣಕ್ಕೆ ತಕ್ಕಂತೆ ಹೆಚ್ಚು ಕಡಿಮೆಯಾಗುವುದು ಸಹಜ. ಒಟ್ಟಿನಲ್ಲಿ ಪರಸ್ಪರ ಸಂಬಂಧವನ್ನು ಹೊಂದಿರುವ ಮನುಷ್ಯ ಜೀವನ ಸೂತ್ರದ ಆಧಾರದ ಮೇಲೆ ಕಲ್ಪಿತವಾಗಿರುವ ಅನುಭವವೇದ್ಯ ನಿರೂಪಣೆಯನ್ನು ಸಣ್ಣಕಥೆ ಎನ್ನಬಹುದು. ಸಮಾಜದಲ್ಲಿನ ಏಳು-ಬೀಳುಗಳು, ಜನರ ಬದುಕು-ಬವಣೆಗಳು, ನೋವು-ನಲಿವುಗಳು, ಕ್ರೌರ್ಯ-ಶಾಂತಿಯ ನಡೆ ಹಾಗೂ ಅದರ ಪರಿಣಾಮಗಳು, ಮಾನವೀಯ ಮೌಲ್ಯಗಳು ಎಲ್ಲವೂ ಸಣ್ಣಕಥೆಗೆ ವಸ್ತುಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಚದುರಂಗ, ಅನುಪಮಾ ನಿರಂಜನ, ವೈದೇಹಿ, ಯಶವಂತ ಚಿತ್ತಾಲ, ಪೂ.ಚಂ.ತೇಜಸ್ವಿ, ಅಮರೇಶ ನುಗಡೋಣಿ, ಸಾರಾ ಅಬೂಬಕ್ಕರ್ ಮೊದಲಾದವರು ಸಣ್ಣಕಥಾ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

**2. ಗೀತನಾಟಕ**

ಆಧುನಿಕ ಕಾವ್ಯ ಪ್ರಕಾರಗಳಾದ ಕತೆ, ಕಾದಂಬರಿ, ಕವನ, ಆತ್ಮಕತೆ, ಪ್ರವಾಸಕಥನ, ಪ್ರಬಂಧ, ಜೀವನಚರಿತ್ರೆ , ಮುಂತಾದ ಪ್ರಕಾರಗಳಲ್ಲಿ ನಾಟಕವೂ ಒಂದು ಪ್ರಕಾರವಾಗಿದೆ. **"ಕಾವ್ಯೇಷು ನಾಟಕಂ ರಮ್ಯಂ"** ಎಂಬಂತೆ ಕಾವ್ಯಗಳಲ್ಲಿ

ನಾಟಕ ರಮ್ಯವಾದುದು, ಮನೋಹರವಾದುದು. ಅಭಿನಯ, ದೃಶ್ಯ, ಸಂಭಾಷಣೆ, ಸಂಗೀತಗಳಿಂದ ಪ್ರೇಕ್ಷಕ ಸಹೃದಯರಿಗೆ ಆನಂದವನ್ನು ನೀಡುತ್ತದೆ. ನಾಟಕಗಳಲ್ಲಿ ಪೌರಾಣಿಕ ನಾಟಕ, ಸಾಮಾಜಿಕ ನಾಟಕ, ಐತಿಹಾಸಿಕ ನಾಟಕ, ವೈಜ್ಞಾನಿಕ ನಾಟಕಗಳನ್ನು ಹೆಸರಿಸಬಹುದು. ಕೇವಲ ಸಂಭಾಷಣಾಯುಕ್ತ ಹಾಗೂ ಗೀತೆಗಳಿಗೆ ಪ್ರಾಧಾನ್ಯವಿರದ ನಾಟಕಗಳನ್ನು ಸಾಮಾನ್ಯ ನಾಟಕಗಳೆಂದು, ಗೀತಪ್ರಧಾನವಾದ ನಾಟಕಗಳನ್ನು ಗೀತನಾಟಕಗಳೆಂದು ಕರೆಯಲಾಗಿದೆ. ಗೀತನಾಟಕಗಳು ಗದ್ಯ ಪದ್ಯಗಳಿಂದ ಕೂಡಿದ್ದು ಇದರಲ್ಲಿ ಗೀತೆಗಳಿಗೆ ಹೆಚ್ಚು ಪ್ರಾಧಾನ್ಯವಿರುತ್ತದೆ. ಕಥೆಯ ಘಟನೆಗಳಿಗೆ ಪೂರಕವಾಗುವ ಮೇಳದವರ ಭಾಗವಹಿಸುವಿಕೆ ನಾಟಕದ ಸೊಗಸನ್ನು ಹೆಚ್ಚಿಸುತ್ತದೆ. ಭಾವನೆಗಳ ಅಭಿವ್ಯಕ್ತಿಗೆ ಭಾವಗೀತೆಗಳಿಗಿಂತಲೂ ಗೀತನಾಟಕಗಳು ಅತ್ಯುತ್ತಮ ಮಾಧ್ಯಮವಾಗಬಲ್ಲವು. ಭಾವಗಳ ಅಭಿವ್ಯಕ್ತಿಗೆ ಬರೆಹ ಜೊತೆಗೆ ಸಂಗೀತ, ನೃತ್ಯ ಸೇರಿದರೆ ಪರಿಣಾಮಕಾರಿಯಾಗುತ್ತದೆ.

ರಾಮಾಯಣ, ಮಹಾಭಾರತ ಪ್ರಸಿದ್ಧ ಮಹಾಕಾವ್ಯಗಳು. ಅವುಗಳಿಂದ ಪ್ರೇರಿತವಾಗಿ ಹಲವು ಕೃತಿಗಳು ರಚಿತವಾಗಿವೆ. ಅವುಗಳಲ್ಲಿ ಗೀತನಾಟಕಗಳೂ ಜನಪ್ರಿಯವಾಗಿವೆ. ಸಾಹಿತ್ಯ, ಸಂಗೀತ, ನೃತ್ಯ, ಕಲೆಗಳ ಸಂಗಮವಾದ ಗೀತನಾಟಕ ಸಂಭಾಷಣಾಯುಕ್ತವಾದುದು, ಪ್ರತಿಯೊಂದು ಪಾತ್ರದ ಹಿರಿಮೆಯೊಂದಿಗೆ ಸಂವೇದನಾಶೀಲವಾಗಿ ಕಥೆಯನ್ನು ನಿರೂಪಿಸುವ ಗುಣ ಈ ಗೀತನಾಟಕದ್ದಾಗಿದೆ.

ಗೀತನಾಟಕ ಅಥವಾ ಗೀತರೂಪಕ ನಮಗೆ ಪಾಶ್ಚಾತ್ಯರಿಂದ ಬಂದಿರುವ ಸಾಹಿತ್ಯ ರೂಪಕವಾಗಿದೆ. ಐತಿಹಾಸಿಕ ನೃತ್ಯ, ಭಾವಗೀತೆ , ಕಾದಂಬರಿಗಳು, ನಾಟಕ ಮೊದಲಾದ ರೂಪಗಳಲ್ಲಿ ಪಾಶ್ಚಾತ್ಯರ ಪ್ರಭಾವವಾದಂತೆ ಅಪೇರಾ ನಮ್ಮನ್ನು ಆಕರ್ಷಿಸಿತು. ಕನ್ನಡದ ಗೀತನಾಟಕವು ಅಪೇರಾದ ಪ್ರೇರಣೆ ಪ್ರಭಾವದಿಂದ ಹುಟ್ಟಿಕೊಂಡಿರುವುದು ವಾಸ್ತವಿಕ ವಿಚಾರ. ನವೋದಯ ಕಾವ್ಯ ಪರಂಪರೆಯ ಎಲ್ಲಾ ಲಕ್ಷಣಗಳನ್ನು ಮೈಗೂಡಿಸಿಕೊಂಡು ಭಾವಗೀತೆ ಪ್ರಕಾರವನ್ನು ವಿಸ್ತರಿಸಿಕೊಂಡಂತೆ ಗೀತನಾಟಕಗಳು ಕನ್ನಡದಲ್ಲಿ ಆರಂಭವಾದವು. ಈ ಗೀತನಾಟಕಗಳ ಮೇಲೆ ಬ್ಯಾಲೆ ಪ್ರಕಾರದ ಪ್ರಭಾವವೂ ಇದೆ. ಕನ್ನಡ ಭಾಷೆಯಲ್ಲಿ ಗೀತನಾಟಕಕಾರರ ಸಂಖ್ಯೆ ತುಂಬಾ ಕಡಮೆ. ಗೀತನಾಟಕಕಾರರೆಲ್ಲ ಗೀತೆ, ಸಂಗೀತ, ಅಭಿನಯ, ನೃತ್ಯ, ರಂಗಪ್ರಯೋಗಗಳ ಪರಿಚಯವಿದ್ದು, ಇವುಗಳಿಂದ ಪ್ರೇರಣೆ ಪಡೆದು ತಮ್ಮದೇ ಆದ ಕಲಾ ಸಿದ್ಧಾಂತಗಳ ಚಿಂತನೆಯ ಹಿನ್ನೆಲೆಯಲ್ಲಿ ಗೀತನಾಟಕಗಳನ್ನು ರಚಿಸಿದರು. ಪು.ತಿ.ನ , ಶಿವರಾಮಕಾರಂತರರು, ಮಾಸ್ತಿ ವೆಂಕಟೇಶ ಅಯ್ಯಾಂಗಾರ್, ರಾಮಚಂದ್ರ ಶರ್ಮಾ, ರಂ.ಶ್ರೀ.ಮುಗಳಿ, ಸಿದ್ಧಯ್ಯಪುರಾಣಿಕ್, ಬಸವರಾಜ ಕಟ್ಟಿಮನಿ ಮುಂತಾದವರು ಗೀತನಾಟಕಗಳನ್ನು ರಚಿಸಿದ್ದಾರೆ. ಕಾರಂತರ ಮುಕ್ತಿದ್ವಾರ,ಕಿಸಾಗೋತಮಿ ಹೆಸರಿಸಬಹುದು. ಹಾಗೇಯೆ ಗೀತನಾಟಕಗಳ ರಚನೆ ಪು.ತಿ.ನರಸಿಂಹಚಾರ್‌ರವರ ಪ್ರಾತಿನಿಧಿಕ ಪ್ರಕಾರವಾಗಿದೆ.

**3. ಪ್ರವಾಸ ಸಾಹಿತ್ಯ**

ನಿರ್ದಿಷ್ಟವಾದ ಉದ್ದೇಶವನ್ನು ಇಟ್ಟುಕೊಂಡು ಪ್ರವಾಸ ಮಾಡಿ, ಅಲ್ಲಿ ತಾವು ನೋಡಿದ, ಕೇಳಿದ ಅನುಭವಿಸಿದ ತಮ್ಮ ಅನುಭವಗಳನ್ನು ಸುಂದರವಾಗಿ ಸಾಹಿತ್ಯವಾಗಿಸುವ ಅಥವಾ ದಾಖಲಿಸುವ ಸಾಹಿತ್ಯವೇ ಪ್ರವಾಸ ಸಾಹಿತ್ಯ. 'ದೇಶ ಸುತ್ತಿ ನೋಡು, ಕೋಶ ಓದಿ ನೋಡು ' ಎಂಬ ಗಾದೆ ಮಾತು ನಮ್ಮಲ್ಲಿ ಪ್ರಸಿದ್ಧವಾಗಿದೆ. ಈ ಗಾದೆ ಮಾತಿನ ಅರ್ಥ 'ಮನುಷ್ಯ ತನ್ನ ಅನುಭವಗಳನ್ನು ಇನ್ನೂ ಇನ್ನೂ ವಿಸ್ತರಿಸಿಕೊಳ್ಳುವುದು ಎಂದೇ ಆಗಿದೆ. ಹಾಗೆಯೇ ಹಕ್ಕಿಯಂತೆ ಹಾರಾಡಿ, ಹುಲ್ಲೆಯಂತೆ ನಡೆದಾಡಿ, ಮೀನಿನಂತೆ ತೇಲಾಡಿ ಹೊರನೋಟ ಹೊರ ಜಗತ್ತನ್ನು ಕಾಣು, ಅನುಭವಿಸು, ಆನಂದಿಸು, ವಿಚಾರಿಸು, ವಿಮರ್ಶಿಸು, ತರ್ಕಿಸು ಎಂದೂ ಹೇಳಬಹುದು. ನಮ್ಮ ಪ್ರಾಚೀನ ಭಾರತೀಯ ಪಂಡಿತರಿಗೆ ಕೋಶ ಓದುವ ಬರೆಯುವ ಪ್ರೀತಿಯೇ ಹೆಚ್ಚಾಗಿತ್ತು. ಪ್ರವಾಸಿಸುವ ಅದನ್ನು ಬರೆಯುವ ಪ್ರವೃತ್ತಿ ಅವರಲ್ಲಿ ಅಷ್ಟಾಗಿ ಕಾಣಿಸಿಲ್ಲವಾದರೂ ಅಲ್ಲಲ್ಲಿ ರಾಜರ ಜೊತೆಗೆ ದಂಡಯಾತ್ರೆಗಳಿಗೆ ಹೋದಾಗಿನ ಕೆಲವು ನಿಸರ್ಗ ಅನುಭವಗಳನ್ನು ಕಾವ್ಯದಲ್ಲಿ ಹೇಳಿದ್ದಾರೆ ಅಷ್ಟೆ. 'ದೇಶ ನೋಡು' ಅನ್ನುವ ಗಾದೆ ಮಾತು ಸರಿಸುಮಾರು 18–19–20 ನೆಯ ಶತಮಾನದ ಪ್ರವಾಸಿಗರಿಗೆ ಸರಿ ಹೊಂದುತ್ತದೆ. ಆಗಲೇ ದೇಶದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ

ಹೋಗಲೂ ಅಷ್ಟೇ ಅಲ್ಲದೆ ದೇಶ ವಿದೇಶಗಳಿಗೆ ಹೋಗಿ ಬರುವ ಅನುಕೂಲತೆಗಳು ಹೆಚ್ಚಾಗತೊಡಗಿದ್ದವು. ತಾವು ಕಂಡದ್ದನ್ನು ತಮಗನಿಸಿದಂತೆ ದಾಖಲಿಸುವ ಪ್ರವೃತ್ತಿಯೂ ಬೆಳೆಯತೊಡಗಿತು.

ಪ್ರವಾಸದಲ್ಲಿ ಲೇಖಕ ಎದುರುಗೊಳ್ಳುವುದು ಅಪರಿಚಿತವಾದ ವ್ಯಕ್ತಿಗಳು, ಅಪರಿಚಿತವಾದ ವಾತಾವರಣ, ಅಪರಿಚಿತವಾದ ವಸ್ತು, ಅಪರಿಚಿತವಾದ ದೃಶ್ಯಗಳು ಇವೆಲ್ಲ, ಕೃತಿಯ ಉದ್ದಕ್ಕೂ ಅಪರಿಚಿತವಾದ ವಸ್ತು ವ್ಯಕ್ತಿಗಳ ವಾತಾವರಣವೇ ತುಂಬಿರುತ್ತದೆ. ಇದು ಒಬ್ಬ ಲೇಖಕನಿಂದ ಇನ್ನೊಬ್ಬ ಲೇಖಕನಿಗೆ ಬದಲಾಗುತ್ತಾ ಹೋಗುತ್ತದೆ. ಅಮೇರಿಕಾ ದೇಶವನ್ನು ನೋಡಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಅಮೆರಿಕಾದಲ್ಲಿ ಗೊರೂರು) ಅವರಿಗಾಗುವ ಅನುಭವಗಳೇ ಬೇರೆ. ಅದೇ ದೇಶವನ್ನು ನೋಡಿದ ಎ.ಎನ್.ಮೂರ್ತಿರಾಯರ (ಅಪರ ವಯಸ್ಕನ ಅಮೇರಿಕಾ ಯಾತ್ರೆ) ಅನುಭವಗಳೇ ಬೇರೆ. ಅಂದರೆ ಪ್ರವಾಸಕಥನ ಲೇಖಕರ ಅನುಭವಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತದೆ.

**ಪ್ರವಾಸ ಸಾಹಿತ್ಯದ ರೂಪ ಲಕ್ಷಣಗಳು**

1) ಪ್ರವಾಸ ಸಾಹಿತ್ಯ ಬಹುಮಟ್ಟಿಗೆ ಗದ್ಯ ರೂಪದಲ್ಲಿ ಇರುತ್ತದೆ.

2) ಪ್ರವಾಸ ಕಥನಗಳಲ್ಲಿ ಕೃತಿಯುದ್ದಕ್ಕೂ ಪ್ರಧಾನವಾಗಿ ನಿರೂಪಣ ಶೈಲಿ ಇರುತ್ತದೆ.

3) ಲೇಖಕ ತಾನು ಪ್ರವಾಸಿಯಾಗಿದ್ದನ್ನು ನೆನೆಸಿಕೊಂಡು ಸಂಗತಿಯನ್ನು ಅಥವಾ ವಿಷಯಗಳನ್ನು ವರ್ಣಿಸಲು ಆರಂಭಿಸುತ್ತಾನೆ. ನಾನು ಹೋದೆ, ನನಗೆ ಈ ಅನುಭವವಾಯಿತು, ನಾನು ಇದನ್ನು ನೋಡಿದೆ, ನಾನು ಅಲ್ಲಿ ಓಡಾಡಿದೆ, ನನಗೆ ಹೀಗೆ ಕಂಡಿತು.

4) ಒಬ್ಬ ವ್ಯಕ್ತಿ ತಾನಿದ್ದ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗಿ ನಿಶ್ಚಿತ ಅವಧಿಯವರೆಗೂ ಅಲ್ಲಿದ್ದು, ಮತ್ತೆ ತಾನಿದ್ದ ಸ್ಥಳಕ್ಕೆ ವಾಪಸ್ಸು ಬರುತ್ತಾನೆ. ವಾಪಸ್ಸು ಬರುವವರೆಗೂ ಆ ನಿಶ್ಚಿತ ಅವಧಿಯಲ್ಲಿ ಅವನಿಗಾಗುವ ಎಲ್ಲ ಬಗೆಯ ಪರಸ್ಥಳಾನುಭವಗಳೂ ಪ್ರವಾಸ ಕಥನದ ವಸ್ತು ದ್ರವ್ಯವಾಗಿರುತ್ತದೆ.

5) ಪ್ರವಾಸ ಕಥನಗಳಲ್ಲಿ ಕಾಣುವ ಮತ್ತೊಂದು ಗುಣ ಅದು ಆತ್ಮಕಥನ ರೂಪವನ್ನು ಹೊಂದುವಂಥದು. ಒಬ್ಬ ಲೇಖಕ ಹೊರದೇಶದಲ್ಲಿ ಒಂದು ನಿಶ್ಚಿತ ಅವಧಿಯನ್ನು ಕಳೆಯುವಾಗ ತನಗಾಗುವ ವಾಸ್ತವಾನುಭವಗಳನ್ನು ಮಾತ್ರ ಬರವಣಿಗೆಯಲ್ಲಿ ಹಿಡಿದಿಡುತ್ತಾನೆ. ಆದ್ದರಿಂದ ಅದು ಆತ್ಮಕಥನ ರೂಪವನ್ನು ಸಹಜವಾಗಿಯೇ ಪಡೆದುಕೊಳ್ಳುತ್ತದೆ.

ಕ್ರಿ.ಶ. 1890ರ ಸುಮಾರಿಗೆ ಉತ್ತರ ಕನ್ನಡದ ಕರ್ಕಿ ವೆಂಕಟರಮಣಶಾಸ್ತ್ರಿ ಸೂರಿ ಬರೆದ 'ದಕ್ಷಿಣ ಯಾತ್ರಾ ಚರಿತ್ರೆ' ಎಂಬುದೇ ಕನ್ನಡದ ಮೊದಲ ಪ್ರವಾಸ ಗ್ರಂಥ. 1926ರಲ್ಲಿ ಪ್ರಕಟವಾದ ವಿ.ಸಿ.ಯವರ 'ಪಂಪಾಯಾತ್ರೆ' ಪ್ರವಾಸಕಥನ ಗುಣ ಲಕ್ಷಣಗಳನ್ನೊಳಗೊಂಡ ಅತ್ಯುತ್ತಮ ಪ್ರವಾಸ ಕಥನ. ಡಾ॥ ಹಿರೇಮಲ್ಲೂರು ಈಶ್ವರನ್‌ರವರ 'ಕವಿಕಂಡನಾಡು', ಗುಂಡ್ಮಿ ಚಂದ್ರಶೇಖರ ಐತಾಳರ 'ಸೌಂದರ್ಯದ ಸಾನಿಧ್ಯ'ದಲ್ಲಿ ಹಾಗೂ 'ಚೆಲುವು ಚೆಲ್ಲಿದಲ್ಲಿ', ಶಂಕರ ಪಟೇಲರ 'ಸವಿ ಸಂಚಾರ', 'ಜೀವಿಗೆಕಟ್ಟೆ', ಬಸಪ್ಪರವರ 'ಕರ್ನಾಟಕಯಾತ್ರೆ' ಪಾಟೀಲ ಪುಟ್ಟಪ್ಪರವರ 'ನನ್ನದು ಈ ಕನ್ನಡನಾಡು' ವಿಷಯ ವ್ಯಾಪ್ತಿಯಿಂದ ಮಹತ್ವದ ಕೃತಿಗಳು. ವಿ.ಕೃ.ಗೋಕಾಕ್ ರವರು 1936ರಲ್ಲಿ ಲಂಡನ್‌ಗೆ ಪ್ರವಾಸ ಕೈಗೊಂಡಿದ್ದಾಗ ಅಲ್ಲಿ ತಮಗಾದ ಅನುಭವಗಳನ್ನು ತಮ್ಮ **'ಸಮುದ್ರದಾಚೆಯಿಂದ'** ಎಂಬ ಪ್ರವಾಸ ಕಥನ ಗ್ರಂಥದಲ್ಲಿ ನಿರೂಪಿಸಿದ್ದಾರೆ.

**ಕೆಲವು ಪ್ರವಾಸ ಕೃತಿಗಳು**

ನನ್ನ ಪ್ರಪಂಚ ಸಂಚಾರ – ಚನ್ನಾಜಮ್ಮಣ್ಣಿ (ಅರಸು ಮನೆತನದ ಮಹಿಳೆಯೊಬ್ಬಳ ಮೊದಲ ಪ್ರವಾಸ ಕಥನ)

ಕರ್ನಾಟಕದ ಸಾಂಸ್ಕೃತಿಕ ಸ್ಥಳಗಳು – ಎ.ಎಂ.ಅಣ್ಣಿಗೇರಿ

ಭಾತರ ದರ್ಶನ – ಮಹಾಂತ ಸ್ವಾಮಿಗಳು

ಅಮೇರಿಕಾದಲ್ಲಿ ನಾನು ಮತ್ತು ಶಾಂತಿ –ಪ್ರಭುಶಂಕರ

ಹಕ್ಕಿಯ ತೆರದಲ್ಲಿ – ಸುಧಾಮೂರ್ತಿ

ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು – ಜಿ.ಎಸ್.ಶಿವರುದ್ರಪ್ಪ

ಅಪರ ವಯಸ್ಕನ ಅಮೇರಿಕಾ ಯಾತ್ರೆ – ಎ.ಎನ್. ಮೂರ್ತಿರಾಯ್

**4. ಜೀವನ ಚರಿತ್ರೆ**

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಜೀವನ ಚರಿತ್ರೆ ಸಾಹಿತ್ಯ ಪ್ರಕಾರವೂ ಒಂದಾಗಿದೆ. ಹಳಗನ್ನಡದಲ್ಲಿ ಅಲ್ಲಲ್ಲಿ ಒಬ್ಬ ಕವಿ ಇನ್ನೊಬ್ಬ ಕವಿಯ ಬಗ್ಗೆ , ರಾಜಮಹಾರಾಜರ ಬಗ್ಗೆ, ಮಹಾನ್ ಸಾಧಕರ ಬಗ್ಗೆ ತಮ್ಮ ತಮ್ಮ ಕೃತಿಗಳಲ್ಲಿ ಹೇಳಿದ್ದರೂ ಅದು ಸಾಹಿತ್ಯ ಪ್ರಕಾರವಾಗಿ ಮೂಡಿಬಂದಿರಲಿಲ್ಲ. ಕನ್ನಡ ಸಾಹಿತ್ಯದಲ್ಲಿ ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದದ್ದು ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಎಂದು ಹೇಳಬಹುದು. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಕುರಿತು ಅವರ ವೈಯುಕ್ತಿಕ ಜೀವನದ ವಿಚಾರಗಳೊಂದಿಗೆ ಸಮಾಜಕ್ಕೆ ಉಪಯುಕ್ತವಾಗುವ ಅವರಲ್ಲಿನ ಆದರ್ಶಗಳು, ಆಚಾರ ವಿಚಾರಗಳು, ಸಂಸ್ಕಾರ ಗುಣಗಳು, ಸಾಧನೆ– ಸಾಹಸಗಳು , ಚಿಂತನೆಗಳನ್ನು ಕುರಿತು ಬರೆಯುವುದನ್ನು ಜೀವನ ಚರಿತ್ರೆ ಎಂದು ಕರೆಯಲಾಗುತ್ತದೆ. ಜೀವನ ಚರಿತ್ರೆಗಳು ಮಹಾಪುರುಷರ ಜೀವಿತದ ಸಾಧನೆ–ಸಿದ್ದಿಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ , ಆ ಮೂಲಕ ಅವರ ಉನ್ನತ ಧ್ಯೇಯ ಧೋರಣೆಗಳನ್ನು ಜನತೆಯ ಮನಸ್ಸಿನಲ್ಲಿ ಬಿತ್ತುವ ಉದ್ದೇಶಗಳನ್ನು ಹೊಂದಿವೆ. ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧೀಜಿ, ಸರ್ವೆಪಲ್ಲಿ ರಾಧಾಕೃಷ್ಣನ್, ಡಿವಿಜಿಯವರು, ಬಿ.ಆರ್.ಅಂಬೇಡ್ಕರ್, ಎ.ಪಿ.ಜೆ.ಅಬ್ದುಲ್ ಕಲಾಂ, ಸಚಿನ್ ತೆಂಡೂಲ್ಕರ್ ಮುಂತಾದ ಸಾಧಕರ ಬಗ್ಗೆ ಬರೆದಿರುವ ಸಾಕಷ್ಟು ಜೀವನ ಚರಿತ್ರೆಗಳನ್ನು ನೋಡುತ್ತೇವೆ. ಅಂತೆಯೇ ನಾಲ್ವಡಿ ಕೃಷ್ಣರಾಜ ಒಡೆಯರು, ವಿಶ್ವೇಶ್ವರಯ್ಯನವರನ್ನು ಕುರಿತು ಸಾಕಷ್ಟು ಕೃತಿಗಳು ಮೂಡಿಬಂದಿವೆ. ಈ ಭಾಗ್ಯಶಿಲ್ಪಿಗಳು ಪಾಠದಲ್ಲಿ ಇವರಿಬ್ಬರ ಜೀವನ ಚರಿತ್ರೆಯನ್ನು ಕುರಿತು ಸಂಕ್ಷಿಪ್ತವಾಗಿ ಅಧ್ಯಯನ ಮಾಡಬಹುದು.

**5. ಕಾದಂಬರಿ**

1. ಕಾದಂಬರಿಗಳು ಬದುಕಿನ ರಹಸ್ಯವನ್ನು ಬಿಡಿಸಿ ತೋರಿಸುವ ಮಹಾಕಾವ್ಯಗಳು.
2. ವರ್ಣನೆ , ವೃತ್ತಾಂತ , ಸಂಭಾಷಣೆ , ವ್ಯಾಖ್ಯಾನ , ಎಲ್ಲಾ ಕಾದಂಬರಿಗಳಲ್ಲಿ ಬೆರೆಯುತ್ತವೆ.
3. ಓದುಗನಿಗೆ ಕುತೂಹಲವನ್ನುಂಟು ಮಾಡುತ್ತವೆ.
4. ಕೌಟುಂಬಿಕ ,ಸಾಮಾಜಿಕ ,ಐತಿಹಾಸಿಕ ,ಪೌರಾಣಿಕ ,ವೈಚಾರಿಕ ,ಪತ್ತೇದಾರಿ ಇತ್ಯಾದಿ ಪ್ರಕಾರಗಳನ್ನು ಕಾದಂಬರಿಗಳಲ್ಲಿ ಕಾಣಬಹುದು.
5. ಕೆರೂರ ವಾಸುದೇವಾಚಾರ್ಯ , ಎಂ.ಎಸ್.ಪುಟ್ಟಣ್ಣ , ನಿರಂಜನ ,ಕುವೆಂಪು ,ಅನಕೃ ,ಗೀತಾ ನಾಗಭೂಷಣ, ತ್ರಿವೇಣಿ ಮೊದಲಾದ ಕಾದಂಬರಿಕಾರರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕಾಣಬಹುದು.
6. ಎಂ.ಎಸ್.ಪುಟ್ಟಣ್ಣ ರವರ 'ಮಾಡಿದ್ದುಣ್ಣೋ ಮಾರಾಯ' ಮೊದಲ ಕಾದಂಬರಿ.

**6. ವೈಚಾರಿಕ ಲೇಖನಗಳು/ವೈಚಾರಿಕ ಸಾಹಿತ್ಯ**

ವೈಚಾರಿಕತೆ ಎಂದರೆ ವಿಚಾರ ಮಾಡುವುದು, ವಿಚಾರ ಪೂರ್ಣವಾದ, ವಿಷಯಗಳನ್ನು ವಿವಿಧ ದೃಷ್ಟಿಕೋನದಿಂದ ಅರ್ಥೈಸುವುದು ಎಂದು ತಿಳಿಯಬಹುದು. ಯಾವುದಾದರೂ ಒಂದು ವಿಷಯವನ್ನು ಇಟ್ಟುಕೊಂಡು ವೈಚಾರಿಕವಾಗಿ ಉದಾಹರಣೆಗಳ ಮೂಲಕ ವಿವರಿಸುತ್ತಾ ಅರ್ಥೈಸುತ್ತ ಬರೆಯುವುದು ವೈಚಾರಿಕ ಲೇಖನ ಎಂದು ಕರೆಯಲಾಗುತ್ತದೆ. ವಿಷಯವನ್ನು ಗ್ರಹಿಸಿಕೊಂಡು ಭಾವನಾತ್ಮಕ ವಿಷಯಗಳನ್ನು ಬದಿಗೊತ್ತಿ ಅದರ ಅಂತರಾರ್ಥವನ್ನು ಅರಿತು ಸತ್ಯವನ್ನು ಎತ್ತಿಹಿಡಿಯುವಂತಿರಬೇಕು. ಇಂತಹ ಲೇಖನಗಳು ವಿಜ್ಞಾನದಷ್ಟು ಸತ್ಯವಾಗಿರಬೇಕು. ಉದಾ ಸತ್ಯ, ಅಹಿಂಸೆ, ಕರುಣೆ, ಪ್ರೀತಿ, ದೇವರು, ಜ್ಞಾನ, ಅರಿವು, ಪ್ರಜ್ಞೆ , ಮೂಢನಂಬಿಕೆ ಇತ್ಯಾದಿ ಅಂಶಗಳ ಬಗ್ಗೆ ಸಮಸ್ತವಾಗಿ ಎಲ್ಲರಿಗೂ ಅದರ ಅರಿವು ಮೂಡುವಂತೆ ವಿವರಿಸುವುದು. ವ್ಯಕ್ತಿಯ ವೈಚಾರಿಕ ಆಲೋಚನೆಗಳು ಸಮಸ್ತ ಓದುಗರಿಗೆ ಜ್ಞಾನ ಮೂಡಿಸುವುದರ ಜೊತೆಗೆ ಪರಿವರ್ತನೆಗೆ ದಾರಿದೀಪವಾಗಬೇಕು. ವೈಚಾರಿಕ ಸಾಹಿತ್ಯ ವಿಶ್ಲೇಷಣಾತ್ಮಕವಾದದ್ದು. ಪ್ರಯೋಗಪೂರ್ವಕವಾಗಿ ಚಿಕಿತ್ಸಕ ದೃಷ್ಟಿಯಿಂದ ಅದರ ಸತ್ವವನ್ನು ಗುರುತಿಸಿ, ಸಂಗ್ರಹಿಸಿದ ಅಥವಾ ತಿಳಿದ ವಿಚಾರಗಳನ್ನು ವಿವೇಚಿಸಿ ಕರಾರುವಕ್ಕು ಎನಿಸುವಂತೆ ನಿರ್ಣಯ ನೀಡುವ ದಿಕ್ಕಿನಲ್ಲಿ ಮುಂದುವರೆದಿರಬೇಕು. ಅದು ಯಾವುದಾದರೂ ಒಂದು ನಿಶ್ಚಿತ ವಿಷಯದಬಗ್ಗೆ ಸಂಶೋಧನೆ ಅದರ ಫಲವಾದ ಪ್ರಜ್ಞೆಯದ ದಾಖಲೆ. ಅನುಶೀಲನೆ, ನಿರ್ಣಯಗಳಿಂದ ಕೂಡಿರುತ್ತದೆ. ಕನ್ನಡದಲ್ಲಿ ಸಾಕಷ್ಟು ವೈಚಾರಿಕವಾಗಿ ಆಲೋಚಿಸುವ ಲೇಖಕರಿದ್ದಾರೆ.

- ವೈಚಾರಕತೆ ಎಂದರೆ ವಿಚಾರ ಮಾಡುವ ಶಕ್ತಿ , ಚಿಂತನೆ ಶಕ್ತಿಯಾಗಿದೆ.
- ವ್ಯಕ್ತಿಯ ವೈಚಾರಿಕ ಲೇಖನಗಳು ಸಮಸ್ತ ಓದುಗರಿಗೆ ಜ್ಞಾನ ಮೂಡಿಸುವುದರ ಜೊತೆಗೆ ಪರಿವರ್ತನೆಗೆ ದಾರಿದೀಪವಾಗುತ್ತವೆ.
- ವೈಚಾರಿಕ ಸಾಹಿತ್ಯ ವಿಶ್ಲೇಷಣಾತ್ಮಕವಾದದ್ದು. ಪ್ರಯೋಗಪೂರ್ವಕವಾಗಿ ಚಿಕಿತ್ಸಕ ದೃಷ್ಟಿಯಿಂದ ಅದರ ಸತ್ವವನ್ನು ಗುರುತಿಸಿ, ಸಂಗ್ರಹಿಸಿದ ಅಥವಾ ತಿಳಿದ ವಿಚಾರಗಳನ್ನು ವಿವೇಚಿಸಿ ಕರಾರುವಕ್ಕು ಎನಿಸುವಂತೆ ನಿರ್ಣಯ ನೀಡುವ ದಿಕ್ಕಿನಲ್ಲಿ ಮುಂದುವರೆದಿರಬೇಕು.
- ತಾರ್ಕಿಕವಾದ ವಿಚಾರ ಮಂಥನ.
- ಸಾಮಾಜಿಕ ಮೌಢ್ಯದ ವಿರುದ್ಧ ಹೋರಾಟದ ಮತ್ತೊಂದು ಪ್ರಯತ್ನ.
- ದೇವನೂರು ಮಹಾದೇವರ ಎದೆಗೆ ಬಿದ್ದ ಅಕ್ಷರ, ಮೂರ್ತಿರಾಯರ ದೇವರು.

**7. ಭಾವಗೀತೆ**

ಭಾವಗೀತೆಯ ಅರ್ಥವನ್ನು ಸರಳವಾಗಿ ಗ್ರಹಿಸಬಹುದಾದರೆ ವ್ಯಕ್ತಿಯ ಭಾವಗಳಿಗೆ ಅಭಿವ್ಯಕ್ತಿ ಕೊಡುವ ಕವನವನ್ನೆ **ಭಾವಗೀತೆ** ಎಂದು ಕರೆಯಬಹುದು. ಭಾವವೆಂದರೆ ಇರುವಿಕೆ ಎನ್ನುವುದು ಸಾಮಾನ್ಯ ಅರ್ಥ. ಮನುಷ್ಯನ ಅನಿಸಿಕೆಗಳ ಮೂಲ ಅರ್ಥದಲ್ಲಿ ಪ್ರಕಟಗೊಳ್ಳುವುದನ್ನು ಭಾವ ಎನ್ನಬಹುದು. ಅಂತಹ ಭಾವಗಳು ಗೇಯತೆಯ ಲಯದ ಹಿನ್ನೆಲೆಯಲ್ಲಿ ಹಾಡುಗಳ ರೂಪದಲ್ಲಿ ವ್ಯಕ್ತವಾಗುವುದೇ ಭಾವಗೀತೆ. ಶ್ರೀ ಸಾಮಾನ್ಯನ ಎಲ್ಲ ಬಗೆಯ ಭಾವಗಳು, ಆ ಹಿನ್ನೆಲೆಯ ಕನಸು–ಕಲ್ಪನೆಗಳು, ಆಸೆ–ಆಕಾಂಕ್ಷೆಗಳು, ನೋವು–ನಿರಾಸೆಗಳು ಎಲ್ಲಾ ಭಾವವನ್ನು ಆಧರಿಸಿದಂತೆ ಕವಿತೆಗಳು ಸೃಷ್ಟಿಗೊಳ್ಳುವಾಗ, ಅವು ಹಾಡುಗಳೂ ಆಗಬಹುದಾದ ಬಗೆಯ ಪ್ರಯೋಗಶೀಲತೆಯು ಇಲ್ಲಿಯೇ ಸಾಧ್ಯವಾಯಿತು. ಭಾವಗೀತೆಗೆ ಇರುವ ಎರಡು ಪ್ರಧಾನ ಗುಣಗಳೆಂದರೆ ಒಂದು ಭಾವಪ್ರಧಾನತೆ, ಎರಡನೆಯದು ಗೀತಾತ್ಮಕತೆ.

ಪಾಶ್ಚಾತ್ಯರಲ್ಲಿ ಲಿರಿಕ್ ಎನ್ನುವ ಪದ್ಯ ಪ್ರಕಾರಕ್ಕೆ ಕನ್ನಡದ ಸಂದರ್ಭದಲ್ಲಿ 'ಭಾವಗೀತೆ' ಎನ್ನುವ ಪದವನ್ನು ಬಳಸಲಾಗಿದೆ. ಇಂಗ್ಲಿಷಿನ ಲಿರಿಕ್‌ಗೆ ಮೂಲ ಗ್ರೀಕ್‌ನಿಂದ ಲಭ್ಯವಾಗಿದೆ. ಲೈರಿಕೋಸ್ ಎನ್ನುವುದು ಗ್ರೀಕ್‌ಪದ. ಲೈರ್ ಎಂದರೆ ತಂತಿವಾದ್ಯ ಎನ್ನುವ ಅರ್ಥವಿದೆ. ತಂತಿವಾದ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಹಾಡುತ್ತಿದ್ದ ಕಾರಣದಿಂದಲೂ ಲೈರಿಕೋಸ್ ಅರ್ಥ ಉಂಟಾಗಿರಬಹುದೆಂಬ ಊಹೆಯಿದೆ. 'ಲೈರ' ಎನ್ನುವುದು ಏಳು ತಂತಿಗಳ ವಾದ್ಯ ಎನ್ನಲಾಗಿದೆ.

ಲಿರಿಕ್‌ನ ಮುಖ್ಯವಾದ ಲಕ್ಷಣವೆಂದರೆ ಕವಿ ತನಗೆ ಅನ್ನಿಸಿದ ಅನುಭವವನ್ನು ನೇರವಾಗಿ ಹೇಳುವುದು. ಜೊತೆಗೆ ಹೆಸರೇ ಸೂಚಿಸುವಂತೆ ಹಾಡಿನ ಗುಣವೂ ಅದರ ಒಳಗೇ ಹಾಸುಹೊಕ್ಕಾದಂತಿರುತ್ತದೆ. ಅಂದರೆ ಕಾವ್ಯವು ಮನಸ್ಸಿನ ಒಳಗೆ ಹಾಡಾಗುವುದು. ಇದರ ಅರ್ಥ ಭಾವಗೀತೆ ಭಾವಪ್ರಧಾನವಾಗುವುದರಿಂದ, ಇದರೊಳಗೆ ಭಾವುಕತೆಯು ತೀವ್ರವಾಗಿರುವ ಸಾಧ್ಯತೆಯು ಇರುತ್ತದೆ. ಒಂದು ವಸ್ತು ಅಥವಾ ಒಂದು ವಸ್ತುವಿನ ಭಾವವನ್ನು ಕವಿ ಕಾಣುವ, ಕಂಡು ಗ್ರಹಿಸುವ, ಗ್ರಹಿಸಿದ್ದನ್ನು ಅನುಭವಿಸುವ, ಅನುಭವಿಸಿದ್ದನ್ನು ಅಭಿವ್ಯಕ್ತಿಸುವ ಮೂಲಕ ಆನಂದದ ರಸವನ್ನು ಹೊಂದುವುದು ಭಾವಗೀತೆಯ ಅರ್ಥ ಮತ್ತು ಗುರಿಗಳೆರಡೂ ಆಗಿದ್ದವು.

'ಗೀತೆ' ಎನ್ನುವ ಉತ್ತರಾರ್ಧದ ಉಲ್ಲೇಖದಂತೆ 'ಗೇಯತೆ'ಯನ್ನು ಆಧರಿಸಿದ ಗೀತಾತ್ಮಕತೆ ಭಾವಗೀತೆಯ ಮುಖ್ಯ ಲಕ್ಷಣವಾಗಿತ್ತು. ಇದೊಂದು ಹಾಡುವ ಧಾಟಿಗೆ ಸಂಬಂಧಿಸಿದ ಅಂಶ; ಮತ್ತು ಅದು ಗೀತೆಯ ಚೌಕಟ್ಟೂ ಹೌದು. ಚಿಕ್ಕದಾಗಿದ್ದಲ್ಲಿ ಅದಕ್ಕೊಂದು ವಿಸಿಷ್ಟವಾದ ಸೌಂದರ್ಯವೂ ಲಭ್ಯವಾಗುತ್ತಿತ್ತು. ಹಾಗೆಂದ ಮಾತ್ರಕ್ಕೆ ತೀರ ಚಿಕ್ಕದಾಗಿರಬೇಕೆಂದಾಗಲೀ, ಉದ್ದವಾಗಿರಲೇಬಾರದೆಂದಾಗಲೀ ಅರ್ಥವಲ್ಲ. ಅದು ಕವಿಯ ನಿರೂಪಣ–ನಿಯಂತ್ರಣ ಸಾಮರ್ಥ್ಯಕ್ಕೆ ಸಂಬಂಧಿಸಿದುದಾಗಿತ್ತು. ಕಲ್ಪನಾ ಸಾಮರ್ಥ್ಯ ಮತ್ತು ವ್ಯಕ್ತಿನಿಷ್ಠ ಭಾವವನ್ನು ಒಳಗೊಳ್ಳುವ ಪರಿಪೂರ್ಣ

ಪ್ರಮಾಣದ ಶಿಲ್ಪವಾಗಿ ಹೊರಹೊಮ್ಮಿದ ಭಾವಗೀತೆ ಕವಿಯ ಅಂತರಂಗ ಭಾವದ ಸದ್ಭಾವನೆಯಾಗಿಯೂ ಪ್ರಕಟಗೊಂಡದ್ದಿದೆ.

ಭಾವಗೀತೆ ಅಗತ್ಯಕ್ಕೆ ಅನುಸಾರಿಯಾದ ಪ್ರತಿಮೆ, ಉಪಮೆ, ದೃಷ್ಟಾಂತ ಮತ್ತು ಸಂಕೇತಗಳೇ ಮೊದಲಾದ ಲಕ್ಷಣಗಳೊಂದಿಗೆ ಔಚಿತ್ಯಪೂರ್ಣವಾಗಿ, ಸಮಂಜಸವಾಗಿ ಅಷ್ಟೇ ಧ್ವನಿಪೂರ್ಣವಾಗಿ ರೂಪುಗೊಳ್ಳುತ್ತದೆ. ಕವಿಯ ತೀರ ವೈಯಕ್ತಿಕವಾದ ಅನುಭವಕ್ಕೆ ಮಾಧ್ಯಮವಾಗುವ ಈ ಕಾವ್ಯದಲ್ಲಿ ವಸ್ತುವಿಗಿಂತ ವಸ್ತುವಿನಿಂದ ಉಂಟಾಗಬಹುದಾದ ಭಾವವೇ ಪ್ರಧಾನವಾಗುತ್ತದೆ. ಸನ್ನಿವೇಶ ಅಥವಾ ಘಟನೆಗಳಿಗೆ ಪ್ರಾಮುಖ್ಯ ಬರುವುದು ಭಾವದಿಂದ ಮಾತ್ರ. ಆದ್ದರಿಂದಲೇ ಅನುಭವ ಮತ್ತು ಅದಕ್ಕೆ ಪೂರಕವಾಗುವ ಸಂವೇದನೆಗಳಿಗೆ ಮಾತ್ರವೇ ಇಲ್ಲಿ ಹೆಚ್ಚಿನ ಪ್ರಾಧಾನ್ಯ ಇರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಗೋವಿಂದ ಪೈ, ಡಿ.ವಿ.ಜಿ , ಪಂಜೆ ಮಂಗೇಶರಾಯ ,ಎಸ್.ಜಿ. ನರಸಿಂಹಾಚಾರ್ಯರು , ಹಟ್ಟಿಯಂಗಡಿ ನಾರಾಯಣರಾಯ , ಶಾಂತಿಕವಿ , ಬೇಂದ್ರೆ , ಮಾಸ್ತಿ , ಕುವೆಂಪು , ಪುತಿನ , ಕೆ.ಎಸ್.ನ ಜಿ.ಎಸ್. ಶಿವರುದ್ರಪ್ಪ ಮೊದಲಾದವರು ಭಾವಗೀತೆಗಳನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡರು.ಅಂತಹ ಭಾವಗೀತಕಾರರಲ್ಲಿ ಜಿ.ಎಸ್.ಶಿವರುದ್ರಪ್ಪನವರು ಕೂಡ ಒಬ್ಬರಾಗಿದ್ದಾರೆ.

**8. ಲಲಿತ ಪ್ರಬಂಧ**

ಆಧುನಿಕ ಶಿಕ್ಷಣಕ್ಷೇತ್ರ ವಿಸ್ತಾರಗೊಂಡಂತೆಲ್ಲ ಸಾಹಿತ್ಯ ಕ್ಷೇತ್ರವೂ ಹೊಸಹೊಸ ಆಯಾಮಗಳನ್ನು ಹೊಂದುತ್ತಾ ಬಂದಿದೆ. ಕಾವ್ಯ, ನಾಟಕ ಎಂಬ ಬೆರಳೆಣಿಯಷ್ಟು ಪ್ರಕಾರಗಳನ್ನು ಹೊಂದಿದ್ದ ಕನ್ನಡ ಸಾಹಿತ್ಯವು ಆಧುನಿಕ ಶಿಕ್ಷಣದಿಂದ ಅದರಲ್ಲೂ ಇಂಗ್ಲಿಷ್ ಸಾಹಿತ್ಯ ಸಾಮೀಪ್ಯದಿಂದ ಭಾವಗೀತೆ, ಜೀವನಚರಿತ್ರೆ, ಪ್ರಬಂಧಗಳು, ಸಂಶೋಧನಾತ್ಮಕ ಲೇಖನಗಳೇ ಮೊದಲಾದ ಅನೇಕ ಪ್ರಕಾರಗಳನ್ನು ಕಂಡಿತು. ಪ್ರಬಂಧ ಪ್ರಕಾರವೊಂದರಲ್ಲೆ ಲಲಿತ ಪ್ರಬಂಧ, ಹರಟೆಯ ರೂಪದ ಪ್ರಬಂಧ, ಸಂಶೋಧನಾತ್ಮಕ ಪ್ರಬಂಧ, ವೈಚಾರಿಕ ಪ್ರಬಂಧ, ವೈಜ್ಞಾನಿಕ ಪ್ರಬಂಧ, ಪ್ರವಾಸ ಪ್ರಬಂಧ ಮೊದಲಾದ ಒಳಪ್ರಭೇದಗಳನ್ನು ನೋಡಬಹುದು.

ಲಲಿತ ಪ್ರಬಂಧ ಹಾಸ್ಯ ಮಿಶ್ರಿತವಾಗಿದ್ದು, ಸತ್ಯ ಸಂಗತಿಗಳನ್ನು ಮತ್ತು ಘಟನೆಗಳನ್ನು ಹಾಸ್ಯ ದೃಷ್ಟಿಯಿಂದ ನೋಡುವುದಾಗಿದೆ. ಸತ್ಯಕ್ಕೆ ಕೆಲವು ಕಲ್ಪನೆಗಳನ್ನು ಸೇರಿಸಿ ಸತ್ಯವೋ ಎಂಬಂತೆ ಬರೆದವುಗಳಾಗಿರುತ್ತವೆ. ಲಲಿತ ಪ್ರಬಂಧಗಳು ಭಾಷೆ ಮತ್ತು ಭಾವಗಳ ಲಾಲಿತ್ಯದಿಂದಾಗಿರುತ್ತವೆ. ಆದ್ದರಿಂದ ಲಾಲಿತ್ಯದಿಂದ ಕೂಡಿದ ಪ್ರಬಂಧ ಲಲಿತ ಪ್ರಬಂಧ ಎಂದು ಕರೆಯಬಹುದು. ಲಲಿತ ಪ್ರಬಂಧವೊಂದನ್ನು ಎಷ್ಟು ಸುಂದರವಾಗಿಸಬಹುದೆಂಬುದನ್ನು ಎ.ಎನ್. ಮೂರ್ತಿರಾಯರು ಇಲ್ಲಿ ತೋರಿಸಿದ್ದಾರೆ.

- ಲಲಿತ ಪ್ರಬಂಧ ಗದ್ಯ ಸಾಹಿತ್ಯದಲ್ಲಿ ಅತ್ಯಂತ ಜನಪ್ರಿಯ ಪ್ರಕಾರ.
- ಲಲಿತ ಪ್ರಬಂಧ ಹಾಸ್ಯ ಮಿಶ್ರಿತವಾಗಿದ್ದು, ಸತ್ಯ ಸಂಗತಿಗಳನ್ನು ಮತ್ತು ಘಟನೆಗಳನ್ನು ಹಾಸ್ಯ ದೃಷ್ಟಿಯಿಂದ ನೋಡುವುದಾಗಿದೆ.
- ಗಂಭೀರ ವಿಚಾರವನ್ನು ನೈಜತೆಯ ನೆಲೆಗಟ್ಟಿನಲ್ಲಿ ಹಾಸ್ಯಲೇಪನ ದೊಂದಿಗೆ ಬಿಂಬಿಸುವುದು ಅದರ ಶೈಲಿ ಮತ್ತು ಗುಣ.
- ಸತ್ಯಕ್ಕೆ ಕೆಲವು ಕಲ್ಪನೆಗಳನ್ನು ಸೇರಿಸಿ ಸತ್ಯವೋ ಎಂಬಂತೆ ಬರೆದವುಗಳು.
- ಲೇಖಕರು ತಮ್ಮ ಮನೋಗತವನ್ನು ಹರಳುಗಟ್ಟಿಸಿ ವರ್ಣನೆ ಮಾಡಿ ಓದುಗರ ಗಮನ ಸೆಳೆಯುವಲ್ಲಿ ಲಲಿತ ಪ್ರಬಂಧಗಳು ಯಶಸ್ವಿಯಾಗಿವೆ.
- ಲಲಿತ ಪ್ರಬಂಧಗಳು ಕಣ್ಣಿಗೆ ಕಟ್ಟುವಂತೆ ಪ್ರಸಂಗಗಳನ್ನು ನಿರೂಪಿಸುತ್ತವೆ.
- ಇಲ್ಲಿನ ಪಾತ್ರಗಳು ಕಲ್ಪಿತ ಪಾತ್ರಗಳಾಗಿವೆ.
- ಎ.ಎನ್. ಮೂರ್ತಿರಾಯರು , ಎಂ.ಆರ್.ಶ್ರೀನಿವಾಸಮೂರ್ತಿರವರು ಮುಂತಾದವರುಗಳು ಲಲಿತ ಪ್ರಬಂಧಗಳನ್ನು ಬರೆದಿದ್ದಾರೆ.

**9. ಆತ್ಮಕತೆ**

ಆತ್ಮ ಕಥೆ ಎಂದರೆ ಒಬ್ಬ ವ್ಯಕ್ತಿ ತನ್ನ ಬಗ್ಗೆ ತಾನೇ ಬರೆದುಕೊಳ್ಳುವುದು ಆತ್ಮಚರಿತ್ರೆ . ಅವರು ತಮ್ಮ ಜೀವನದ ಅನುಭವಗಳನ್ನು , ತಮ್ಮ ಜೀವನದಲ್ಲೊ ನಡೆದ ಸಿಹಿ– ಕಹಿ ನೆನಪುಗಳನ್ನು ತಮ್ಮ ಹಿರಿಯರ ಯಶೋಗಾಥೆಗಳನ್ನು , ತಮ್ಮ ಊರಿನ ಆಚಾರವಿಚಾರಗಳು, ಸಂಪ್ರದಾಯಗಳು ಇತ್ಯಾದಿ ವಿಚಾರಗಳನ್ನು ಸೇರಿಸಿಕೊಂಡು ತಮ್ಮ ಬಗ್ಗೆ ತಾವೇ ಬರೆದುಕೊಳ್ಳುವುದು.

**ಉದಾಹರಣೆ :** ನೆನಪಿನ ದೋಣಿಯಲಿ – ಕುವೆಂಪು

ಭಾವ – ಮಾಸ್ತಿ

ಹುಚ್ಚು ಮನಸ್ಸಿನ ಹತ್ತು ಮುಖಗಳು – ಶಿವರಾಮ ಕಾರಂತ

ವಿಂಗ್ಸ್ ಆಫ್ ಫೈಯರ್ – ಎ.ಪಿ.ಜೆ.ಅಬ್ದುಲ್ ಕಲಾಂ

ಮೈ ಎಕ್ಸಪೀರಿಮೆಂಟ್ ವಿಥ್ ಟ್ರೂಥ್ – ಮಹಾತ್ಮ ಗಾಂಧೀಜಿ

ಮೆಮೋರೀಸ್ (Memoirs) ಆಫ್ ಮೈ ವರ್ಕಿಂಗ್ ಲೈಫ್ – ಸರ್.ಎಂ.ವಿಶ್ವೇಶ್ವರಯ್ಯ

**10. ಜನಪದ ಸಾಹಿತ್ಯ**

- ಜನಪದ ಸಾಹಿತ್ಯವು ಮನುಷ್ಯನಷ್ಟೇ ಪ್ರಾಚೀನವಾದ ಸಾಹಿತ್ಯ ಪ್ರಕಾರ.ಈ ಸಾಹಿತ್ಯವು ಆಕಾಶದಷ್ಟು ವಿಶಾಲ ಹಾಗೂ ಸಾಗರದಷ್ಟು ಆಳವಾದುದಾಗಿದೆ.
- ಶಿಷ್ಟ ಸಾಹಿತ್ಯಕ್ಕೆ ಜನಪದ ಸಾಹಿತ್ಯವೇ ಮೂಲ ಪ್ರೇರಣೆ.
- ಶ್ರೀಸಾಮಾನ್ಯರ ಅನುಭವ ಮತ್ತು ಕ್ರಿಯೆಯೊಂದಿಗೆ ಸಹಜವಾಗಿ ಮೂಡಿಬಂದ ನುಡಿಮುತ್ತು.
- ಜನಪದ ಸಾಹಿತ್ಯವು ದೈನಂದಿನ ಬದುಕಿನ ಪ್ರತೀಕಗಳು, ಗೇಯತೆ, ಸಮೂಹ ಸೃಷ್ಟಿಗಳನ್ನು ಒಳಗೊಂಡಿದೆ.
- ಮೌಖಿಕ ಪರಂಪರೆಯಿಂದ ಹರಿದು ಬಂದ ಸಾಹಿತ್ಯ ಪ್ರಕಾರ.
- ಜನಪದ ಸಾಹಿತ್ಯದಲ್ಲಿ ಮೌಲ್ಯಗಳನ್ನು ,ವೈವಿಧ್ಯತೆಯನ್ನು , ಸಂಕೀರ್ಣತೆಯನ್ನು ಕಾಣಬಹುದು.
- ಜನಪದ ಸಾಹಿತ್ಯದಲ್ಲಿ ಕತೆಗಳು, ತ್ರಿಪದಿಗಳು, ಲಾವಣಿಗಳು, ಗೀತೆಗಳು , ನೃತ್ಯಗಳು , ಗಾದೆಗಳು , ಒಗಟುಗಳು ಮುಂತಾದ ಪ್ರಕಾರಗಳನ್ನು ಕಾಣಬಹುದು.

**ಜನಪದ ಲಾವಣಿಗಳು**

ಜನಪದ ಸಾಹಿತ್ಯ ಶ್ರೀಸಾಮಾನ್ಯನ ಅನುಭವ ಹಾಗೂ ಕ್ರಿಯೆಯೊಂದಿಗೆ ಸಹಜ ಸ್ಫೂರ್ತಿಯಿಂದ ಹೊರ ಹೊಮ್ಮಿದ ನುಡಿಮುತ್ತು. ಅದರಲ್ಲಿ ಜನಪದ ಗೀತೆಗಳಿಗೆ ಅಗ್ರಸ್ಥಾನ. ಜನಪದ ಕತೆ, ಗಾದೆ, ಒಗಟು ಮತ್ತು ಲಾವಣಿಗಳೂ ಪ್ರಮುಖ ಪ್ರಕಾರಗಳು. ನಾಡು, ನುಡಿಗಾಗಿ ಶ್ರಮಿಸಿದ ಸಾಧಕರನ್ನು ಕುರಿತ ವ್ಯಕ್ತಿಚಿತ್ರಗಳು, ಹಾಗೂ ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಲಾವಣಿಗಳಿಗೆ ಪ್ರಮುಖ ಸ್ಥಾನ.

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಮೌಖಿಕ ಪರಂಪರೆಯಲ್ಲಿ ಪರಂಪರಾಗತವಾಗಿ ಸಾಗಿಬಂದ ಹಾಡಿನಲ್ಲಿ ನಿರೂಪಿಸಲಾದ ಕಥೆಯನ್ನು ಲಾವಣಿ ಎಂದು ಕರೆಯಲಾಗುತ್ತದೆ. ಲಾವಣಿಯ ಮೂಲ ದ್ರವ್ಯವೇ ಕಥಾಂಶ. ಕತೆಯನ್ನು ಗೀತೆಯ ಸ್ವರೂಪದಲ್ಲಿ ಹೇಳುವಂತಹದ್ದು. ಒಟ್ಟಿನಲ್ಲಿ ಲಾವಣಿ ಕಥನಾತ್ಮಕವಾದದು. ಅದು ಒಂದು ಹಾಡ್ಗತೆಯಾಗಿರುತ್ತದೆ. ಹಾಡುವಂಥದ್ದಾಗಿರುತ್ತದೆ. ರೂಪ ಮತ್ತು ವಿಷಯ ಎರಡರಲ್ಲಿಯೂ ಜನಪದ ಮಾದರಿಯದಾಗಿರುತ್ತದೆ. **ಲಾವಣಿ ವೀರತನ, ಸಾಹಸವನ್ನು ವರ್ಣಿಸುವುದರಿಂದ ವೀರಗೀತೆ ಎಂದು ಕರೆಯುತ್ತಾರೆ**. ಏಕ ಘಟನೆಯನ್ನಾಧರಿಸಿದ್ದು ಕಥನಾತ್ಮಕವಾಗಿರುವ ಲಾವಣಿಗಳು ಹಾಡಿನ ರೂಪದಲ್ಲಿ ಕಟ್ಟಿದ ಕತೆ. ಜನಸಾಮಾನ್ಯರು ರಚಿಸಿರುವ ಲಾವಣಿಗಳು ವಸ್ತುನಿಷ್ಠವಾಗಿರುತ್ತವೆ. ಹಿಂದಿನಿಂದ ವಾಕ್ಪರಂಪರೆಯಲ್ಲಿ ಉಳಿದು ಬಂದಿದ್ದು, ಐತಿಹಾಸಿಕ ಮಹತ್ವ ಪಡೆದಿವೆ. ಗದ್ಯದ ಹೊಳಹನ್ನು, ಭಾವಗೀತದ ಸತ್ವವನ್ನು ಹೊಂದಿರುವ ಲಾವಣಿಗಳು ಧ್ವನಿ ರಮ್ಯತೆಯನ್ನು ಅರ್ಥಸೌಂದರ್ಯವನ್ನು ಹೊಂದಿವೆ. ಉದಾಹರಣೆಗೆ ಕಿತ್ತೂರು ಚನ್ನವ್ವನ ಲಾವಣಿ , ಸಂಗೊಳ್ಳಿ ರಾಯಣ್ಣನ ಲಾವಣಿ , ಹಲಗಲಿ ಬೇಡರ ಲಾವಣಿ ಇತ್ಯಾದಿ ಹೆಸರಿಸಬಹುದು.

**ಒಗಟುಗಳು**

ಜನಪದ ಸಾಹಿತ್ಯ ಜನರ ಮನದ ಭಾವನೆಗಳ ಅಭಿವ್ಯಕ್ತಿ ಮಾಧ್ಯಮವಾಗಿದೆ. ಅದರಲ್ಲೂ ಒಗಟುಗಳನ್ನು ಕಟ್ಟುವ ಕಲೆ ಜನಪದರಿಗೆ ಕರತಲಮಲಕವಾದದ್ದು. ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ವಿವಿಧ ರೀತಿಯಲ್ಲಿ ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು,

ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

**ಗದ್ಯ ಬೋಧನೆ ಮಾಡುವಾಗ ಗಮನಿಸಬೇಕಾದ ಅಂಶಗಳು**

- ಮಕ್ಕಳನ್ನು ಕಲಿಕೆಗೆ ಸಿದ್ಧ ಗೊಳಿಸಿ , ಆಸಕ್ತಿ ಮೂಡಿಸಿ ಸೂಕ್ತ ವಾತಾವರಣವನ್ನು ಕಲ್ಪಿಸಿಕೊಳ್ಳಬೇಕು.
- ಗದ್ಯ ಸಾಹಿತ್ಯದ ಪ್ರಕಾರ, ಗದ್ಯದ ಲೇಖಕರ ಜೀವನ , ಸಾಧನೆ , ಮತ್ತು ಕೃತಿಗಳನ್ನು ಪರಿಚಯಿಸಬೇಕು.
- ಗದ್ಯ ಬೋಧನೆಯ ಒಂದು ಮುಖ್ಯ ಉದ್ದೇಶ ಮಕ್ಕಳಿಗೆ ಓದುವ ಸಾಮರ್ಥ್ಯವನ್ನು ಬೆಳೆಸುದಾಗಿದ್ದು ಶಿಕ್ಷಕರ ಮಾದರಿ ವಾಚನ ಮಕ್ಕಳ ಬಾಯ್ದೆರೆ ಮತ್ತು ಮೌನ ವಾಚನಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳಬೇಕು.
- ಗದ್ಯ ಪಾಠದಲ್ಲಿ ಬರುವ ವ್ಯಾಕರಣವನ್ನು ವ್ಯವಸ್ಥಿತವಾಗಿ ತಿಳಿಸಿ, ಸೂಕ್ತ ಸಂದರ್ಭಗಳಲ್ಲಿ ವಿವರಿಸಿ ಹೇಳಬೇಕು.
- (ಲೇಖನ ಚಿಹ್ನೆಗಳು, ಹ್ರಸ್ವ, ದೀರ್ಘಸ್ವರ, ಅಲ್ಪ, ಮಹಾಪ್ರಾಣಾಕ್ಷರಗಳ ಉಚ್ಚಾರಣೆ, ಒತ್ತಾಕ್ಷರಗಳು ಮೊದಲಾದವು)
- ಗದ್ಯಕ್ಕೆ ಪೂರಕವಾದ ಮಾಹಿತಿಗಳನ್ನು ತಿಳಿಸಬೇಕು.
- ಗದ್ಯದಲ್ಲಿ ಬರುವ ಮುಖ್ಯಾಂಶಗಳಿಗೆ ವಿಶೇಷ ಒತ್ತುಕೊಟ್ಟು ಹೇಳಬೇಕು. ಗದ್ಯದ ಕೇಂದ್ರ ಭಾವನೆಯನ್ನು ಮಕ್ಕಳು ಅರಿಯುವಂತೆ ಒತ್ತು ನೀಡಬೇಕು.
- ಗದ್ಯದ ಬೋಧನಾ ವಿಷಯಗಳನ್ನು ನಿತ್ಯ ಜೀವನದ ವಿಷಯಗಳೊಂದಿಗೆ ಸಮನ್ವಯಗೊಳಿಸಿ ಹೇಳಬೇಕು.
- ನಿದರ್ಶನಗಳ ಮೂಲಕ ಮಕ್ಕಳ ವಿಷಯ ಗ್ರಹಿಕೆಯನ್ನು ಬಲಪಡಿಸಬೇಕು.
- ಗದ್ಯದ ವಿಷಯದ ಬಗ್ಗೆ ಪಠ್ಯಪುಸ್ತಕವನ್ನು ಕಡೆಗಣಿಸಿ ಬರಿ ಸಾರಾಂಶವನ್ನು ಹೇಳುವುದು ಉಚಿತವಲ್ಲ.
- ಗದ್ಯ ಬೋಧನೆಯ ಸಂದರ್ಭದಲ್ಲಿ ವಿವಿಧ ಹಂತಗಳಲ್ಲಿ ಸ್ಪಷ್ಟ ಸೂಚನೆ ನೀಡುತ್ತಾ ಬೋಧನೆ ಸಾಗಬೇಕು.
- ಗದ್ಯ ಬೋಧನೆಯ ಸಂದರ್ಭಗಳಲ್ಲಿ ಬೋಧನಾ ಕಲಿಕೋಪಕರಣಗಳನ್ನು ಉಪಯೋಗಿಸಿಕೊಂಡು ಬೋಧಿಸಬೇಕು.

*****

## 5. ಪದ್ಯ ಸಾಹಿತ್ಯ ಬೋಧನೆ

ಪ್ರಾಚೀನ ಕಾಲದ ಕನ್ನಡ ಸಾಹಿತ್ಯವು ಕಾವ್ಯಮಯವಾಗಿದೆ. ಧರ್ಮ,ಸಂಸ್ಕೃತಿ, ಮಾನವೀಯ ಮೌಲ್ಯಗಳು, ಪುರಾಣಗಳು, ಕಲೆ, ಸಾಮಾಜಿಕ ಜೀವನವನ್ನು ಆಧರಿಸಿದ ಅಂಶಗಳ ಸಾಹಿತ್ಯವು ಕಾವ್ಯರೂಪದಲ್ಲಿ ಹರಿದು ಬಂದಿದೆ. ಹಿಂದಿನಿಂದಲೂ ಅಕ್ಷರ ಜ್ಞಾನವಿಲ್ಲದವರು ಗಮಕಿಗಳ ಮತ್ತು ವಿದ್ಯಾವಂತರ ನೆರವಿನಿಂದ ಸಾಹಿತ್ಯದ ಸವಿಯನ್ನು ಸವಿದಿದ್ದಾರೆ.

**ಪದ್ಯವು**

- ಕವಿಯೊಬ್ಬನ ಕನಸು, ಕಲ್ಪನೆ, ಅನಿಸಿಕೆ, ಭಾವನೆ ಅಥವಾ ಅನುಭವಗಳು ಸುಂದರವಾದ ಭಾಷೆಯಲ್ಲಿ ಸುಸಂಬದ್ಧವಾಗಿ ಅಭಿವ್ಯಕ್ತಿಗೊಳ್ಳುವುದೇ ಪದ್ಯ.
- ಪದ್ಯವು ಸೃಜನಶೀಲ ಮತ್ತು ಕಲಾತ್ಮಕ ಅಭಿವ್ಯಕ್ತಿಯಾಗಿದ್ದು, ಭಾಷೆಯ ರಚನೆಯ ಚಮತ್ಕಾರ ಮತ್ತು ನಿರೂಪಣಾ ಕ್ರಮವು ಆಕರ್ಷಕ ಶೈಲಿಯಿಂದ ಛಂದೋಬದ್ಧವಾಗಿ ರೂಪುಗೊಂಡಿರುತ್ತದೆ.

**ಪದ್ಯದ ಅರ್ಥ ಮತ್ತು ಸ್ವರೂಪ**

- ಛಂದೋಬದ್ಧವಾದ ರಚನೆಯಾಗಿರುತ್ತದೆ.
- ಕಲ್ಪನೆ ಮತ್ತು ಸೃಜನಶೀಲ ಅಭಿವ್ಯಕ್ತಿಯಾಗಿರುತ್ತದೆ.
- ಭಾವನೆಗಳು ಕಲಾತ್ಮಕವಾಗಿ ರೂಪುಗೊಂಡಿರುತ್ತದೆ.
- ಸುಸಂಬದ್ಧ ರಚನೆಯಾಗಿದ್ದು ,ಲಯ ಮತ್ತು ಪ್ರಾಸಬದ್ಧವಾಗಿರುತ್ತದೆ.

- ಪದ್ಯದಲ್ಲಿ ರಸ,ಭಾವ ಹಾಗೂ ಸಾಹಿತ್ಯದ ಸ್ಪರ್ಶವಿರುತ್ತದೆ.
- ಕವಿಯ ಭಾವನೆಗಳು ಅಂತರ್ಗತಗೊಂಡಿದ್ದು,ಆಕರ್ಷಕ ಭಾಷಾ ಶೈಲಿಯಿಂದ ರಚಿಸಲ್ಪಟ್ಟಿರುತ್ತದೆ.
- Words in their best order is Prose.
- The best words in their best order is Poetry.
- ಆಂಗ್ಲ ಕವಿ ಕೋಲ್‌ರಿಜ್ ಇವರ ಪ್ರಕಾರ ಪದಗಳ ಸುಸಂಬದ್ಧ ರಚನೆಯೇ ಗದ್ಯ. **ಅತ್ಯುತ್ತಮ ಪದಗಳ ಸುಸಂಬದ್ಧ ರಚನೆಯೇ ಪದ್ಯ.**
- ಗದ್ಯವು ನಡೆದಾಡುವ ಕ್ರಯೆಯಾದರೆ, ಪದ್ಯವು ನೃತ್ಯಮಾಡುವ ಕ್ರಿಯೆ. ಇದು ಕಲಾತ್ಮಕ ಅಭಿವ್ಯಕ್ತಿಯಾಗಿದ್ದು, ಕಲಾಸಾಧನೆಯಾಗಿರುತ್ತದೆ.

**ಪದ್ಯ ಬೋಧನೆಯ ಪ್ರಾಮುಖ್ಯತೆ**

- ಸೃಜನಶೀಲ ಅಭಿವ್ಯಕ್ತಿಗಾಗಿ.
- ಭಾವನಾತ್ಮಕ ವಿಕಾಸಕ್ಕಾಗಿ.
- ಆನಂದಾನುಭವಕ್ಕಾಗಿ.
- ಕಾವ್ಯದ ರಸಸ್ವಾಧನೆನೆಗಾಗಿ.\
- ಗಾಯನ ಕಲೆಯ ಪರಿಣಿತಿ ಪಡೆಯುವುದಕ್ಕಾಗಿ.
- ಛಂದಸ್ಸು ಮತ್ತು ಅಲಂಕಾರಗಳ ಪರಿಚಯಕ್ಕಾಗಿ.

**ಗದ್ಯ ಮತ್ತು ಪದ್ಯಗಳ ನಡುವಿನ ವ್ಯತ್ಯಾಸಗಳು**

| ಗದ್ಯ | ಪದ್ಯ |
|---|---|
| Prose ಎಂಬ ಪದವು ಲ್ಯಾಟಿನ್ ಭಾಷೆಯ Prosa ಎಂಬ ಪದದಿಂದ ಬಂದಿದೆ. ಇದರ ಅರ್ಥ ಹೇಳುವುದನ್ನು ನೇರವಾಗಿ ಹೇಳುವುದು. | Poem ಎಂಬ ಪದವು ಗ್ರೀಕ್ ಭಾಷೆಯ Poiema ಎಂಬ ಪದದಿಂದ ಬಂದಿದೆ. ಇದರ ಅರ್ಥ ಹೇಳುವುದನ್ನು ನೇರವಾಗಿ ಹೇಳದೆ ಗೂಡಾರ್ಥವಾಗಿ ಹೇಳುವುದು. |
| ವಿಷಯ ಪ್ರಧಾನವಾಗಿದ್ದು,ಬುಧ್ಧಿಗೆ ಸಂಬಂಧಿಸಿರುತ್ತದೆ. | ಭಾವ ಹಾಗೂ ರಸ ಪ್ರಧಾನವಾಗಿದ್ದು, ಹೃದಯಕ್ಕೆ ಸಂಬಂಧಿಸಿರುತ್ತದೆ. |
| ಛಂದೋನಯಮಗಳಿಗೆ ಒಳಪಡದ ಸುಸಂಬದ್ಧ ರಚನೆ. | ಛಂದೋನಯಮಗಳಿಗೆ ಒಳಪಡುವ ಕಲಾತ್ಮಕ ರಚನೆ. |
| ಲೇಖಕರ ಆಲೋಚನೆಗಳು ವ್ಯಕ್ತವಾಗಿರುತ್ತವೆ. | ಕವಿಯ ಕಲ್ಪನೆಗಳು ವ್ಯಕ್ತವಾಗಿರುತ್ತವೆ. |
| ಮಾಹಿತಿ ವಿವರಗಳಿಂದ ಕೂಡಿರುತ್ತವೆ. | ಕಲ್ಪನೆಗಳು, ವರ್ಣನೆಗಳಿಂದ ಕೂಡಿರುತ್ತವೆ. |
| ತರ್ಕಬದ್ಧ ಭಾಷಾ ಶೈಲಿ. | ಕಲಾತ್ಮಕ,ಆಲಂಕಾರಿಕ ಭಾಷಾ ಶೈಲಿ. |
| ಓದಿಕೊಳ್ಳುವ ಸ್ವರೂಪದ ರಚನೆ. | ಗಾಯನ ಸ್ವರೂಪದ ರಚನೆ. |

**ಪದ್ಯ ಬೋದನೆ ಗುರಿಗಳು**

- ರಸಾನುಭವ ಮತ್ತು ಸೌಂದರ್ಯ ಪ್ರಜ್ಞೆ ಬೆಳೆಸುವುದು.
- ರಸ ಭಾವಗಳು ಕಲ್ಪನಾ ಶಕ್ತಿಯನ್ನು ಬೆಳೆಸುವುದು.
- ಆನಂದವನ್ನುಂಟು ಮಾಡುವುದು.

- ಕಲಾತ್ಮಕ ಮತ್ತು ಸುಸಂಬದ್ಧ ವಾಕ್ಯ ರಚನಾ ಕೌಶಲ ಬೆಳೆಸುವುದು.
- ಕಾವ್ಯದ ಗುಣಲಕ್ಷಣಗಳನ್ನು ಪರಿಚಯಿಸುವುದು.
- ಸೃಜನಶೀಲತೆ ಮತ್ತು ಕಲಾವಂತಿಕೆಯನ್ನು ಪೋಷಿಸುವುದು.
- ಛಂದಸ್ಸು ಮತ್ತು ಅಲಂಕಾರವನ್ನು ಪರಿಚಯಿಸುವುದು.
- ಸಾಹಿತ್ಯಾಭಿರುಚಿಯನ್ನು ಬೆಳೆಸುವುದು.
- ಭಾವಪೂರ್ಣ ಗಾಯನ ಕೌಶಲ ಬೆಳೆಸುವುದು.
- ನಾಡು ನುಡಿಗಳ ಬಗ್ಗೆ ಅಭಿಮಾನ ಮತ್ತು ಗೌರವ ಬೆಳೆಸುವುದು.

**ಪದ್ಯ ಬೋಧನಾ ಪದ್ಧತಿಗಳು**

**1. ಖಂಡ ಪದ್ಧತಿ (ಸಾಂಪ್ರದಾಯಿಕ/ಬಿಡಿ ಪದ್ಧತಿ)**

- ರಾಮಧಾನ್ಯ ಚರಿತೆ
- ಸಿರಿಯ ನಿನ್ನೇನ ಬಣ್ಣಿಪೆನು
- ನಿಯತಿಯನಾರ್ ಮೀರಿದಪರ್
- ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು
- ಕೌರವೇಂದ್ರನ ಕೊಂದೆ ನೀನು
- ಛಲಮನೆ ಮೆರೆವೆಂ
- ವೀರಲವ
- ಕೆಮ್ಮನೆ ಮೀಸೆವೊತ್ತನೇ

**2. ಅಖಂಡ ಪದ್ಧತಿ ( ಪೂರ್ಣ ಪದ್ಧತಿ/ ಇಡಿ ಪದ್ಧತಿ)**

- ಪಠ್ಯ ಪುಸ್ತಕದಲ್ಲಿರುವ ಉಳಿದ ಎಲ್ಲಾ ಪದ್ಯಗಳು.

**ಪದ್ಯ ರಚನಾ ತತ್ವಗಳು**

- ಅಭಿವ್ಯಕ್ತಿ ತತ್ವ (ಕುವೆಂಪು ರವರ 'ಹಸುರು')
- ರಸ ಗ್ರಹಣ ತತ್ವ (ಲಕ್ಷ್ಮೀಶ ಅವರ 'ವೀರಲವ')
- ಭಾಷಿಕ ತತ್ವ (ಬೇಂದ್ರೆ ಅವರ 'ಹಕ್ಕಿ ಹಾರುತಿದೆ ನೋಡಿದಿರಾ')
- ಲೋಕ ಸಂಹಿತಾ ತತ್ವ (ಬಿ.ಟಿ. ಲಲಿತಾ ನಾಯಕ್ ಅವರ 'ಭರವಸೆ')
- ಸಂವಹನ ತತ್ವ (ಚೆನ್ನವೀರ ಕಣವಿ ಅವರ 'ಗೆಳೆತನ')
- ಸೋಪಜ್ಞತೆಯ ತತ್ವ (ಸು.ರಂ.ಎಕ್ಕುಂಡಿ ಅವರ 'ಪಾರಿವಾಳ')
- ಅವಲೋಕನ ತತ್ವ (ವಿಜಯಶ್ರೀ ಸಬರದ ಅವರ 'ವಸಂತ ಮುಖ ತೋರಲಿಲ್ಲ')
- ಬಹುಮುಖಿ ತತ್ವ ( ಅರವಿಂದ ಮಾಲಗತ್ತಿ ಅವರ 'ಮರಳಿ ಮನೆಗೆ')
- ಬದ್ಧತೆಯ ತತ್ವ ಗೋವಿಂದ ಪೈ ಅವರ 'ಕನ್ನಡಿಗರ ತಾಯಿ')
- ಸಮನ್ವಯತೆಯ ತತ್ವ (ಎಂ. ಗೋಪಾಲ ಕೃಷ್ಣ ಅಡಿಗ ಅವರ 'ಕಟ್ಟುವೆವು ನಾವು')

**ಪದ್ಯ ಪ್ರಕಾರಗಳು**

- ತ್ರಿಪದಿಗಳು
- (ಜನಪದ ತ್ರಿಪದಿಗಳು – ಸರ್ವಜ್ಞನ ತ್ರಿಪದಿಗಳು)
- ಚಂಪೂ
- (ವಿಕ್ರಮಾರ್ಜುನ ವಿಜಯಂ–ಸಾಹಸ ಭೀಮ ವಿಜಯಂ)
- ಕಂದ
- (ಯಶೋಧರ ಚರಿತೆ)
- ರಗಳೆ
- (ನಂಬಿಯಣ್ಣನ ರಗಳೆ)
- ಷಟ್ಪದಿ
- (ಹರಿಶ್ಚಂದ್ರ ಕಾವ್ಯ– ಕರ್ಣಾಟ ಭಾರತ ಕಥಾ ಮಂಜರಿ– ಜೈಮಿನಿ ಭಾರತ)
- ಸಾಂಗತ್ಯ
- (ಭರತೇಶ ವೈಭವ)
- ವಚನ
- (ಶಿವಶರಣರ ವಚನಗಳು)
- ಕೀರ್ತನೆ–ಸುಳಾದಿಗಳು – ಉಗಾಬೋಗಗಳು
- (ಹರಿದಾಸರ ರಚನೆಗಳು)
- ತತ್ವ ಪದಗಳು
- (ತತ್ವಪದಕಾರರ ತತ್ವ ಪದಗಳು)

**ಆಧುನಿಕ ಸಾಹಿತ್ಯ ಪ್ರಕಾರಗಳು**

- ನವೋದಯ/ನವ್ಯ / ಪ್ರಗತಿ ಶೀಲ /ಬಂಡಾಯ / ಸ್ತ್ರೀ ಸಂವೇದನೆ ಇತ್ಯಾದಿ

**ಪದ್ಯವನ್ನು ಅನುಕೂಲಿಸುವ ಮಾರ್ಗೋಪಾಯಗಳು**

- ಪದ್ಯವನ್ನು ಭಾವಪೂರ್ಣವಾಗಿ ವಾಚಿಸುವುದು.
- ಪಠ್ಯದಲ್ಲಿರುವ ಪದ್ಯಗಳನ್ನು ಹೋಲುವಂತಹ ಇತರ ಪದ್ಯಗಳನ್ನು ಪರಿಚಯಿಸುವುದು.
- ಉದಾ : ಹೊಸಹಾಡು – ಸ್ವಾತಂತ್ರದ ಹಣತೆ
- ಪದ್ಯವನ್ನು ಹಲವಾರು ಬಾರಿ ವಾಚಿಸುವುದು.
- ಪದ್ಯ ಮೂಲೆಯನ್ನು ಸೃಜಿಸುವುದು.
- ಕವಿಯ ಪರಿಚಯ ಮಾಡುವುದು.
- ಪದ್ಯವನ್ನು ಕವಿಯ ಆಶಯಕ್ಕೆ ಅನುಗುಣವಾಗಿ, ವಿವರವಾಗಿ ವಿಶ್ಲೇಷಿಸುವುದು.
- ವಿದ್ಯಾರ್ಥಿಗಳು ಸ್ವಂತವಾಗಿ ಕವನ ರಚಿಸುವಂತೆ ಪ್ರೇರೇಪಿಸುವುದು.

**ಪಾರಿಭಾಷಿಕ ಪದಗಳ ಪರಿಚಯ**

- ಪಲ್ಲವಿ – ಅನುಪಲ್ಲವಿ – ಪ್ರಾಸ – ಯತಿ
- ಶಬ್ದಾಲಂಕಾರಗಳು – ಅರ್ಥಾಲಂಕಾರಗಳು
- ಸಂಕೇತ – ಪ್ರತಿಮೆ – ಪ್ರತೀಕಗಳು
- ವಾಚ್ಯಾರ್ಥ – ವ್ಯಂಗ್ಯಾರ್ಥ – ಧ್ವನ್ಯಾರ್ಥಗಳು
- ಕವಿ ಸಮಯಗಳು
- ನವರಸಗಳು
- ಗೇಯತೆ ಮತ್ತು ನಾದಗುಣ

*****

## 6. ಭಾಷಾ ಆಟಗಳು

**ಭಾಷಾ ಆಟಗಳ ಉದೇಶಗಳು :–**

1) ಆಟಗಳು ಮಾನವನ ದೇಹ ಮತ್ತು ಮನಸ್ಸಿಗೆ ಮುದ ನೀಡುತ್ತವೆ.
2) ಬುದ್ದಿಯನ್ನು ಚುರುಕುಗೊಳಿಸಿತ್ತವೆ.
3) ಆಲೋಚನಾ ಶಕ್ತಿಯನ್ನು ವಿಕಾಸಗೊಳಿಸುತ್ತವೆ.
4) ಆಟಗಳು ಮನೋರಂಜನೆಯ ಜೊತೆಗೆ ಕಲಿಕೆಯಲ್ಲಿ ಆಸಕ್ತಿ ಮೂಡಿಸುತ್ತವೆ.
5) ಕ್ರಿಯಾಶೀಲ ಕಲಿಕೆಗೆ ಭಾಷಾ ಆಟಗಳು ಪ್ರೇರಕ.

( ಈ ಕೆಳಗಿನ ಆಟಗಳನ್ನು ತಮ್ಮ ಅನೂಕೂಲಕ್ಕೆ ತಕ್ಕಂತೆ ಬದಲಾಹಿಸಿಕೊಳ್ಳಬಹುದು )

**1. ಪದ ಸಂಪತ್ತು**

| | | |
|---|---|---|
| ತಂ ಬ ಶ ಗ ಮ ರಿ | ಶಬರಿ | ಮತಂಗ |
| ನ ಕೃ ರ್ಜು ಅ ಷ್ಣ | ಕೃಷ್ಣ | ಅರ್ಜುನ |
| ಲಿ ಗ ನು ಶಾ ಹು ಭೋ | ಹುಲಿ | ಶಾನುಭೋಗ |
| ಸ ಮ ವ ರಾ ಲ ಲ್ಯೆ ಕೌ | ರಾಮ, ಲವ | ಕೌಸಲ್ಯೆ |
| ಮ ಡ ಹ ಗ ನು ಜ | ಜಡಗ | ರಾಮ |
| ಮಿ ಮಾ ರ ಸು ಕು ಸ್ವಾ | ಸುಕುಮಾರಸ್ವಾಮಿ | |
| ತಿ ಮ ಷ್ಟ ಬು ಪ್ರೇ ದು ಮ ದ್ದಿ | ದುಷ್ಟಬುದ್ದಿ | ಪ್ರೇಮಮತಿ |
| ಭೋ ಶಾ ರ್ದಿ ಗ ನು ಖ | ಕಿರ್ದಿ | ಶಾನುಭೋಗ |

**2. ಭಾಷೆ/ಪದಗಳ ಪರಿಚಯ**

ಸೂಚನೆ :– ಕವಿ – ಕೃತಿಗಳನ್ನು ಜೋಡಿಸಿ ಬರೆಯಿರಿ

| | | | | |
|---|---|---|---|---|
| ಸಾರಾ ಅಬೂಬಕ್ಕರ್ | ರನ್ನ | ನಾಕುತಂತಿ | ಕುವೆಂಪು | ಕರ್ಣಾಟ ಭಾರತ ಕಥಾ ಮಂಜರಿ |
| ಶ್ರೀರಾಮಾಯಣ ದರ್ಶನಂ | ಸಮುದ್ರದಾಚೆಯಿಂದ | ಜೈಮಿನಿ ಭಾರತ | ಕುಮಾರವ್ಯಾಸ | ದುರ್ಗಸಿಂಹ |
| ಗದಾಯುದ್ದ | ಲಕ್ಷ್ಮೀಶ | ಎದೆ ತುಂಬಿ ಹಾಡಿದೆನು | ಚಪ್ಪಲಿಗಳು | ಶಿವರುದ್ರಪ್ಪ |
| ದ.ರಾ.ಬೇಂದ್ರೆ | ಕುಸುಮಬಾಲೆ | ಪಂಚತಂತ್ರ | ವಿ.ಕೃ.ಗೋಕಾಕ್ | ದೇವನೂರ ಮಹಾದೇವ |

| | | | |
|---|---|---|---|
| 1) | | 6) | |
| 2) | | 7) | |
| 3) | | 8) | |
| 4) | | 9) | |
| 5) | | 10) | |

**ಆಡಬಹುದಾದ ಇತರ ಆಟಗಳು**

ಅ) ಕವಿ – ಸ್ಥಳ / ಕಾಲ / ಕೃತಿಗಳು.

ಆ) ಪಾಠ/ಪದ್ಯ – ಕವಿ.

ಇ) ವ್ಯಾಕರಣಾಂಶಗಳು.

ಈ) ಹೊಸ ಪದಗಳ ಅರ್ಥ. ಇತ್ಯಾದಿ...

**3) ಪದ ಅಂತ್ಯಾಕ್ಷರಿ.**

**ಸೂಚನೆ :–** ಮಕ್ಕಳನ್ನು ನಮಗೆ ಅನುಕೂಲವಾಗುವಂತೆ ಸಾಲಾಗಿ ಕೂರಿಸಿಕೊಳ್ಳುವುದು. ನಾವು ಮೊದಲು ಒಂದು ಆರಂಬಿಕ ಪದವನ್ನು ಹೇಳಿ ಪ್ರಾರಂಬಿಸುವುದು. ಆ ಪದದ ಅಂತ್ಯದಲ್ಲಿರುವ ವ್ಯಂಜನ / ಸ್ವರದಿಂದ ಪ್ರಾರಂಭವಾಗುವ ಮೂರರಿಂದ – 5 ಅಕ್ಷರಗಳು ಇರುವಂತಹ (ನಮ್ಮ ಪಠ್ಯ ಪುಸ್ತಕದಲ್ಲೆ ಇರುವಂತಹ) ಅರ್ಥಗರ್ಭಿತ ಪದಗಳನ್ನು ಕೂಡಲೆ ಹೇಳಿಸುವುದು. ತಡವಾದರೆ ಅಂತಹವರನ್ನು ತಂಡದಿಂದ ಹೊರ ಹಾಕುವುದು. ಕೊನೆಗೆ ವಿಜೇತರನ್ನು ಘೋಷಿಸುವುದು.

**ಉದಾಹರಣೆ :–** ಅಕ್ಷರ – ರಾಮ – ಮನೆ – ನರಸಿಂಹಸ್ವಾಮಿ – ಮಹಾದೇವಾ – ವಾಲ್ಮೀಕಿ – ಕನಕದಾಸ – ಸಾರಾ ಅಬೂಬಕ್ಕರ್ – ರಾಜ – ಜನಕ ಮಹಾರಾಜ – ಜನ್ನ – ನಾರಾಯಣಪ್ಪ

( ಹೀಗೆ ಮುಂದುವರೆಯುತ್ತದೆ )

**4) ಪದ ಸಂಪತ್ತು.**

**ಸೂಚನೆ :–** ಯಾವುದಾದರು ಒಂದು ಅಕ್ಷರವನ್ನು ನೀಡಿ ಆ ಅಕ್ಷರದಿಂದ ಪ್ರಾರಂಭವಾಗುವ / ಅಂತ್ಯವಾಗುವ ಅಕ್ಷರಗಳನ್ನು ಬರೆಯಿಸುವುದು / ಹೇಳಿಸುವುದು.

**ಉದಾಹರಣೆ :–** ಅ / ನ / ಕ / ಸ (ಮುಂತಾದವು) – ಅಕ್ಷರದಿಂದ ಪ್ರಾರಂಭವಾಗುವ ಅಕ್ಷರಗಳನ್ನು ಬರೆಯಿರಿ.

ಹಾಗೆಯೇ ನ / ಕ / ಸ / ಮ / ರ (ಮುಂತಾದವು) – ಅಕ್ಷರದಿಂದ ಪ್ರಾರಂಭವಾಗುವ ಅಕ್ಷರಗಳನ್ನು ಬರೆಯಿರಿ.

**5) ಅಭಿನಯ ದರ್ಶನ.**

**ಸೂಚನೆ :–** ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಕರೆದು ಅವನಿಗೆ 1 ರಿಂದ 8 ರೊಳಗೆ (ಎಷ್ಟು ವಿಷಯಗಳು ಇರುತ್ತಾವೋ ಅಷ್ಟು) ಒಂದು ಸಂಖ್ಯೆಯನ್ನು ಹೇಳಿಸುವುದು. ಆ ಸಂಖ್ಯೆಯ ವಿಷಯಕ್ಕೆ ಸಂಬಂಧಿಸಿದಂತೆ ಅಭಿನಯಿಸಲು ಹೇಳುವುದು. (ಒಬ್ಬರಿಗೆ ಎರಡು ನಿಮಿಷ ಮಾತ್ರ) ಅಭಿನಯಕ್ಕೆ ಯಾವುದೇ ಅನುಕೂಲಕರ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

| ಕ್ರ.ಸಂ | ಅಭಿನಯಿಸಬೇಕಾದ ವಿಷಯ | |
|---|---|---|
| 1 | ಶಬರಿ | ಶಾನುಭೋಗ |
| 2 | ಸೈನಿಕ | ದುಷ್ಟಬುದ್ಧಿ |
| 3 | ಕರ್ಣ | ಧರ್ಮಬುದ್ಧಿ |
| 4 | ಕೃಷ್ಣ | ಶಿಕ್ಷಕ |
| 5 | ದುರ್ಯೋಧನ | ರಾಜಕಾರಣಿ |

**6) ಪದಬಂಧ**

**ಸೂಚನೆ :–** ಪ್ರಸಿದ್ಧ ಕವಿಗಳ ಹೆಸರು, ಕವನ, ಕೃತಿಗಳ ಹೆಸರು, ಜಿಲ್ಲೆ, ತಾಲೂಕುಗಳ ಹೆಸರು, ಮಹಾಕಾವ್ಯಗಳ ಪಾತ್ರಗಳ ಹೆಸರು, ನಾಡು–ನುಡಿ, ಒಂದೇ ಪದದಲ್ಲಿ ಉತ್ತರ ಬರುವಂತಹ ಪ್ರಶ್ನೆಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪದಬಂಧ ರಚಿಸಿ, ಸ್ಪರ್ಧೆ ನಡೆಸುವುದು.

| **ಎಡದಿಂದ ಬಲಕ್ಕೆ :–** | **ಮೇಲಿನಿಂದ ಕೆಳಕ್ಕೆ :–** |
|---|---|
| 1) ಇವರು ರಾಮ – ಲಕ್ಷ್ಮಣರ ತಂದೆ (4)<br>4) 4 ಸಾಲಿನ ಪದ್ಯವನ್ನು ಹೀಗೂ ಕರೆಯುತ್ತಾರೆ. (4)<br>6) ವರ್ಗೀಯ ವ್ಯಂಜನಗಳ 3 ಮತ್ತು 4 ನೇ ಸ್ಥಾನದ ಅಕ್ಷರಗಳನ್ನು ಹೀಗೆ ಕರೆದಾಗ ತಿರುಗಿದೆ. (4)<br>9) ಇದು ಸವರ್ಣ ದೀರ್ಘಸಂದಿಗೆ ಉದಾಹರಣೆಯಾಗಿದೆ. (4)<br>12) ಇಲ್ಲಿ ಬೇಂದ್ರೆಯವರ ಕೃತಿ ತಿರುಗಿದೆ. (2)<br>13) ಪಕ್ಷಿಯನ್ನು ಇದಕ್ಕೂ ಹೋಲಿಸಬಹುದು. (2)<br>16) ತಪಸ್ವಿಯ ತದ್ಭವ ಪದ. (3)<br>18) ಇನತನೂಜನು ಈ ಸಮಾಸಕ್ಕೆ ಸೇರುತ್ತಾನೆ. (4)<br>20) ಶಾನುಭೋಗರ ದುಂಡು–ದುಂಡಾದ ದೇಹವನ್ನು ನೋಡಿ ಖುಷಿ ಪಟ್ಟವರು. (2) | 1) ರಾಮ – ಲಕ್ಷ್ಮಣರಿಗೆ ಮತಂಗಾಶ್ರಕ್ಕೆ ಹೋಗಲು ಸೂಚಿಸಿದವರು. (2)<br>2) ಶರಶಯ್ಯೆಯಲ್ಲಿದ್ದ ಭೀಷ್ಮರ ಆಶೀರ್ವಾದ ಪಡೆಯಲು ದುರ್ಯೋಧನನು ಇಲ್ಲಿಗೆ ಬಂದನು. (4)<br>5) ಪ್ರತಿಹಾರಿ ಪದದ ತದ್ಭವ ಪದ ಇದಾಗಿದೆ. (4)<br>7) ಎದೆಗೆ ಬಿದ್ದ ಅಕ್ಷರ ಗದ್ಯದ ಲೇಖಕರು ಇವರು. (4)<br>11) ಲವನು ಇದನ್ನು ಕಟ್ಟಿ ಹಾಕಿದನು. (3)<br>14) ಇವಳು ರಗಳೆಯ 1 ಪ್ರಕಾರವು ಹೌದು. (3)<br>16) ಕಳುವ್ಯಾರೆ ಇದರ ಗ್ರಾಂಥಿಕ ರೂಪ. (6)<br>17) ಈ ಮಾತನ್ನು ನುಡಿಯದ ಬೇಹಾರಿಯೆ ಇಲ್ಲ. (2)<br>18) ಕಾಡು ಮೇಡುಗಳು ಏನಾಗಿವೆ. (3) |

| | | | | | | | | | | | |
|---|---|---|---|---|---|---|---|---|---|---|---|
| ದ | ಶ | ರ | ಥ | | | | | ಕಂ | ದ | ಪ | ದ್ಯ |
| ನು | | ಣ | ಪ್ರಾ | ಹಾ | ಮ | | | | | ಡಿ | |
| | | ರಂ | | | ಹಾ | | | | | ಯ | |
| | | ಗ | | | ದೇ | ವಾ | ಲ | ಯ | | ರಿ | ಗ |
| | | | | | ವ | | | ಜ್ಞಾ | | | |
| ಕಾ | ಲ | | | | | | | ಶ್ವ | | ಕ | |
| | ಲಿ | | | | | | | | | ಳು | |
| | ತ | ವ | ಸಿ | | | ಬ | ಹು | ವ್ರೀ | ಹಿ | | |
| | | | ಹು | ಲಿ | | ರ | | | | ಸಿ | |
| | | | | | | ಡು | | | | ದ್ದಾ | |
| | | | | | | | | | | ರೆ | |

**7) ಪದಗಳ ಸಂಗ್ರಹ ಆಟ**

*ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ಆಟ.

*ಪ್ರತಿ ದಿನ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂದಿಸಿದ ಪದಗಳನ್ನು ಸಂಗ್ರಹಿಸಿಕೊಂಡು ಬರೆದುಕೊಂಡು, ಅವನ್ನೆ ಓದಿಕೊಂಡು ಬರಲು ಹೇಳುವುದು.

*ಉದಾ :– 2 ಅಕ್ಷರದ , 3 ಅಕ್ಷರದ, 4 ಅಕ್ಷರದ ಸರಳ ಪದಗಳು.

*ಒತ್ತಕ್ಷರಗಳಿಂದ ಕೂಡಿದ ಪದಗಳು, ಅನುಸ್ವರ, ವಿಸರ್ಗಗಳಿಂದ ಕೂಡಿದ ಪದಗಳು, ನಾಮಪದಗಳು, ಕ್ರಿಯಾ ಪದಗಳು, ಸಂಧಿಗಳು, ಸಮಾಸಗಳು ಹೀಗೆ ಇತ್ಯಾದಿ.

*ಅತಿ ಹೆಚ್ಚು ಪದಗಳನ್ನು ಸಂಗ್ರಹಿಸಿದವರಿಗೆ ವಿಜೇತರೆಂದು ಘೋಷಿಸುವುದು.

**8) ವಾಕ್ಯ ರಚನೆ.**

**ಸೂಚನೆ :** ಈ ಅಂಕಣದಲ್ಲಿರುವ ಪದಗಳನ್ನು ಬಳಸಿ, ಅರ್ಥಪೂರ್ಣ ವಾಕ್ಯ ರಚಿಸಿ, ಖಾಲಿ ಅಂಕಣದಲ್ಲಿ ಬರೆಯಿರಿ.

- ಪಾಠಗಳಿಗೆ ಸಂಬಂದಿಸಿದ ವಾಕ್ಯಗಳನ್ನೆ ನೀಡಬಹುದು.

| | | | |
|---|---|---|---|
| **ಮಹಾರಾಯ** | **ತಳೆದರು** | **ತೀರದು** | **ಕೆಡಿಸಿತು** |
| **ಸಾವಿರ** | **ತಾಯಿಗೆ** | **ಮಾಡಿದ್ದುಣ್ಣೋ** | **ತಾಯಿಯ** |
| **ಅರಸನಾರೂ** | **ಋಣ** | **ಮಲಗಿ** | **ಕಾಯಕವೇ** |
| **ಮಗ** | **ಕೈಲಾಸ** | **ಮನೆ** | **ಮಾತು** |
| **ಸಂಗ** | **ಊರಿಗೆ** | **ಹೆಜ್ಜೇನು** | **ಸಜ್ಜನರ** |
| **ಏಳು** | **ಸವಿದಂತೆ** | **ಬೇಗ** | **ಬೇಗ** |

| |
|---|
| ಮಾಡಿದ್ದುಣ್ಣೋ ಮಹಾರಾಯ |
| ಊರಿಗೆ ಅರಸನಾದರೂ ತಾಯಿಗೆ ಮಗ |
| ಕಾಯಕವೇ ಕೈಲಾಸ |
| ಸಾವಿರ ಜನ್ಮ ತಳೆದರೂ ತಾಯಿಯ ಋಣ ತೀರದು. |
| ಮಾತು ಮನೆ ಕೆಡಿಸಿತು. |
| ಬೇಗ ಮಲಗಿ ಬೇಗ ಏಳು. |

**9) ಅರ್ಥ ವ್ಯತ್ಯಾಸದ ಅರಿವು.**

**ಸೂಚನೆ :** ಈ ಅಂಕಣದಲ್ಲಿರುವ ಪದಗಳ ಸಹಾಯದಿಂದ ಸಮಾನಾರ್ಥಕ ಮತ್ತು ಭಿನ್ನಾರ್ಥಕ ಪದಗಳನ್ನು ಗುರುತಿಸಿ, ಮುಂದಿನ ಖಾಲಿ ಅಂಕಣದಲ್ಲಿ ಬರೆಯಿರಿ.

| ಪದಗಳು | ಸಮನಾರ್ಥಕ | ಭಿನ್ನಾರ್ಥಕ |
|---|---|---|
| **ಕಾಡು** | | |
| **ಕರ** | | |
| **ಕೆರೆ** | | |
| **ವಚನ** | | |
| **ಗಾಳಿ** | | |

**10) ಪರಂಪರೆಯ ಅರಿವು**

**ಸೂಚನೆಗಳು :-** ಈ ಅಂಕಣದಲ್ಲಿ ರಾಮಾಯಣ ಮತ್ತು ಮಹಾಭಾರತದ ಪಾತ್ರಗಳ ಹೆಸರುಗಳನ್ನು ನೀಡಲಾಗಿದೆ. ಇದರ ಸಹಾಯದಿಂದ ಮುಂದಿನ ಕೋಷ್ಟಕವನ್ನು ಪೂರ್ಣಗೊಳಿಸಿ.

ಈಗ ಪಾಠ / ಪದ್ಯ / ಪಠ್ಯ ಪೋ.ಅ ದಲ್ಲಿ ಪಾತ್ರಗಳನ್ನು ಬರೆದು ವಿಭಾಗಿಸುವಂತೆ, ಹಾಗೆಯೆ ಆ ಪಾತ್ರದ ಸಂಕ್ಷಿಪ್ತ ಪರಿಚಯ ತಿಳಿಸುವಂತೆ ಹೇಳಬಹುದು.

ವಾಲ್ಮೀಕಿ, ದ್ರೋಣಚಾರ್ಯ, ಕರ್ಣ, ಕೈಕೇಯಿ, ರಾಮ,ಲಕ್ಷ್ಮಣ,ರಾವಣ , ಶಕುನಿ, ಸುಯೋದನ, ಇಂದ್ರಜಿತ್, ಶೂರ್ಪನಕಿ, ಕುಂತಿ, ದಶರಥ, ಕೃಷ್ಣ, ದೃಪದ, ಲವ, ಬಲರಾಮ, ಭೀಷ್ಮ, ಸೀತೆ, ಮಾತಂಗ ಋಷಿ, ದ್ರೌಪದಿ, ಅಭಿಮನ್ಯು , ಧರ್ಮರಾಯ. ನಕುಲ,ಸಹದೇವ ,ಅರ್ಜುನ, ಶಬರಿ

| ರಾಮಾಯಣ | ಮಹಾಭಾರತ |
|---|---|
| **ವಾಲ್ಮೀಕಿ, ಕೈಕೇಯಿ, ಇಂದ್ರಜಿತ್, ಶೂರ್ಪನಕಿ, ದಶರಥ, ಲವ, ಸೀತೆ, ಮಾತಂಗ ಮುನಿ, ರಾಮ, ಲಕ್ಷ್ಮಣ, ರಾವಣ,ಶಬರಿ** | **ಧರ್ಮರಾಯ, ಕರ್ಣ, ದ್ರೋಣಚಾರ್ಯ, ಶಕುನಿ, ಸುಯೋದನ, ಕುಂತಿ, ಕೃಷ್ಣ, ದೃಪದ, ಬಲರಾಮ, ಭೀಷ್ಮ, ದ್ರೌಪದಿ, ಅಭಿಮನ್ಯು . ನಕುಲ, ಸಹದೇವ , ಅರ್ಜುನ** |

**11) ರಸಪ್ರಶ್ನೆ ಸ್ಪರ್ಧೆ**

ಅ) ಲಿಖಿತ ಸ್ಪರ್ಧೆ :-

- ವೈಯಕ್ತಿಕವಾಗಿ ನಡೆಸುವುದು ಹೆಚ್ಚು ಸೂಕ್ತ.
- ಬಹು ಆಯ್ಕೆ / ಒಂದು ಪದದಲ್ಲಿ ಉತ್ತರಿಸುವಂತೆ ಪ್ರಶ್ನೆಗಳಿರಬೇಕು.
- ವಿಜೇತರ ಪಟ್ಟಿ ಪ್ರಕಟಿಸಬೇಕು.

ಆ) ಮೌಖಿಕ ಸ್ಪರ್ಧೆ :–

- ಗುಂಪುಗಳನ್ನು ರಚಿಸಬೇಕು.
- ಪ್ರತಿ ಗುಂಪಿನಲ್ಲೂ ಉತ್ತಮ ಕಲಿಕೆಯ ಮಕ್ಕಳು ಮತ್ತು ಸಾಧಾರಣ ಕಲಿಕೆಯ ಮಕ್ಕಳು ಇರಲಿ.
- ಪ್ರತಿಯೊಂದು ವಿದ್ಯಾರ್ಥಿಯು ಉತ್ತರ ಹೇಳಲು ತೊಡಗುವಂತೆ ನೋಡಿಕೊಳ್ಳಿ.

ಇ) ತಂತ್ರಜ್ಞಾನಧಾರಿತ ಸ್ಪರ್ಧೆ :–

- ಎಲ್ಲಾ ಮಕ್ಕಳಿಗೂ ಅನ್ವಯಿಸುವುದು ಕಷ್ಟ.
- ಮೊದಲೇ ಮೊಬೈಲ್ ನಲ್ಲಿ ಸಿದ್ಧತೆ ಮಾಡಿಕೊಂಡಿರಬೇಕು.
- ಮೊಬೈಲ್ / ಲ್ಯಾಪ್ ಟಾಪ್ ಕಡ್ಡಾಯವಾಗಿ ಬೇಕು.

**12) ಆಂಗಿಕಾಭಿನಯ ಸ್ಪರ್ಧೆ**

**ಸೂಚನೆಗಳು :–** 1 ಚೀಟಿಯನ್ನು ತೆಗೆದುಕೊಂಡು ಚೀಟಿಯಲ್ಲಿ ಬರೆದಿರುವ ಹೆಸರುಗಳನ್ನು ಬಾಯಿಯಿಂದ ಹೇಳದೆ ತಮ್ಮ ಆಂಗಿಕಾಭಿನಯದ ಮೂಲಕ ಅಭಿನಯಿಸಿ ತಮ್ಮ ತಂಡದ ಅಭ್ಯರ್ಥಿ/ಗಳು ಆ ಹೆಸರು ಹೇಳುವಂತೆ ಮಾಡಬೇಕು, ನಂತರ ಅಲ್ಲಿ ಬಂದಿರುವ ವಿಷಯದ ಬಗ್ಗೆ ವಿವರಣೆ ನೀಡಬೇಕು.

- 5 + 5 ಒಟ್ಟು 10 ಅಂಕಗಳು.

ಸಿದ್ಧತೆ :–

- ಚೀಟಿಗಳಲ್ಲಿ ಹೆಸರುಗಳನ್ನು ಬರೆದಿಟ್ಟುಕೊಳ್ಳಬೇಕು.
- ಹೆಸರುಗಳು ನಮ್ಮ ಅಧ್ಯಾಯಲ್ಲಿನವುಗಳೇ ಆಗಿರಲಿ.
  ಉದಾ :– ಪಾಠ, ಪದ್ಯ, ಕವಿಗಳ, ಕೃತಿಗಳ, ಪಾತ್ರಗಳ ಹೆಸರುಗಳು.

**13) ಆಶುಭಾಷಣ ಸ್ಪರ್ಧೆ**.

ಸೂಚನೆ :–

- 1 ಚೀಟಿಯನ್ನು ತೆಗೆದುಕೊಂಡು ಚೀಟಿಯಲ್ಲಿ ಬರೆದಿರುವ ವಿಷಯ / ಹೆಸರುಗಳ ಬಗ್ಗೆ 2 ನಿಮಿಷ ಮಾತನಾಡಬೇಕು.

ಸಿದ್ಧತೆ :–

- ಚೀಟಿಗಳಲ್ಲಿ ವಿಷಯ/ಹೆಸರುಗಳನ್ನು ಬರೆದಿಟ್ಟುಕೊಳ್ಳಬೇಕು.
- ವಿಷಯ ಹೆಸರುಗಳು ನಮ್ಮ ಅಧ್ಯಾಯಲ್ಲಿನವುಗಳೇ ಆಗಿರಲಿ.
  ಉದಾ :– ಯುದ್ಧದ ಅವಶ್ಯಕತೆ, ಕಾಲವೆಂಬ ಹಕ್ಕಿ, ಮನೆ ಮಂಚಮ್ಮ, ಪಾಠ, ಪದ್ಯ, ಕವಿಗಳ, ಕೃತಿಗಳ, ಪಾತ್ರಗಳ ಹೆಸರುಗಳು.

*****

## 7. ಕನ್ನಡ ಸಾಹಿತ್ಯದ ಸಾಹಿತಿಗಳ ಸ್ವಾರಸ್ಯ(ಔಚಿತ್ಯ)ಗಳು

ಅಪಾರವಾದ ಕಾವ್ಯ ಜಗತ್ತಿನಲ್ಲಿ ಕವಿಯೇ ಸೃಷ್ಟಿಕರ್ತ. ಎಲ್ಲಾ ಮನುಷ್ಯರೂ ಕವಿಗಳಾಗಿರುವುದಿಲ್ಲ ಆದರೆ ಕವಿ ಮನಸ್ಸು ಇರುತ್ತದೆ. ಕವಿ ಅಚೇತನವಾದ ವಸ್ತುಗಳನ್ನು ಸಚೇತನ ಮಾಡುತ್ತಾನೆ. ಒಂದನ್ನು ಇನ್ನೊಂದಾಗಿ ಪರಿವರ್ತಿಸುವ ನಿತ್ಯ ಸ್ವಾತಂತ್ರ್ಯ ಕವಿ ಪ್ರತಿಭೆಗೆ ಉಂಟು. ಅವನ ಪ್ರತಿಭೆಯನ್ನು ಎಲ್ಲರೂ ಮೆಚ್ಚುತ್ತಾರೆ, ಆರಾಧಿಸುತ್ತಾರೆ, ಅನುಸರಿಸುತ್ತಾರೆ. ಕೆಲವನ್ನು ಪ್ರಶ್ನಿಸುತ್ತಾರೆ. ಕವಿಗಳೇನು ಸ್ವರ್ಗದಿಂದ ಉದುರುವುದಿಲ್ಲ ಆದರೆ ಎಲ್ಲಾ ಮನುಷ್ಯರಲ್ಲಿಲ್ಲದ ವಿಶೇಷವಾದ ಒಂದು ಶಕ್ತಿ, ಪ್ರತಿಭೆ ಅವರಲ್ಲಿ ಇರುತ್ತದೆ. ವಿಶ್ವದ ವಸ್ತು ವಿಷಯಗಳೆಲ್ಲಾ ವಿಶೇಷವಾಗಿ ಕಾಣುತ್ತವೆ. ಅಪೂರ್ವವಾದ ದರ್ಶನವನ್ನು ನಮಗೆ ನೀಡುತ್ತಾನೆ. ಸಾಮಾನ್ಯ ಅಂಶಗಳು ಹೊಸ ಹೊಸದಾಗಿ ಕಾಣಿಸುತ್ತವೆ. ಇದು ಎಲ್ಲರೂ ಒಪ್ಪಿಕೊಳ್ಳಬೇಕಾದ ಸತ್ಯ.

ಅಂಥ ಕವಿಗಳ ವೈಯಕ್ತಿಕ ಬದುಕು ನಾವಂದುಕೊಂಡಂತೆ ಸುಖದ ಸುಪ್ಪತ್ತಿಗೆಯಲ್ಲಿ ತೇಲುತ್ತಿರುವುದಿಲ್ಲ. ಬಹಳಷ್ಟು ಕವಿಗಳು ಸರಸ್ವತಿ ಪುತ್ರರೇ ಹೊರತು ಲಕ್ಷ್ಮೀ ಪುತ್ರರಾಗಿರುವುದಿಲ್ಲ. ಕಡು ಬಡತನದಲ್ಲಿ ಮುಳುಗಿ

ಸತ್ತವರಿದ್ದಾರೆ. ತೇಲಿ ಒದ್ದಾಡಿದವರು ಇದ್ದಾರೆ. ಈಜಿ ದಡ ಸೇರಿದವರಿದ್ದಾರೆ. ಅವರೆಲ್ಲಾ ಬೆಂಕಿಯಲ್ಲಿ ಅರಳಿದ ಹೂಗಳು, ಕೆಲವರು ಬೆಂಕಿಯಲ್ಲಿ ಬೆಂದ ಹೂಗಳು.

ನಮ್ಮ ಹಿಂದಿನ ಕವಿಗಳು, ಕಲಿಗಳು, ರಸಿಕರೂ, ಮಂತ್ರಿಗಳು ಆಗಿದ್ದರು. ರಾಜಾಶ್ರಯದಲ್ಲಿ ಸುಖವಾಗಿ ಬಾಳಿ ಬದುಕಿದವರು ಆದರೆ ಈಗೀನ ಕವಿಗಳು ಕವಿಗಳೇ ಹೊರತು ಇನ್ನೇನಾದರೂ ಆದರೆ ತುಂಬಾ ಕ್ಲೇಷಕ್ಕೊಳಗಾಗಬೇಕಾಗುತ್ತದೆ. ನಮ್ಮ ಇಂದಿನ ಕವಿಗಳ ಬದುಕಿನಲ್ಲಿ ನಡೆದ ತಿರುವು ಕೊಟ್ಟ ಕೆಲವು ಸ್ವಾರಸ್ಯಕರ ಘಟನೆಗಳ ಕಿರುಪರಿಚಯ ಮಾಡಿಕೊಡುವುದು ಈ ಅಧ್ಯಾಯದ ಉದ್ದೇಶ.

**1. ಸಾರಾ ಅಬೂಬಕ್ಕರ್:**



- ಕಾಲ:ಕ್ರಿ.ಶ. 1936. ಜೂ.30.*ಸ್ಥಳ:ಕಾಸರಗೂಡು.* ವಿದ್ಯಾಭ್ಯಾಸ: 11ನೇ ತರಗತಿ ವರೆಗೆ
- ಮನೆಯ ಪರಿಸರ: ತಂದೆಯವರು ವಕೀಲರಾಗಿದ್ದು, ಅಬೂಬಕ್ಕರ್ ಅವರ ವಿದ್ಯಾಭ್ಯಾಸಕ್ಕೆ ಒಳ್ಳೆಯ ಬೆಂಬಲವನ್ನು ನಿಡುತ್ತಿದ್ದರು. ಅಂದಿನ ದಿನಗಳಲ್ಲಿ ಹೆಣ್ಣು ಮಕ್ಕಳು ಶಾಲೆ ಕಲಿವುದೆಂದರೆ ಸಮಾಜ ಮೂಗು ಮುರಿಯುತ್ತಿತು. ಆದರೂ ತಂದೆಯವರು ಹೆಚ್ಚು ಓದಲಿ ಎಂದು ಆಶಿಸಿದ್ದರೂ ಎಂಜಿನಿಯರ್ ಜೊತೆ ವಿವಾಹ ಮಾಡಲಾಯಿತು. ಅಜ್ಜಿ ಅರಬಿಕ್ ಕಲಿತಿದ್ದು, ಹೇಳುತ್ತಿದ್ದ ಕತೆಗಳು ಇವರಿಗೆ ಕಥೆ ಬರೆಯಲು ಪ್ರೇರಣೆಯಾಯಿತು.
- ಸಾಹಿತಿಗಳ ಪ್ರಭಾವ: ಶಿವರಾಮ ಕಾರಂತ, ಯು.ಆರ್. ಅನಂತ ಮೂರ್ತಿ, ಇನಾಂದರ್ .


ಸ್ತ್ರೀ ಶಿಕ್ಷಣದ ಬಗ್ಗೆ : ಹೆಣ್ಣು ಮಕ್ಕಳು ಶಿಕ್ಷಣ ವನ್ನು ಕಲಿಯಬೇಕು . 'ವಹಾದಿಸಂ' ಎಂಬ ಅಂದ ಕಾನೂನಿಂದ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಅದು ಆಗಬಾರದು ಎಂದು ಅಬೂಬಕ್ಕರ್ ರವರು ಅಭಿಪ್ರಾಯಪಡುತ್ತಾರೆ. ಅಣ್ಣ ತಂದುಕೊಡುತ್ತಿದ್ದ ವೈಕಂ ಮಹಮದ್ ಬಷೀರ್ ಅವರ ಕಾದಂಬರಿಗಳ ಓದಿನ ಪ್ರಭಾವದಿಂದ ಅವರಲ್ಲಿ ಬರೆಯಬೇಕೆಂಬ ಅಂತರಾಳದ ಒತ್ತಡ ನಿರಂತರವಾಗಿ ಹೊರಹೊಮ್ಮುತ್ತಿತ್ತು. ಹಲವಾರು ವರ್ಷ ಸಾಮಾಜಿಕ ಸಮಸ್ಯೆಗಳ ಮಥನದಿಂದಾಗಿ ಎಂ.ಕೆ.ಇಂದಿರಾ ಅವರಂತೆ ನಲವತ್ತು ದಾಟಿದ ನಂತರ ಸಾರಾ ಅಬೂಬಕ್ಕರ್ ಬರೆಯಲು ಪ್ರಾರಂಭಿಸಿದರು. ಚಪ್ಪಲಿಗಳು ಕಥಾ ಸಂಕಲನದಲ್ಲಿ ಪ್ರತಿಯೊಂದು ಕಥೆಯೂ ಕೂಡ ಮಹಿಳಾ ಸಂವೇದನೆಗಳು, ಮತೀಯ ಸಾಮರಸ್ಯ. ಜಾತಿ ಬೇದ ಮುಂತಾದ ಸಮಾಜದಲ್ಲಿರುವ ಮೌಢ್ಯತೆಯನ್ನು ಹೋಗಲಾಡಿಸುವಂತಹ ಆಶಯವನ್ನಿಟ್ಟುಕೊಂಡು ಬರೆದಿರುತ್ತಾರೆ.

**2. ಪು.ತಿ.ನ.:**



- ಕಾಲ: ಕ್ರಿ.ಶ. 1905,ಮಾ.17.*ಸ್ಥಳ: ಮಂಡ್ಯ ಜಿಲ್ಲೆಯ ಮೇಲುಕೋಟೆ.
- ಮನೆ ಭಾಷೆ: ತಮಿಳು*ಪಾಂಡಿತ್ಯ: ಕನ್ನಡ, ಇಂಗ್ಲೀಷ್......
- ಸೇವೆ: ಬೆಂಗಳೂರಿನ ಸೈನಿಕ ಇಲಾಖೆಯಲ್ಲಿ ಸೇವೆ ಪ್ರಾರಂಭ. ನಂತರ ಅರೆಕಾಲಿಕ ಸೇವೆ. ನಿರುದ್ಯೋಗ. ಮೈ.ವಿ.ವಿ.ಯಿಂದ "ಕನ್ನಡ – ಇಂಗ್ಲೀಷ್ ನಿಂಘಂಟು" ರಚನೆಗೆ ಆಹ್ವಾನ. ಹಗಲು ರಾತ್ರಿ ಶ್ರಮದಿಂದ ದುಡಿದು ಸಾಹಿತ್ಯ ಲೋಕಕ್ಕೆ ಬೆಳಕಾಗಿ ತಾವು ಕುರುಡರಾದರು.
- ಬಡತನ: ದೊಡ್ಡ ಕುಟುಂಬದ ನಿರ್ವಹಣೆ, 6 ಜನ ಹೆಣ್ಣು ಮಕ್ಕಳು. ವೇಶ ಭೂಷಣ: ಕಟ್ಟಾ ಸಂಪ್ರದಾಯ ಸ್ಥಂಪ್ರಾಯಸ್ಥನಂತೆಯೇ ಆದರೆ ಮೌಢ್ಯತೆಗೆ ಕಟ್ಟು ಬಿದ್ದವರಲ್ಲ. ಪ್ರಗತಿಪರ ಚಿಂತನೆ ಇತ್ತು. ಊಟ ಉಪಚಾರ ಸರ್ವರಿಂದಲು ಸ್ವೀಕಾರಿಸುತ್ತಿದ್ದರು.
- ಸ್ಮಾರಕ: ಅವರ ಆಸೆಯಂತೆ 1996 ರಲ್ಲಿ ವೀರಪ್ಪ ಮೌಲ್ವಿ ಅವರು ಮುಖ್ಯ ಮಂತ್ರಿ ಆಗಿದ್ದಾಗ ಸರ್ಕಾರ ಅವರ ಮನೆಯನ್ನು ಸ್ಮಾರಕವಾಗಿ ಮಾಡಿತು. 1998 ರಲ್ಲಿ ಅವರು ನಿಧನರಾದರು.
- ಪ್ರಕೃತಿ ಮತ್ತು ಪ್ರಕೃತಿಯಲ್ಲಿ ದೈವತ್ವದ ಹುಡುಕಾಟ ಅವರ ಕಾವ್ಯದ ಮೂಲಭೂತ ಅಂಶವಾಗಿದೆ. ಪು.ತಿ.ನ. ಅವರ ಬಾಲ್ಯ ಅರಳಿದ್ದು ತಂದೆಯ ಊರಾದ ಮೇಲುಕೋಟೆ ಹಾಗೂ ತಾಯಿಯ ಊರಾದ ಗೊರೂರು ನಡುವೆ. ಮುಂದೆ ವಯಸ್ಕರಾದಾಗ ಹೆಂಡತಿಯ ಊರಾದ ಹೆಮ್ಮಿಗೆ, ಓದಿನ ಊರಾದ ಮೈಸೂರು, ವೃತ್ತಿನಗರವಾದ ಬೆಂಗಳೂರು, ಮಲ್ಲೇಶ್ವರಗಳ ನಡುವೆ ಅವರ ಮನಸ್ಸು ಸುಳಿದಾಡಿದೆ.

**3. ದೇವನೂರು ಮಹಾದೇವ:**



- ಕಾಲ: 1948.
- ಸ್ಥಳ: ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರು.
- ತಾಯಿ:ನಂಜಮ್ಮ, ತಂದೆ: ಸಿ.ನಂಜಯ್ಯ (ಪೋಲಿಸ್ ಪೇದೆ), ಪತ್ನಿ: ಕೆ.ಸುಮಿತ್ರ ಬಾಯಿ.
- ಸೇವೆ: ಭಾರತೀಯ ಭಾಷಾ ಸಂಸ್ಥೆ (ಮೈಸೂರು) ಯಲ್ಲಿ ಉಪನ್ಯಾಸಕರು. ರಾಜಿನಾಮೆ ಸಲ್ಲಿಸಿ ಕೃಷಿಯಲ್ಲಿ ಆಸಕ್ತಿ ಮೂಡಿಸಿಕೊಂಡು ಪ್ರಸ್ಥುತ ವ್ಯವಸಾಯದಲ್ಲಿ ತೊಡಗಿದ್ದಾರೆ.
- ಪ್ರಗತಿಪರ ಚಿಂತನೆ, ನೇರ, ದಿಟ್ಟ ನಿರ್ಧಾರ, ಸರಳ ಜೀವನ, ಉದಾತ್ತ ಚಿಂತನೆ.

ನಿರಾಕರಿಸಿದ ಹಿರಿಮೆಗಳು: 1.ಫೋರ್ಡ್ ಫೌಂಡೇಶನ್ – ಸಂಶೋಧನ ವೇತನ. 2. ಮೈ.ಮು.ವಿ.ವಿ.– ಗೌರವ ಡಾಕ್ಟರೇಟ್. 3. ಅ.ಭಾ.ಕ.ಸಾ.ಸ.(ಹಾಸನ) ಅಧ್ಯಕ್ಷ ಸ್ಥಾನ. 4.ಕೇಂದ್ರ ಸಾಹಿತ್ಯ ಅಕಾಡೆಮಿ– ಫೆಲೊಷಿಪ್.

ದೇವನೂರು ಮಹಾದೇವ ಇವರು ಕನ್ನಡದ ಪ್ರಖ್ಯಾತ ಸಾಹಿತಿಗಳಲ್ಲಿ ಒಬ್ಬರು. ಹೊಸಗನ್ನಡದ ಇಲ್ಲಿಯವರೆಗಿನ ಸಣ್ಣ ಕತೆಗಳ ಚರಿತ್ರೆಯನ್ನು (1) ಮಾಸ್ತಿ ಯುಗ (2) ಲಂಕೇಶ ಯುಗ ಹಾಗು (3)ದೇವನೂರು ಯುಗ ಎಂದು ವಿಂಗಡಿಸಬಹುದು. ಈವರೆಗಿನ ಇವರ ಸಾಹಿತ್ಯ ಕಡಿಮೆ ಇದ್ದರೂ ದೇವನೂರರು ಕಥಾಸಾಹಿತ್ಯದಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ.

**4. ಎ.ಎನ್.ಮೂರ್ತಿರಾವ್ :**



- ಕಾಲ: 1900 ಜೂ.16,–2005 ಆ.24.
- ಸ್ಥಳ: ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು.
- ವೃತ್ತಿ: ಪ್ರೌಢ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭ
- ಪಾಡಿತ್ಯ: ಕನ್ನಡ, ಇಂಗ್ಲೀಷ್, ಫ್ರೆಂಚ್....
- ರಾಧಾಕೃಷ್ಣನ್ ರ ವಿದ್ಯಾರ್ಥಿಯಾಗಿ ತತ್ವಶಾಸ್ತ್ರದಲ್ಲಿ ಪರಿಣತಿಯನ್ನು ಪಡೆದರು.
- ದೇವರು: ಈ ಕೃತಿಯಲ್ಲಿ ತಮ್ಮ ವಯಸ್ಸಿನ 90 ರ ದಶಕದ ನಂತರ ದೇವರ ಅಸ್ತಿತ್ವದ ನಿರಾಕರಣೆ.
- ಕವಿ ಪದ್ಯದ ಉಲೇಖ:

  "ಎಲೆಬೆಕ್ಕೆ ರೂಪಿನಿಂದಲೇ
  ಹುಲಿಯ ಜಾತಿಗೆ ಸೇರಿದೆನೆಂದು ಗರ್ವಿಸಬೇಡ
  ಬಲುಮೆಯು ನಿನ್ನೊಳಿಗುದೇಂ ?
  ಇಲಿಗಳ ಹಿಡಿವುದರೊಳಾಯ್ತು ನಿನ್ನಯ ಶೌರ್ಯಂ."
  –ಜಯರಾಯಚಾರ್ಯ.

ಲಲಿತ ಪ್ರಬಂಧದ ಲಕ್ಷಣಗಳ– ಲಲಿತ ಪ್ರಬಂಧಗಳ ಲಕ್ಷಣಗಳನ್ನು ವಿವರಿಸುವುದು ಕಷ್ಟ. ಅದಕ್ಕಾಗಿ ಇಲ್ಲಿ ಲಲಿತ ಪ್ರಬಂಧಗಳ ಬಗೆಗೆ ವಿಮರ್ಶಕರ ಅಬಿಪ್ರಾಯ ಮತ್ತು ತೀರ್ಪುಗಾರರ ಟಿಪ್ಪಣಿಗಳನ್ನು ಕೊಟ್ಟಿದೆ ಅದರಿಂದ ಲಲಿತಪ್ರಬಂಧದ ಲಕ್ಷಣಗಳನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು. (ಪ್ರಜಾವಾಣಿ ಸ್ಪರ್ಧೆಯ ತೀರ್ಪುಗಾರರ ಹೇಳಿಕೆ)

ಲಲಿತ ಪ್ರಬಂಧ ಉಳಿದ ಪ್ರಕಾರಗಳಿಗಿಂತ ಭಿನ್ನವಾಗುವುದು ಭಾಷೆ, ಭಾವಗಳ ಲಾಲಿತ್ಯದಿಂದಾಗಿಯೇ. ಅದು ಹಗುರ ನಿರೂಪಣೆಯಿಂದ ಹರಟೆಯಾಗಿ ಬಿಡುವ, ಅಥವಾ ಸಂಕೀರ್ಣತೆಯಿಂದ ವೈಚಾರಿಕ ಪ್ರಬಂಧವಾಗುವ ಅಪಾಯದಿಂದ ಪಾರಾಗಬೇಕು. ಈಚಿನ ಎರಡು ಮೂರು ದಶಕಗಳಲ್ಲಿ ಕಾವ್ಯ, ಕಥೆ, ಕಾದಂಬರಿ ಪ್ರಕಾರಗಳಲ್ಲಿ ಆದ ಬದಲಾವಣೆಗಳು ಲಲಿತ ಪ್ರಬಂಧ ಪ್ರಕಾರದಲ್ಲಿಯೂ ಆಗಿವೆ. ಕಥಾ ಪ್ರಬಂಧ, ಭಾವ ಪ್ರಬಂಧ, ಭಾವಗೀತಾತ್ಮಕ ಪ್ರಬಂಧ ಮುಂತಾಗಿ ಗುರುತಿಸಬಹುದಾದ ಪ್ರಬಂಧಗಳು ಕನ್ನಡದಲ್ಲಿ ಬಂದಿವೆ.

**5. ದ.ರಾ.ಬೇಂದ್ರೆ:**




- ಕಾಲ: ಕ್ರಿ.ಶ.1896.
- ಸ್ಥಳ: ಧಾರವಾಡ. –'ಶಬ್ದಗಾರುಡಿಗ'
- ಶತಮಾನದ ಕವನ:(2019,ಜುಲೈ) 'ಮೂಡಲ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ದು'........
- ಶಾಲೆಗಿಂತ ಪ್ರಕೃತಿ ಮಡಿಲೇ ಹೆಚ್ಚು ಇಷ್ಟ.
- ಸಾವಿನ ನೋವು: ಸಾವಿನ ಕಹಿಯನ್ನು ಹೆಚ್ಚು ಅನುಭವಿಸಿದವರು.
- ನಿರುದ್ಯೋಗ: ಅರೆಕಾಲಿಕ ಉದ್ಯೋಗದಿಂದ ಹೆಚ್ಚು ಬಡತನವನ್ನು ಅನುಭವಿಸಿದವರು. ಬೆಂದು ಬೇಂದ್ರೆ ಆದವರು.
- ಸೇರೆವಾಸ: ಸ್ವಾತಂತ್ರ ಚಳುವಳಿಯ ಸಂದರ್ಭದಲ್ಲಿ, (1932) 'ನರಬಲಿ' ಕವನ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿ 9 ತಿಂಗಳು ಬೆಳಗಾವಿಯ ಹಿಂಡಲಗ ಜೈಲು ವಾಸ ಅನುಭವಿಸಿದರು.

ಶಿಷ್ಯನಿಗೆ ಶಿಷ್ಯರಾದವರು ಬೇಂದ್ರೆ. (ವಿ.ಕೃ.ಗೋಕಾಕರಿಗೆ)ದ.ರಾ.ಬೇಂದ್ರೆ ಅವರು ಕನ್ನಡ ಸಾಹಿತ್ಯ ಲೋಕದ ಅಪರೂಪದ ಕವಿ ಕನ್ನಡಿಗರನ್ನು ನಿಜವಾಗಿಯೂ ಭಾವ ಲೋಕದ ರಸಯಾತ್ರೆಗೆ ಕೊಂಡೊಯ್ದ ಕವಿ. ಅವರಲ್ಲಿ ಕಾಣ ಬರುವ ವಿಷಯ ವೈವಿಧ್ಯ ಮತ್ತು ನಿರೂಪಣೆಯ ವೈವಿಧ್ಯ ಬೆರಗುಗೊಳಿಸುವಂಥದ್ದು. ಇವರ ಕವನಗಳು ಕಾವ್ಯ ಮೀಮಾಂಸೆಗೆ ಹೊಸ ಆಯಾಮವನ್ನೇ ಮೂಡಿಸಿವೆ. ಇವರ ಬದುಕು ಬೆಂಕಿಯಲ್ಲಿ ಅರಳಿದ ಹೂವಿನಂತೆ ಸಾವು ಇವರ ಕಣ್ಣೆದುರು ಮಾಡಿರುವಷ್ಟು ರುದ್ರ ನರ್ತನವನ್ನು ಕಿವಿಗೆ ಕೇಳಿಸಿರುವಷ್ಟು ಮರಣ ಮೃದಂಗವನ್ನು ಯಾವ ಕವಿಯ ಬಾಳಲ್ಲೂ ಮಾಡಿಲ್ಲ.

ತಂದೆ, ತಾಯಿ, ಆರು ಜನ ಮಕ್ಕಳು ಕಣ್ಮುಂದೆಯೇ ಇಲ್ಲವಾದ ದುರ್ಭರ ದು:ಖವನ್ನು ಸಹಿಸಿಕೊಂಡು – "ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ" ಎಂಬ ಆದರ್ಶವನ್ನು ಮೆರೆದವರು. ಇದನ್ನು ಕಂಡು ಕೆಲವರು 'ಬೆಂದರೆ ಬೇಂದ್ರೆ ಆದಾನು' ಎಂದರು. ಆದರೆ ಬೆಂದವರೆಲ್ಲಾ ಬೇಂದ್ರೆ ಆಗಲಾರರು ಎಂಬುದು ಅಷ್ಟೇ ಸತ್ಯ. ಬೇಂದ್ರೆ ಅವರಿಗೆ ಮಕ್ಕಳನ್ನು ಪಡೆದ ಸುಖಕ್ಕಿಂತ ಮಕ್ಕಳನ್ನು ಕಳೆದುಕೊಂಡ ದು:ಖ ದುಮ್ಮಾನಗಳೇ ಹೆಚ್ಚು. ಎದೆಯುದ್ದದ ಪದವೀಧರನಾಗಲಿದ್ದ ಮಗ ಸತ್ತಾಗ, ಪ್ರೀತಿಯ ತಂದೆಗಾದ ನೋವು ಹಾಡಲ್ಲಿ ಹೊರಹೊಮ್ಮಿದೆ.

ಬಡತನ, ಮಕ್ಕಳ ಸಾವು ನೋವು, ನಿರುದ್ಯೋಗ ಮೊದಲಾದ ನೋವು, ತಾಪಗಳಲ್ಲಿ ಬೆಂದ ಕವಿಯ ಮನವು ಮಾಗಿತು ಬಾಗಿತು ಕೊನೆಗಾಲದಲ್ಲಿ ರಾಜ್ಯ ಸರ್ಕಾರದಿಂದ ಬೇಂದ್ರೆ ಅವರಿಗೆ ತಿಂಗಳಿಗೆ ರೂ. 250/– ಗಳ ಮಾಸಾಶನ ಘೋಷಿಸಲ್ಪಟ್ಟಾಗ ಕವಿಯ ಪತ್ನಿ "ಇನ್ನೇನು ಸಮಾಧಾನದಿಂದ ಕಣ್ಣು ಮುಚ್ಚುತ್ತೀನಿ ನಿಮಗೊಂದು ಅನ್ನದ ಮಾರ್ಗ ಆತು" ಎಂದು ನುಡಿದರಂತೆ


**6. ಕುವೆಂಪು:**



- ಕಾಲ: ಕ್ರಿ.ಶ. 1904,ಡಿ.29.
- ಸ್ಥಳ: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ.
- ಬಾಲ್ಯ: ಚಿಕ್ಕ ವಯಸ್ಸನಲ್ಲಿ ತಂದೆಯನ್ನು ಕಳೆದುಕೊಂಡವರು. ಚಿಕ್ಕಪ್ಪನ ಆಶ್ರಯ, ಪುಟ್ಟಪ್ಪನವರ ಚಿಕ್ಕಪ್ಪನವರು ಓದಿನ ಬಗ್ಗೆ ನಿರಾಸಕ್ತಿ ಹೊಂದಿದ್ದರು.
- ಕವನ ರಚನೆ: 5ನೇ ತರಗತಿಯಲ್ಲಿಯೇ ಕವನ ರಚನೆ.
- ಮೊದಲ ಕವನ: 'ಏಪ್ರಿಲ್' ಕನ್ನಡ ಅನುವಾದ 'ಚೈತ್ರ–ವೈಶಾಕ' ಸುಂದರ ಭಾವಗೀತೆ. ಜೇಮ್ಸ್ ಕಸಿನ್ಸ್ ರ ಸಲಹೆ.
- ಸ್ವಾತಂತ್ರ್ಯ ಸಂಗ್ರಾಮ: ವಿದೇಶಿ ವಸ್ತುಗಳ ಬಹಿಷ್ಕಾರದಲ್ಲಿ ಕೋಟು ಮತ್ತು ಟೋಪಿಯನ್ನು ಸುಟ್ಟು, ಆಗಿನಿಂದ 'ಖಾದಿ' ದರಿಸಿದರು.
- ಮೌಢ್ಯ ವಿರೋಧಿ: ಪ್ರಾಣಿ ಬಲಿಯನ್ನು ವಿರೋಧಿಸುತ್ತಿದ್ದರು. ಮಾಟ–ಮಂತ್ರ ತಂತ್ರಗಳನ್ನು ನಂಬುತ್ತಿರಲ್ಲಿ.

- ವಿಶ್ವಪಥ: ಮನುಜ ಮತ ವಿಶ್ವ ಪಥ . ಗುಡಿ, ಚರ್ಚು, ಮಸಿದಿಗಳ ಬಿಟ್ಟು ಹೊರಬನ್ನಿ.
- ವೈಜ್ಞಾನಿಕ ಮನೋಭಾವವನ್ನು ರೂಢಿಸಿಕ್ಕೊಳ್ಳಲು ಸಲಹೆ.
- ಮನೆಯ ಹೆಸರು: 'ಉದಯ ರವಿ' (ಮೈಸೂರು). ರಸ ಋಷಿಯಂತೆ ಬಾಳಿದರು.

**7. ಕುಮಾರ ವ್ಯಾಸ:**




- ಕಾಲ: ಕ್ರಿ.ಶ. 1430.
- ಸ್ಥಳ: ಗದಗ ಜಲ್ಲೆಯ ಕೋಳಿವಾಡ.
- ನಿಜನಾಮ: ನಾರಾಣಪ್ಪ.–ಚಮರಸ ಕವಿಯ ತಂಗಿಯ ಗಂಡ.
- ಮನೆತನ: ಶಾನುಭೋಗ(ಗೌಡ)ರ ಮನೆತನದವರು.
- ಕೃತಿ ಮೂಲ: ವ್ಯಾಸ ಮಹರ್ಷಿಯ 'ಮಹಾಭಾರತ' ಮೊದಲ 10 ಪರ್ವಗಳ ಬಳಕೆ ಉಳಿದ 8 ಪರ್ವಗಳನ್ನು ತಿಮ್ಮಣ್ಣ ಕವಿ ಪೂರ್ಣಗೊಳಿಸಿದ.

ಭಾಗವತ' ಸಂಪ್ರದಾಯ: ತಿಳಿದು ಹೇಳವೆ ಕೃಷ್ಣ ಕಥೆಯ. "ವೀರನಾರಾಯಣನೇ ಕವಿ, ಲಿಪಿಕಾರ ಕುಮಾರವ್ಯಾಸ".

ಕನ್ನಡ ಸಾಹಿತ್ಯ ಒಂದು ಸಾವಿರ ವರ್ಷಗಳಿಂದ ಬೆಳದು ಬಂದಿದೆ. ಅನೇಕ ಕವಿ ಕೃತಿಗಳಿಂದ ರಮಣೀಯವಾಗಿದೆ. ಈ ಸಾಹಿತ್ಯ ಕ್ಷೇತ್ರದಲ್ಲಿ ಬರುವ 4 ಪ್ರಬಲ ಪರಿವರ್ತನೆಯ ಘಟ್ಟಗಳಲ್ಲಿ – 3ನೇ ಘಟ್ಟದ ಮಹತ್ವದ ಕವಿ ನಾರಣಪ್ಪ ಕನ್ನಡ ಹೊಸ ಹುಟ್ಟಿನಲ್ಲಿ ಹೊಸ ಮಾರ್ಗಕ್ಕೆ ಹೊಸ ಶಕ್ತಿಗೆ ದಿಕ್ಸೂಚಿ. ಧ್ರುವತಾರೆ ವ್ಯಾಸರ ಪ್ರೇಮ ಕುಮಾರ,

ಮಾನವ ಸಹಜವಾದ ಕೋಪ, ಅತಿಕೋಪ, ನಾಚಿಕೆ, ಪಶ್ಚಾತಾಪ, ಅಳು – ನಗು ಇವೆಲ್ಲವನ್ನು ಸಹಜವಾಗಿಯೇ ಚಿತ್ರಿಸಿದ್ದಾನೆ. ಶ್ರೀಕೃಷ್ಣನ ವರ್ತನೆಯಲ್ಲೂ ಮಾನವ ಸಹಜ ಗುಣಗಳನ್ನು ತಂದಿದ್ದಾನೆ. ಅತಿಕೋಪಕ್ಕೆ ಅಭಿಮನ್ಯುವಿನ ಈ ಮಾತು ಸಾಕ್ಷಿಯಾಗಿದೆ. "ಬವರವಾದರೆ ಹರನ ವದನಕ್ಕೆ ಬೆವರ ತಹೆನು ಜವನ ಜವೆಗೆಡಿಸುವೆನು".

**8. ರನ್ನ:**





- ಕಾಲ: ಕ್ರಿ.ಶ. 949.
- ಸ್ಥಳ: ಬಾಗಲಕೋಟೆ ಜಿಲ್ಲೆಯ ಮುದುವೊಳಲು.
- ರತ್ನತ್ರಯರಲ್ಲಿ ಒಬ್ಬ, ಕವಿ ಚಕ್ರವರ್ತಿ. ಶಕ್ತಿ ಕವಿ ರನ್ನ–ಕುವೆಂಪು.
- ಅಣ್ಣಂದಿರು: ದೃಡ ಬಾಹು, ರೆಚಣ್ಣ , ಮಾರಯ್ಯ.
- ರಾಜಾಶ್ರಯ: ಚಾವುಂಡರಾಯ, ಅತ್ತಿಮಬ್ಬೆ, ಚಾಲುಕ್ಯ ಚಕ್ರವರ್ತಿ ರಾಜ 2ನೇ ತೈಲಪ.
- ಹೆಸರಿನ ವ್ಯಾಮೋಹ: ಶ್ರವಣಬೆಳಗೋಳದ ಬಂಡೆಗಲ್ಲಿನ ಮೇಲೆ 'ಶ್ರೀ ಕವಿರತ್ನಂ' ಎಂದು ಸ್ವತ: ಕೆತ್ತಿರುವುದು.

- ಬಿರುದಿನ ಹಿರಿಮೆ:

  ಪಡೆಯಡೆಯ ಕಡೆಯ ಬಡವರ್
  ಕುಡೆ ಪಡೆದನೋ ಚಕ್ರವರ್ತಿಯೊಳ್ ತೈಲಪನೊಳ್
  ಪಡೆದಂ ಮಹಿಮೋನ್ನತಿಯಂ
  ಪಡೆದಂ ಕವಿಚಕ್ರವರ್ತಿ ವೆಸರಂ ರನ್ನಂ

ರನ್ನನ ಕೃತಿರತ್ನ ವ್ಯಾಸಭಾರತದ ಗದಾಸೌಪ್ತಿಕ ಪರ್ವದ ಕಥಾನಕ. ಪಂಪ ಭಾರತದ 13ನೇಯ ಆಶ್ವಾಸದ ಭಾರತ ಯುದ್ಧದ ಕೊನೆಯ ದೃಶ್ಯ. ರನ್ನನಿಗೆ ಪ್ರೇರಣೆ ಭಾಸನ ಊರುಭಂಗ, ಭಟ್ಟನಾರಾಯಣನ ವೇಣೀ ಸಂಹಾರಗಳ ಪ್ರಭಾವವೂ ಇದೆ. ಹಿಂದಿನ ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ಹೇಳಿರುವುದು ರನ್ನನ ವೈಶಿಷ್ಟ್ಯ.

**9. ಪಂಪ:**




- ಕಾಲ: ಕ್ರಿ.ಶ. 941.
- ಸ್ಥಳ: ವೆಂಗಿ ಮಂಡಲದ ವೆಂಗಿಪಳು,( ವೆಮುಲವಾಡ, ಹೈದರಾಬಾದ್ ಹತ್ತಿರ, ಕೃಷ್ಣ ನದಿ ಗೋದಾವರಿ ನದಿಯ ಮಧ್ಯ ಭಾಗ)
- ತಂದೆ:ಭೀಮಪ್ಪಯ್ಯ–ಈತ ಮೊದಲು ಬ್ರಾಹ್ಮಣ ನಾಗಿದ್ದು, ನಂತರ ಜೈನ ನಾದನು.
- ತನ್ನ ಸೌಂದರ್ಯ : ಕದಳಿ ಗರ್ಭದ ದಿಂಡಿನ ಬಣ್ಣ. ಗುಂಗುರು ಕೂದಲು, ಸಮತಟ್ಟಾದ ನಿಲುವು.
- ವಲಸೆ: ವೆಮುಲವಾಡದಿಂದ ಬನವಾಸಿಗೆ.
- ಕೃತಿ ರಚನೆ: ವಿಕ್ರಮಾರ್ಜುನ ವಿಜಯ– 6 ತಿಂಗಳು.,ಆದಿ ಪುರಾಣ–3 ತಿಂಗಳು.
- ಆಶ್ರಯ: ರಾಜ ಅರಿಕೇಸರಿ, ವೇಮುಲವಾಡ.

  * ಕನ್ನಡ ನಾಡಿನ ವರ್ಣನೆ:

    – ಚಾಗದ ಬೋಗದ.......
    – ಆರಂಕುಶ ವಿಟ್ಟೋಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ.
    – ನೆನೆವೊಡೆ ಕರ್ಣನಂ ನೆನೆ..........

ಪಂಪ ಕನ್ನಡದ ಆದಿಕವಿ. ಅಷ್ಟೇ ಅಲ್ಲ, ಅಗ್ರಕವಿಯೂ ಹೌದು. 'ಪಸರಿಪ ಕನ್ನಡಕ್ಕೆ ಒಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದ ಹೇಳಿದ 14ನೇ ಶತಮಾನದ ನಾಗವರ್ಮನ ಮಾತು ಇಂದಿಗೂ ಪ್ರಸ್ತುತವಾಗಿದೆ. 'ಮಾನವ ಜಾತಿ ತಾನೊಂದೇ ವಲಂ' ಎಂಬ ವಿಶ್ವಮಾನವ ಸಂದೇಶ ಸಾರಿದ ಕವಿ ಪಂಪ.

**10. ಹರಿಹರ:**





- ಕಾಲ: ಕ್ರಿ.ಶ.1200.
- ಸ್ಥಳ: ಹಂಪೆ
- ಇತರ ಹೆಸರುಗಳು: ಹರಿ, ಹರಿಗ, ಹರಿಯಣ್ಣ, ಹರಿಯಣ್ಣ ಪಂಡಿತ.
  - ಅಳಿಯ ರಾಘವಾಂಕ, ಸೋದರಿ ರುದ್ರಾಣಿ ಮಗ.
- ರಾಜಾಶ್ರಯ ದಿಕ್ಕಾರ: ಬಸವಣ್ಣ ಹಾಗೂ ಉಳಿದ ಶರಣರು ಬೆಳಗಿಸಿದ ಕ್ರಾಂತಿಯ ದಾರಿಯಲ್ಲಿ ನಡೆದು ತನ್ನ ಪ್ರತಿಭಾ ಸೃಷ್ಟಿಯಿಂದ ಹರಿಹರ ಮಾರ್ಗ ಎಂಬುದನ್ನು ನಿರ್ಮಾಣಮಾಡಿದನು.
  - ರಾಜಾಶ್ರಯವನ್ನು ದಿಕ್ಕರಿಸಿದ ಕ್ರಾಂತಿ ಕವಿ. ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಟರ ಮೇಲೆ.................

**11. ರಾಘವಾಂಕ:**





- ಕಾಲ: ಕ್ರಿ.ಶ. 1225.
- ಸ್ಥಳ: ಹಂಪೆ.
- ಷಟ್ಪದಿ: ಷಟ್ಪದಿಯ ಬ್ರಹ್ಮ, ಹರಿಹರನ ಅಳಿಯ.
- ವಿದ್ವತ್: ಗುರುವನ್ನು ಸೋಲಿಸಿದ ಕವಿ. ಗುರುವಿನ ಆಶ್ರಯ, ದೈವದತ್ತ ಪಾಂಡಿತ್ಯದಿಂದ ಗುರುವನ್ನು ಮೀರಿ ಬೆಳೆದ ಶಿಷ್ಯ.

**12. ಜನ್ನ:**




- ಕಾಲ: ಕ್ರಿ.ಶ. 1225.
- ಸ್ಥಳ: ಹಾಸನ ಜಿಲ್ಲೆಯ ಹಳೆಬೀಡು.
- ಕವಿ ಚಕ್ರವರ್ತಿ – ರಾಜ ನರಸಿಂಹನ ಆಶ್ರಯ
- ಬಹು ಪ್ರತಿಭಾ ಸಂಪನ್ನ: ನಿಂದಿರೆ ದಂಡಾಧೀಶಂ, ಕುಳ್ಳಿರೆ ಮಂತ್ರಿ, ತೊಡಂಕೆ ಕವಿ.
- "ತಾನಿತ್ತ ಕೈಯಲ್ಲದೆ, ಒಡ್ಡಿದ ಕೆಯ್ಯಲ್ಲದ ಪೆಂಪು."
- ಧಾರ್ಮಿಕ ಒಲವು: ಜೈನ ಬಸದಿಗಳನ್ನು ಕಟ್ಟಿಸಿದ ಹೆಗ್ಗಳಿಕೆ.

**13. ಶಿಶುನಾಳ ಶರೀಫ:**



- ಕಾಲ: ಕ್ರಿ.ಶ. 1819, ಮಾ.07.
- ಸ್ಥಳ: ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಶಿಶುನಾಳ.
- ತಂದೆ: ದೇವಕಾರ ಇಮಾಮ್ ಸಾಹೇಬರು. ನಿಷ್ಠಾವಂತ ಧಾರ್ಮಿಕ ವ್ಯಕ್ತಿ, ಆದರೆ ಧರ್ಮಾಂದರಲ್ಲ.
- ಗದ್ದುಗೆ: ಪೂಜೆ, ಹಿಂದೂ ಹಾಗೂ ಮುಸ್ಲಿಂಮರು ಕೂಡಿ ಒಂದೆಡೆ ಪೂಜೆ ಭಾವೈಕ್ಯತೆಯ ಸಂಕೇತ.

- ಶರೀಫರ ವಿದ್ಯಾಭ್ಯಾಸ: ಕೂಲಿಮಠದಲ್ಲಿ, 'ಮುಲ್ಕೀ' (7ನೇ) ಪರೀಕ್ಷೆ ಉತ್ತೀರ್ಣ.
  - ಬಯಲಾಟ, ಕೋಲಾಟ, ಲಾವಣಿ ಪದ ರಚನೆ ಹಾಗೂ ಹಾಡುವುದು.
- ಮದುವೆ: ಕುಂದುಗೋಳದಲ್ಲಿ 'ಫಾತಿಮಾ' ರವರೊಂದಿಗೆ ವಿವಾಹ ವಾಯಿತು. ಒಬ್ಬ ಮಗಳು ಜನಿಸಿದಳು.

–ಪತ್ನಿ ಹಾಗೂ ಮಗಳ ಅಕಾಲಿಕ ಮರಣ, ವೈರಾಗ್ಯ ಭಾವನೆ ಆವರಸಿತು.

–" ದು:ಖಮೇ ಪಡಾ ಮನ್, ಸುಖನಹಿ: ಪಾಯಾ" (ಜಗತ್ತು ದು:ಖಮಯ, ಇದರಲ್ಲಿ ಸುಖವೆಲ್ಲಿಯದು ?")

* ಕಳಸದ ಗುರು ಗೋವಿಂದ ಭಟ್ಟರು: ಕುಂದಗೋಳದಲ್ಲಿ ಮೊದಲ ಬೇಟಿ. ಸ್ಮಾರ್ತ ಬ್ರಾಹ್ಮಣರು. ಸಕಲ ಶಾಸ್ತ್ರ ಪಂಡಿತರು. ಆದರೆ ಗೊಡ್ಡು ಸಂಪ್ರದಾಯದ ಬ್ರಾಹ್ಮಣಿಕೆಯ ಕಟ್ಟುನಿಟ್ಟಾದ ಆಚರಣೆಗಳಿಗೆ ಅಂಟಿಕೊಂಡವರಲ್ಲ.


* ತತ್ವ ಪದ:– "ಬಡತನವೆಂಬುದು ಕಡೆತನವಿರಲಿ

ಒಡವೆ ವಸ್ತ್ರಗಳು ಹಾಳಾಗಿ ಹೋಗಲಿ

ಮಡದಿ ಮಕ್ಕಳು ಸುಡುಗಾಡು ಸೇರಲಿ

ಬಡಿವಾರದ ಬಾಂಧವರು ಮಡಿಯಲಿ"

**14. ಗೊರೂರು ರಾಮಸ್ವಾಮಿ ಅಯ್ಯಂಗಾರ್:**



- ಕಾಲ: ಕ್ರಿ.ಶ. 1904.
- ಸ್ಥಳ: ಹಾಸನ ಜಿಲ್ಲೆಯ ಗೊರೂರು.
- ಮನೆಯೇ ಪಾಠಶಾಲೆ: ತಂದೆಯವರು ಸಂಸ್ಕೃತ ಪಾಠಕ್ಕೆ ಆಸಕ್ತಿಯ ವಿದ್ಯಾರ್ಥಿಯಾಗಿದ್ದರು.
- ಸ್ವಾತಂತ್ರ್ಯ ಹೋರಾಟಗಾರರು: 1942 ರ 'ಕ್ವಿಟ್ ಇಂಡಿಯಾ ಚಳುವಳಿ' ಯಲ್ಲಿ ಭಾಗಿ,
- ಅಪ್ಪಟ ಗಾಂಧಿ ವಾದಿ: ಗಾಂಧೀಜಿಯವರು ನಿಧನರಾದಾಗ ಅವರ ಚಿತಾಭಸ್ಮವನ್ನು ಹೇಮಾವತಿಯ ಯಗಚಿ ನದಿಯಲ್ಲಿ ಬಡಿವಾಗ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತರು.
  - ತಮ್ಮ 17 ವರ್ಷದ ಮಗ ರಾಮಚಂದ್ರ ಬ್ರಿಟೀಷರ ಗುಂಡೇಟಿಗೆ ಬಲಿಯಾದಾಗಲು ಅಷ್ಟು ದು:ಖ ಪಟ್ಟಿರಲಿಲ್ಲ.

ಇವರು ಸಾಹಿತ್ಯ ಲೋಕದ ಅಪೂರ್ವ ಸಾಹಿತಿಯೂ ಹೌದು ಸ್ವಾತಂತ್ರ್ಯ ಯೋಧರೂ ಹೌದು. ಗ್ರಾಮೀಣ ಜೀವನದ ಹಲವು ಹತ್ತು ಮುಖಗಳಿಗೆ ಚಿರಸ್ಮರಣೀಯ ಅಭಿವ್ಯಕ್ತಿಯನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನೀಡಿ ಅಮರರಾಗಿದ್ದಾರೆ.

ಗಾಂಧಿಯವರ ನಿಕಟವರ್ತಿ, ಅಪ್ಪಟ್ಟ ಅಭಿಮಾನಿ ಗಾಂಧಿಯವರು ಸತ್ತಾಗ ಅವರಿಗೆ ಆದಷ್ಟು ದು:ಖ ನಾಡಿದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಗನನ್ನೇ ಬಲಿಕೊಟ್ಟಾಗಲೂ ಬಹುಶ: ಆಗಿದ್ದಿರಲಾರದು, ಗಾಂಧಿಯವರ ಚಿತಾಭಸ್ಮವುಳ್ಳ ಪಾತ್ರೆಯನ್ನು ತಲೆಯ ಮೇಲೆ ಹೊತ್ತು ಬರಿಗಾಲಲ್ಲಿ ನಡೆಯುತ್ತಾ ಹೇಮಾವತಿ ಯಗಚಿ ಸಂಗಮದಲ್ಲಿ ವಿಸರ್ಜಿಸಿ ಬಿಕ್ಕಿ ಬಿಕ್ಕಿ ಅಳುತ್ತಾ ಕುಸಿದು ಕುಳಿತರು.

ಗೊರೂರನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪರಿವೀಕ್ಷಕರಾಗಿ ನೇಮಿಸಿದಾಗ ಅವರ ವಿರುದ್ಧ ದೂರು ನೀಡಿದರು. ವಿಚಾರಣೆ ನಡೆದಾಗ ಅವರಲ್ಲಿ ಯಾವ ಶೈಕ್ಷಣಿಕ ಅರ್ಹತೆ ತೋರಿಸುವ ಪ್ರಮಾಣ ಪತ್ರಗಳಿರಲಿಲ್ಲ. 7ನೇ ತರಗತಿವರೆಗೆ ಮಾತ್ರ ಓದಿದ್ದರು. ನೀವು  ಯಾವುದಾದರೂ ಪರೀಕ್ಷೆ ಕಟ್ಟಿ ಪಾಸು ಮಾಡಿ ಎಂದು ಇಲಾಖಾ ವರಿಷ್ಠರಾದ ಎನ್.ಎಸ್. ಸುಬ್ಬರಾಯರು ಸೂಚಿಸಿದಾಗ. ಮದ್ರಾಸ್ ವಿಶ್ವವಿದ್ಯಾನಿಲಯದ 'ವಿದ್ವಾನ್' ಪರೀಕ್ಷೆ ತೆಗೆದುಕೊಂಡರು ಆಗ ತಮ್ಮದೇ ಪುಸ್ತಕವಾದ 'ನಮ್ಮ ಊರಿನ ರಸಿಕ' ರನ್ನು ಪಠ್ಯವಾಗಿ ಓದಬೇಕಾಗಿ ಬಂತು ಮುಳಿಯ ತಿಮ್ಮಪ್ಪಯ್ಯ ಮೌಲ್ಯ ಮಾಪಕರು ಕಡಿಮೆ ಅಂಕ ಪಡೆದು ಪಾಸಾದರು ಹೀಗೆ 'ವಿದ್ವಾನ'ರಾದ ಇವರನ್ನು ಹಲವಾರು ಅತ್ಯುನ್ನತ ಪದವಿ ಪುರಸ್ಕಾರಗಳು ಹುಡುಕಿಕೊಂಡು ಬಂದವು ವ್ಯಕ್ತಿಯಿಂದಾಗಿ ಒಂದು ಊರು ಜನಪ್ರಿಯವಾಯಿತು.

**15. ಶಿವರಾಮ ಕಾರಂತರು:**



- ಕಾಲ: ಕ್ರಿ.ಶ. 1902, ಅ.10
- ಸ್ಥಳ: ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಟ.–'ಕಡಲ ತೀರದ ಭಾರ್ಗವ'
- ಸ್ವಾತಂತ್ರ್ಯ ಹೋರಾಟಗಾರರು: ಕ್ರಿ.ಶ. 1942 ಅಸಹಕಾರ ಚಳುವಳಿಯಲ್ಲಿ ಭಾಗಿ. ವಿದ್ಯಾಭ್ಯಾಸವನ್ನು ನಿಲ್ಲಿದಿದರು.(ಪದವಿ ಒಂದನೇ ವರ್ಷ).
- ಗುಮಸ್ತನಿಗೆ ಪುಸ್ತಕ ಅರ್ಪಣೆ: 'ಚೋಮನ ದುಡಿ' ಯನ್ನು ಮಿತ್ರರಾದ 'ದೇವಣ್ಣ ಸುಬ್ರಾಯ' ಅವರಿಗೆ. ಬಾಲ್ಯ ಸ್ನೇಹಿತ –ಸಾಹಿತ್ಯಾಸಕ್ತಿ ಮೂಡಿಸಿದಾತ.

- ಪುಸ್ತಕಗಳು: 200 ಕೃತಿಗಳು. (39_ ಕಾದಂಬರಿಗಳು)
- ನಾಟಕಕಾರರು, ಯಕ್ಷಗಾನ ಕಲಾವಿದರು, ಕಾದಂಬರಿಕಾರರು, ಚಲನಚಿತ್ರ ನಿರ್ದೇಶಕರು......

**16. ಅರವಿಂದ ಮಾಲಗತ್ತಿ:**



- ಕಾಲ: ಕ್ರಿ.ಶ. 1956.
- ಸ್ಥಳ: ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ.
- ಓದಿನಲ್ಲಿ ಆಸಕ್ತಿ: ಪದ್ಮಾವತಿ ಗುಡ್ಡ – ಅರವಿಂದರ ನೆಚ್ಚಿನ ಓದುವ ತಾಣವಾಗಿತ್ತು. ಕಲ್ಲು ಪೊಟರೆಯಲ್ಲಿ ಓದುತ್ತ ಮಲಗಿದ್ದಾಗ ಕತ್ತಲಾಗಿತ್ತು. ಎಚ್ಚರಾಗಿ ಎದೆ ಒಡೆದು ನೀರಾಗಿತ್ತು ಎಂದು ಹೇಳುತ್ತಾರೆ.
- ಪ್ರೇರಣೆ: ಕಥೆಗಳನ್ನು ಬರೆಯಲು ಅವರ ತಾಯಿ ಹೇಳುತ್ತಿದ್ದ ಕಥೆಗಳು.

## 8. ಶಿಕ್ಷಣದಲ್ಲಿ ತಂತ್ರಜ್ಞಾನ ಮತ್ತು ಆಪ್‌ಗಳ ಬಳಕೆ

ಇಂದಿನ ದಿನಗಳಲ್ಲಿ ತಂತ್ರಜ್ಞಾನ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಭಾಷಾ ಬೋಧನೆಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿರುವ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ, ಸಂವಹನ, ಸಹಯೋಗ ಇವೆಲ್ಲವುಗಳನ್ನು ಉತ್ತೇಜಿಸಬಹುದು.

ತಂತ್ರಜ್ಞಾನವನ್ನು ಬಳಸಿಕೊಂಡು ಕಲಿಯುವುದರಿಂದ ವಿದ್ಯಾರ್ಥಿಗಳು ಭಾಷೆಯನ್ನು ಯಾವುದೇ ಒತ್ತಡವಿಲ್ಲದೆ ಮನರಂಜನಾ ರೀತಿಯಲ್ಲಿ ಕಲಿಯಬಹುದು. ಶೈಕ್ಷಣಿಕ ತಂತ್ರಜ್ಞಾನವು ಮಾನವ ಕಲಿಕೆಯ ಪ್ರಕ್ರಿಯೆಯನ್ನು ಸುಧಾರಿಸಲು ವ್ಯವಸ್ಥೆಗಳು, ಸಾಧನಗಳು ಹಾಗೂ ತಂತ್ರಗಳ ಅಭಿವೃದ್ಧಿ ಹಾಗೂ ಅವುಗಳ ಪರಿಣಾಮಕಾರಿಯಾದ ಅನ್ವಯಗಳನ್ನು ಒಳಗೊಂಡಿದೆ. ಹಾಗೂ ಶೈಕ್ಷಣಿಕ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಅನ್ವಯಿಸಿಕೊಳ್ಳುವ ತಾಂತ್ರಿಕತೆ ಮತ್ತು ನವೀನ ಪದ್ಧತಿಯನ್ನು ಒಳಗೊಂಡ ವಿಜ್ಞಾನವಾಗಿದೆ.

**ಶೈಕ್ಷಣಿಕ ತಂತ್ರಜ್ಞಾನದ ಉದ್ದೇಶಗಳು**

ಶಿಕ್ಷಣದ ಮುಖ್ಯ ಧ್ಯೇಯಗಳನ್ನು ಮತ್ತು ಗುರಿಗಳನ್ನು ಸಾಖಾರಗೊಳಿಸಲು ತಂತ್ರಜ್ಞಾನವು ಸಹಕಾರಿಯಾಗಿದೆ. ಪ್ರಸ್ತುತ ಸಮಯಕ್ಕೆ ತಕ್ಕಂತೆ ಪಠ್ಯಕ್ರಮ ರಚನೆ, ಅದರಲ್ಲಿ ವೈಜ್ಞಾನಿಕ ವಿಷಯಗಳ ಸಮಯೋಚಿತ ಜೋಡಣೆ, ಪ್ರಾಯೋಗಿಕ ಅನುಭವ ಇವುಗಳನ್ನು ಅತ್ಯಂತ ವಿಶಿಷ್ಟವಾಗಿ ಪೂರೈಸಿಕೊಳ್ಳುವಂತೆ ಮಾಡುತ್ತದೆ. ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾದ ವಿಧಾನಗಳನ್ನು ರೂಪಿಸಿ ಸಮಾನತೆ ಏಕತೆಗಳನ್ನು ಬಿಂಬಿಸುವಂತೆ ಮಾಡುತ್ತದೆ. ಶಿಕ್ಷಕರಿಗೆ ಪಾಠ ವಿಷಯಕ್ಕೆ ತಕ್ಕಂತೆ ಸಾಧನಗಳನ್ನು ಬಳಸಿಕೊಂಡು ಸರಿಯಾದ ತಂತ್ರದೊಂದಿಗೆ ಮುಂದುವರೆಯುವಂತೆ ಮಾಡುತ್ತದೆ.

ವಿದ್ಯಾರ್ಥಿಗಳ ವೈಶಿಷ್ಟ್ಯತೆ ಮತ್ತು ಬೇಕು ಬೇಡಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ಪರಿಹಾರ ನೀಡುತ್ತದೆ. ತರಗತಿ ಸನ್ನಿವೇಶಕ್ಕೆ ತಕ್ಕಂತೆ ಕಲಿಕೆಯನ್ನು ಅರ್ಥೈಸಿಕೊಳ್ಳಲು ತಂತ್ರಜ್ಞಾನವು ಅವಶ್ಯಕವಾಗಿದೆ, ಮಕ್ಕಳ ಕಲಿಕೆಗೆ ಅಗತ್ಯವಾದ ಸಾಧನ ಸಲಕರಣಗಳನ್ನು ಅತ್ಯಂತ ವ್ಯವಸ್ಥಿತವಾಗಿ ರೂಲಿಸಿ ಕಡಿಮೆ ವೆಚ್ಚದಲ್ಲಿ ತರಗತಿಯ ಬೋಧನೆಯನ್ನು ಪರಿಣಾಮಕಾರಿಯಾಗಿಸುತ್ತದೆ. ಶಿಕ್ಷಕರಿಗೆ ಪಾಠ ವಿಷಯಕ್ಕೆ ತಕ್ಕಂತೆ ಸಾಧನಗಳನ್ನು ಬಳಸಿಕೊಂಡು ಸರಿಯಾದ ತಂತ್ರದೊಂದಿಗೆ ಮುಂದುವರೆಯುವಂತೆ ಮಾಡುತ್ತದೆ.

**ಶೈಕ್ಷಣಿಕ ತಂತ್ರಜ್ಞಾನದ ಉಪಯೋಗಗಳು**

1. ವ್ಯಕ್ತಿಗತ ಬೋಧನೆಗೆ ಹೆಚ್ಚಿನ ಮಹತ್ವ ನೀಡಿ ಪ್ರತಿಯೊಬ್ಬರ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ.
2. ಬೋಧನಾ ಮತ್ತು ಕಲಿಕಾ ಗುಣಮಟ್ಟವನ್ನು ಸುಧಾರಿಸಿ ಉತ್ತಮಪಡಿಸುವಲ್ಲಿ ಶೀಕ್ಷಕ ಹಾಗೂ ವಿದ್ಯಾರ್ಥಿಯ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವಂತೆ ಮಾಡುತ್ತದೆ.
3. ವರ್ಗಸಂಖ್ಯೆಯು ಅತಿಯಾಗಿದ್ದರೂ ಪರಿಣಾಮಕಾರಿಯಾದ ಬೋಧನೆ/ಕಲಿಕೆ ಆಗುವಂತೆ ಮಾಡುತ್ತದೆ.
4. ಸರ್ವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿ ಪ್ರತಿಯೊಬ್ಬರ ಬೇಡಿಕೆಗಳನ್ನು ಪೂರೈಸಿ ಸಾಮಾನೀಕರಣ ತತ್ವಗಳನ್ನು ಪೂರೈಸುತ್ತದೆ.
5. ಶೈಕ್ಷಣಿಕ ಅಭಿಚೃದ್ಧಿ ವಿಸ್ತರಣೆ ಕಾರ್ಯಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ.
6. ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದುದ್ದಕ್ಕೂ ಶಿಕ್ಷಣವನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗುವಂತೆ ಪ್ರೇರಣೆ ನೀಡುತ್ತದೆ.
7. ಶಿಕ್ಷಕರಿಗೆ ತಮ್ಮ ಗುಣಮಟ್ಟವನ್ನು ಸುಧಾರಿಸಿಕೊಂಡು ಪಾಠ ಪ್ರವಚನಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುವಂತೆ ಮಾಡುತ್ತದೆ.
8. ಕಲಿಸುವುದಕ್ಕಿಂತಲೂ ಹೆಚ್ಚಿನ ವೇಗದಲ್ಲಿ ವಿದ್ಯಾರ್ಥಿಗಳು ಕಲಿಯುವಂತೆ ಮಾಡುತ್ತದೆ.
9. ಶೈಕ್ಷಣಿಕ ಸಂಶೋಧನೆಗಳು ಮತ್ತು ಯೋಜನೆಗಳು ಪರಿಣಾಮಕಾರಿಯಾಗಿ ಸಾಕಾರಗೊಳ್ಳಲು ಸಹಕಾರಿಯಾಗಿದೆ.ಸ
10. ಪರಿಸರ ಮಾಲಿನ್ಯ ಮತ್ತು ಪರಿಸರ ರಕ್ಷಣೆ ಮುಂತಾದವುಗಳ ಬಗ್ಗೆ ಯೋಗ್ಯ ಭಾವನೆಗಳನ್ನು ಮೂಡುವಂತೆ ಮಾಡುತ್ತದೆ.

**ತಂತ್ರಜ್ಞಾನದ ಇತಿಮಿತಿಗಳು:** ಭಾರತವು ಒಂದು ಅಭಿವೃದ್ಧಿಶೀಲ ರಾಷ್ಟ್ರ. ನವೀನತೆಯು ಇಲ್ಲಿ ಅಭಿವೃದ್ಧಿಯ ಪ್ರತೀಕ ಇದಕ್ಕಾಗಿ ನಮ್ಮ ಶಿಕ್ಷಣ ತಜ್ಞರು, ಶಿಕ್ಷಣದಲ್ಲಿ ನವೀನ ತಂತ್ರಜ್ಞಾನವು ಅತ್ಯಂತ ಸೂಕ್ತವಾದ ಮಾರ್ಗವಾಗಿದೆ ಎಂದು ಹೇಳಿರುವುದಾದರೂ ನಮ್ಮ ದೇಶದಲ್ಲಿ ತನ್ನದೇ ಆದ ಸಮಸ್ಯೆಗಳಿವೆ. ಇವುಗಳಿಂದ ಶಿಕ್ಷಣದಲ್ಲಿ ತಂತ್ರಜ್ಞಾನದ ಅಳವಡಿಕೆಗೆ ಅನೇಕ ಅಡೆತಡೆಗಳಿವೆ. ಅವುಗಳೆಂದರೆ –

1. ದೇಶದಲ್ಲಿ ಏಕರೂಪ ಶಿಕ್ಷಣದ ಅಭಾವವಿದೆ. ಇದರಿಂದ ನವೇನ ಶೈಕ್ಷಣಿಕ ವಿಧಾನಗಳನ್ನು ಅಳವಡಿಸುವುದು ಕಷ್ಟಕರವಾದ ಕೆಲಸವಾಗಿದೆ.

2. ಶೇ. 80ರಷ್ಟು ಜನ ಕೃಷಿ ಸಾಗುವಳಿಯಲ್ಲಿ ತೊಡಗಿ ಸಾಮಾನ್ಯ ಶಿಕ್ಷಣಕ್ಕೆ ಮಹತ್ವಕೊಡುತ್ತಿಲ್ಲ.

3. ಬಡತನದಿಂದ ಅಸಂಖ್ಯಾತ ಮಕ್ಕಳು ಶಾಲೆಗಳಿಗೆ ಹೋಗುತ್ತಿಲ್ಲ. ಇದರಿಂದ ಶಿಕ್ಷಣದ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ.

4. ಶಿಕ್ಷಕರಿಗೆ ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಪರಿಪೂರ್ಣ ತರಬೇತಿ ಇಲ್ಲ.

**ಉಪಸಂಹಾರ:** ನಮ್ಮ ದೇಶದಲ್ಲಿ ಅನೇಕ ಅಡೆತಡೆಗಳು ಮತ್ತು ತೊಂದರೆಗಳು ಇದ್ದರೂ ಅಭಿವೃದ್ಧಿಪರರಾದ ನಮಗೆ ಉತ್ತಮ ಶಿಕ್ಷಣಬೇಕು. ವ್ಯಕ್ತಿತ್ವ ಕಲಿಕೆಗೆ ವಿಶೇಷ ಮಹತ್ವ ಬರಬೇಕು. ಶಿಕ್ಷಕ ತನ್ನ ಮಕ್ಕಳಿಗೆ ಭವಿಷ್ಯದ ಅರಿವನ್ನು ಮೂಡಿಸಿ ಅವರಿಗೆ ನವೀನ ಅನುಭವಗಳನ್ನು ಮಾಡಿಕೊಳ್ಳಲು ಅಣಿಯಾಗಬೇಕು. ಇದಕ್ಕೆಲ್ಲಾ ಶೈಕ್ಷಣಿಕ ತಂತ್ರಜ್ಞಾನವು ಇಂದು ಅವಶ್ಯಕವಾಗಿದೆ. ಪ್ರಾಥಮಿಕ ರಂಗದಿಂದ ಹಿಡಿದು ಉನ್ನತ ಶಿಕ್ಷಣ ಸಂಶೋಧನೆಗಳವರೆಗೆ ಶೈಕ್ಷಣಿಕ ತಂತ್ರಜ್ಞಾನವು ಅತ್ಯಂತ ಅಚ್ಚುಕಟ್ಟಾಗಿ ಅಳವಡಿಸಬೇಕಾಗಿದೆ. ಇದಕ್ಕೆ ಅನುಗುಣವಾಗಿ ಶಿಕ್ಷಕ ತರಬೇತಿ ಕೇಂದ್ರಗಳನ್ನು ಪುನರ್ ರಚಿಸಬೇಕಾಗಿದೆ. ಇದರಿಂದ ನಮ್ಮ ಶಿಕ್ಷಣ ತಂತ್ರಜ್ಞರು, ಆಡಳಿತಗಾರರು ಯೋಗ್ಯ ದಿಸೆಯಲ್ಲಿ ವಿಚಾರಿಸಿ ಭಾತರದಲ್ಲಿನ ವಿವಿಧ ರೀತಿಯ ಪರಿಸರಕ್ಕೆ ತಕ್ಕಂತೆ ಶೈಕ್ಷಣಿಕ ತಂತ್ರಜ್ಞಾನವನ್ನು ಶಿಕ್ಷಣ ಕ್ರಮದಲ್ಲಿ ಹೆಣೆಯಬೇಕಾಗಿದೆ.

**ಶಿಕ್ಷಕರಿಗೆ ಉಪಯುಕ್ತ ವೆಬ್‌ಗಳು ,ಆ್ಯಪ್‌ಗಳು**

ದೀಕ್ಷಾ (ಡಿಎಸ್‌ಈಆರ್‌ಟಿ)

ಜ್ಞಾನದೀಪಿಕಾ(kannadabasava.weebly.com)(8,9.10 ನೇ ತರಗತಿ ಸಂಪನ್ಮೂಲ(ಪಿಡಿಎಫ್ ಮತ್ತು ವೀಡಿಯೋ)
ಕನ್ನಡ ದೀವಿಗೆ(ಮಹೇಶ್ ಹಾಸನ ಜಿಲ್ಲೆ)(8,9.10 ನೇ ತರಗತಿ ಸಂಪನ್ಮೂಲ(ಪಿಡಿಎಫ್ ಮತ್ತು ವೀಡಿಯೋ.ಆಡಿಯೋ)
ವಿಡ್‌ಮೇಟ್ (ವೀಡಿಯೋಗಳನ್ನು ಆಡಿಯೋಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಸಹಕಾರಿ)

Inyatrust.com (ಎಲ್ಲಾ ರೀತಿಯ ,ಎಲ್ಲಾ ವಿಷಯಗಳ ಸಂಪನ್ಮೂಲಗಳು)
ಹೈಕ್ (ಸಿರಿ ಕನ್ನಡ ನುಡಿ ಬಳಗ ಗುಂಪು 1000 ಕನ್ನಡ ಶಿಕ್ಷಕರ ಗುಂಪು ಕನ್ನಡ ವಿಷಯಕ್ಕೆ ಸಂಬಂಧಿಸಿ ಚರ್ಚೆಗಳು)
ವಾಟ್ಸಪ್( ಕನ್ನಡ ಶಿಕ್ಷಕರ ಗುಂಪುಗಳು
ಮೇಲ್ (ಎಸ್.ಟಿ.ಎಫ್ ಪೋರಮ್)
ಟೆಲಿಗ್ರಾಮ್ , ಯೂಟ್ಯೂಬ್ , ಗೂಗಲ್
ಈ ಪಾಠಶಾಲಾ , ಜ್ಞಾನಸಿರಿ , ಅಗ್ನಿದಿವ್ಯ ( ಕನ್ನಡ ಮತ್ತು ಇತರ ವಿಷಯಗಳ ಸಂಪನ್ಮೂಲಗಳಿಗಾಗಿ)
ಕನ್ನಡ ಸಾಹಿತ್ಯ ಪರಿಷತ್‌ನ ಆ್ಯಪ್ (ಕನ್ನಡ ಶಬ್ದಗಳ ಅರ್ಥಗಳಿಗಾಗಿ)

# ಪ್ರಶ್ನಾ ಪತ್ರಿಕೆ ರಚನಾ ಸಹಾಯಕ ಕೋಶ –1

| ರೋ ಸಂ | ಪ್ರಶ್ನೆ ಸಂಖ್ಯೆ | ಪ್ರಶ್ನಾ ವಿಧ | ಉದ್ದಿಷ್ಟ | ಪ್ರಶ್ನೆಯ ಸ್ವರೂಪ | ಗದ್ಯ | ಪದ್ಯ | ಪಠ್ಯ ಪೋಷಕ | ಅಪಠಿತ ಗದ್ಯ | ವ್ಯಾಕರಣ | ವಾಕ್ಯ ರಚನೆ | ಒಟ್ಟು ಪ್ರಶ್ನೆಗಳು | ಒಟ್ಟು ಅಂಕಗಳು | ಕಠಿಣತೆ ಮಟ್ಟ |
|---|---|---|---|---|---|---|---|---|---|---|---|---|---|
| I | 1–6 | ಬಹುಆಯ್ಕೆ | ಸ್ಮರಣೆ | ವ.ನಿ | | | | | 1*6=6 | | 6 | 6 | ಸುಲಭ |
| II | 7–10 | ಸಂಬಂಧೀಕರಿಸಿ | ಸ್ಮರಣೆ | ವ.ನಿ | | | | | 1*4=4 | | 4 | 4 | ಸುಲಭ |
| III | 11–17 | ಒಂದು ಅಂಕದ ಪ್ರಶ್ನೆಗಳು | ಸ್ಮರಣೆ | ಕಿ.ಉ–1 | 1*4=4 | 1*2=2 | 1*1=1 | | | | 7 | 7 | ಸುಲಭ |
| IV | 18–27 | 2 ಅಂಕದ ಪ್ರಶ್ನೆಗಳು | ಗ್ರಹಿಕೆ | ಕಿ.ಉ–2 | 2*4=8 | 2*2=4 | 2*4=8 | | | | 10 | 20 | ಸಾಧಾರಣ |
| V | 28–29 | ಕವಿ ಪರಿಚಯ | ಗ್ರಹಿಕೆ | ದೀ.ಉ–1 | 3*1=3 | 3*1=3 | | | | | 2 | 6 | ಸಾಧರಣ |
| VI | 30 | ಛಂದಸ್ಸು | ಗ್ರಹಿಕೆ | ದೀ.ಉ–1 | | | | | 3*1=3 | | 1 | 3 | ಸಾಧರಣ |
| VII | 31 | ಅಲಂಕಾರ | ಗ್ರಹಿಕೆ | ದೀ.ಉ–1 | | | | | 3*1=3 | | 1 | 3 | ಕಠಿಣ |
| VIII | 32 | ಗಾದೆ | ಅಭಿವ್ಯಕ್ತಿ | ದೀ.ಉ–1 | | | | | | 3*1=3 | 1 | 3 | ಸಾಧರಣ |
| IX | 33–38 | ಸಂದರ್ಭಗಳು | ಅಭಿವ್ಯಕ್ತಿ | ದೀ.ಉ–1 | 3*3=9 | 3*3=9 | | | | | 6 | 18 | ಸಾಧಾರಣ |
| X | 39 | ಪದ್ಯ ಕಂಠಪಾಠ | ಸ್ಮರಣೆ | ದೀ.ಉ–2 | | 4*1=4 | | | | | 1 | 4 | ಸುಲಭ |
| XI | 40 | ಪದ್ಯ ಸಾರಾಂಶ | ಪ್ರಶಂಸೆ | ದೀ.ಉ–2 | | 4*1=4 | | | | | 1 | 4 | ಕಠಿಣ |
| XII | 41–42 | 8–10 ವಾಕ್ಯ | ಅಭಿವ್ಯಕ್ತಿ | ದೀ.ಉ–2 | 4*1=4 | 4*1=4 | | | | | 2 | 8 | ಕಠಿಣ |
| XIII | 43 | ಅಪಠಿತ ಗದ್ಯ | ಗ್ರಹಿಕೆ | ದೀ.ಉ–2 | | | | 4*1=4 | | | 1 | 4 | ಸುಲಭ |
| XIV | 44 | ಪತ್ರ ಬರೆಹ | ಅಭಿವ್ಯಕ್ತಿ | ದೀ.ಉ–3 | | | | | | 5*1=5 | 1 | 5 | ಸುಲಭ |
| XV | 45 | ಪ್ರಬಂಧ ಬರೆಹ | ಅಭಿವ್ಯಕ್ತಿ | ದೀ.ಉ–3 | | | | | | 5*1=5 | 1 | 5 | ಕಠಿಣ |
| | | | ಒಟ್ಟು | | (13)28 | (11)30 | (5)9 | (1)4 | (12)16 | (3)13 | 45 | 100 | 30+50+20 |

# ಪ್ರಶ್ನಾ ಪತ್ರಿಕೆ ರಚನಾ ಸಹಾಯಕ ಕೋಶ–2

| ಕ್ರ | ಸ್ಮರಣೆ | | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | | |
|---|---|---|---|---|---|---|---|---|---|---|---|---|
| ಸಂ | ಪ್ರಶ್ನಾ ವಿಧ | ಅಂಕ | ಪ್ರಶ್ನೆ | ಪ್ರಶ್ನಾ ವಿಧ | ಅಂಕ | ಪ್ರಶ್ನೆ | ಪ್ರಶ್ನಾ ವಿಧ | ಅಂಕ | ಪ್ರಶ್ನೆ | ಪ್ರಶ್ನಾ ವಿಧ | ಅಂಕ | ಪ್ರಶ್ನೆ |
| I | ಬಹುಆಯ್ಕೆ | 6 | 6 | – | – | – | – | – | – | – | – | – |
| II | ಸಂಬಂಧೀಕರಿಸಿ | 4 | 4 | – | – | – | – | – | – | – | – | – |
| III | ಒಂದು ಅಂಕದ ಪ್ರಶ್ನೆಗಳು | 7 | 7 | – | – | – | – | – | – | – | – | – |
| IV | – | – | – | 2 ಅಂಕದ ಪ್ರಶ್ನೆಗಳು | 20 | 10 | – | – | – | – | – | – |
| V | – | – | – | ಕವಿ ಪರಿಚಯ | 6 | 2 | – | – | – | – | – | – |
| VI | – | – | – | ಛಂದಸ್ಸು | 3 | 1 | – | – | – | – | – | – |
| VII | – | – | – | ಅಲಂಕಾರ | 3 | 1 | – | – | – | – | – | – |
| VIII | – | – | – | – | – | – | ಗಾದೆ | 3 | 1 | – | – | – |
| IX | – | – | – | – | – | – | ಸಂದರ್ಭ | 18 | 6 | – | – | – |
| X | ಪದ್ಯ ಕಂಠಪಾಠ | 4 | 1 | – | – | – | – | – | – | – | – | – |
| XI | – | – | – | – | – | – | – | – | – | ಸಾರಾಂಶ | 4 | 1 |
| XII | – | – | – | – | – | – | 8–10 ವಾಕ್ಯ | 8 | 2 | – | – | – |
| XIII | – | – | – | ಅಪಠಿತ ಗದ್ಯ | 4 | 1 | – | – | – | – | – | – |
| XIV | – | – | – | – | – | – | ಪತ್ರ ಬರೆಹ | 5 | 1 | – | – | – |
| XV | – | – | – | – | – | – | ಪ್ರಬಂಧ ಬರೆಹ | 5 | 1 | – | – | – |
| | ಒಟ್ಟು | 21 | 18 | ಒಟ್ಟು | 36 | 15 | ಒಟ್ಟು | 39 | 11 | ಒಟ್ಟು | 4 | 1 |